ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರೆದಿದ್ದು)

+ ಶ್ರೀ ಚಂದ್ರಕಾಂತ ಬೆಲ್ಲದ್(ಧಾರವಾಡ) : ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ದೃಷ್ಟಿಯಿಂದ ನಾನು ನಾಲ್ಕು ಬೇಡಿಕೆಗಳ ಮೇಲೆ ಮಾತನಾಡುತ್ತಾ ಕೆಲವು ವಿಷಯಗಳನ್ನು ಸರ್ಕಾರ ಮತ್ತು ಇಲಾಖಾ ಗಮನಕ್ಕೆ ತರಬಯಸುತ್ತೇನೆ. ಈ ಇಲಾಖೆಗಳ ಮಂತ್ರಿಗಳು ಕಾಣುತ್ತಿಲ್ಲ, ಮಾನ್ಯ ತೋಟಗಾರಿಕಾ ಮಂತ್ರಿಗಳು ಮಾತ್ರ ಕಾಣುತ್ತಿದ್ದಾರೆ. ಉಳಿದ ಮಂತ್ರಿಗಳು ಕಾಣುತ್ತಿಲ್ಲ. ಅವರು ಬಂದರೆ ಒಳ್ಳೆಯದು. ಮಾನ್ಯ ಉಪಾಧ್ಯಕ್ಷರೇ, ನಮ್ಮ ರಾಜ್ಯದ ದೃಷ್ಟಿಯಿಂದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಈ ನಾಲ್ಕು ಇಲಾಖೆಗಳು ಬಹಳ ಪ್ರಮುಖವಾದ ಇಲಾಖೆಗಳು. ಈ ದೇಶದ ರಾಜ್ಯದ ಮತ್ತು ಆರ್ಥಿಕ ಭದ್ರತೆಯ ಸಲುವಾಗಿ ಬಹಳ ಮುಖ್ಯವಾದ ಇಲಾಖೆಗಳು. ನಮ್ಮ ರಾಜ್ಯ ಮತ್ತು ದೇಶದಲ್ಲಿರುವ ನೈಸರ್ಗಿಕ ಸಂಪನ್ಮೂಲಗಳನ್ನು ಈ ಇಲಾಖೆಗಳು ಸರಿಯಾಗಿ ಬಳಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಅದರ ಜೊತೆಗೆ ಮಾನವ ಸಂಪನ್ಮೂಲಗಳನ್ನೂ ಸಹ ಸರಿಯಾದ ರೀತಿಯಲ್ಲಿ ಬಳಕೆ ಮಾಡಿಕೊಂಡು ಎಲ್ಲರ ಕೈಗೆ ಕೆಲಸ ಕೊಟ್ಟು ರಾಜ್ಯದ ಮತ್ತು ರಾಷ್ಟ್ರದ ಆರ್ಥಿಕಾಭಿವೃದ್ಧಿಯನ್ನು ಮಾಡುವುದಕ್ಕೆ ಈ ಇಲಾಖೆಗಳ ಪಾತ್ರ ಬಹಳ ಮುಖ್ಯವಾದುದು. ನಮ್ಮ ದೇಶ ಗ್ರಾಮೀಣ ಪ್ರದೇಶಗಳಿಂದ ಕೂಡಿದ ದೇಶ. ನಮ್ಮಲ್ಲಿರತಕ್ಕಂಥ ಕಂದಾಯ ಗ್ರಾಮಗಳು 27,066 ಅದರಲ್ಲಿ ಕಂದಾಯ ಉಪ-ಗ್ರಾಮಗಳು 29,616 ಇವೆ. ಒಟ್ಟು ನಮ್ಮ ಕರ್ನಾಟಕ ರಾಜ್ಯದಲ್ಲಿ 65,682 ಗ್ರಾಮಗಳು ಇವೆ. ಈ ಗ್ರಾಮಗಳಿಂದ ಜನರು ಪಟ್ಟಣಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ ಅದಕ್ಕೆ ಕಾರಣ ಗ್ರಾಮಗಳಲ್ಲಿ ಒಕ್ಕಲುತನ ಇಲ್ಲ. ಅವರು ಮಾಡುವಂತಹ ಕೆಲಸದಲ್ಲಿ ಲಾಭದಾಯಕವಾಗಿಲ್ಲ. ಆದ್ದರಿಂದ ಏನೂ ಉಪಯೋಗ ಇಲ್ಲ ಎಂದು ತಿಳಿದುಕೊಂಡು ಇವತ್ತು ಪಟ್ಟಣ ಪ್ರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಈ ರೀತಿ ಹಳ್ಳಿಗಳಿಂದ ಪಟ್ಟಣಪ್ರದೇಶಗಳಿಗೆ ವಲಸ ಬರುವುದನ್ನು ತಡೆಯಬೇಕಾದರೆ ಈ ದೇಶದ ಬೆನ್ನೆಲುಬು ಆಗಿರುವ ರೈತರಿಗೆ ಮತ್ತು ಈ ದೇಶದಲ್ಲಿರುವ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕೊಟ್ಟು ಅವರನ್ನು ಅಭಿವೃದ್ಧಿ ಮಾಡುವುದಕ್ಕೆ ಈ ಇಲಾಖೆಗಳಿಗೆ ಸರ್ಕಾರ ಸಾಕಷ್ಟು ಹಣಕಾಸಿನ ನೆರವು ನೀಡಬೇಕಾಗುತ್ತದೆ. ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ಸಹ ಹೆಚ್ಚು ಗಮನ ಕೊಡಬೇಕಾಗುತ್ತದೆ. ರಾಷ್ಟ್ರದ ಅಭಿವೃದ್ಧಿಗೆ ಈ 4-5 ಇಲಾಖೆಗಳು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಈಗ ನಾನು ಕೃಷಿಗೆ ಸಂಬಂಧಪಟ್ಟ ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇವತ್ತಿನ ದಿನಸ ನಮ್ಮಲ್ಲಿ ಉತ್ತಮವಾದ ಮಣ್ಣು ವಾತಾವರಣ, ಹವಾಮಾನ ಸಹ ಇದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಉತ್ತಮವಾದ ಮಣ್ಣು, ಹವಾಮಾನ, ಮಲೆನಾಡು ತಪ್ಪಲು ಪ್ರದೇಶ ಸಹ ಇದೆ. ಈ ಉತ್ತಮವಾದ ಮಣ್ಣಿನಿಂದ ಉತ್ತಮವಾದ ಬೆಳೆಯನ್ನೂ ಸಹ ನಾವು ತೆಗೆಯಬಹುದು. ನಮ್ಮ ರಾಜ್ಯದಲ್ಲಿ ಎಲ್ಲಾ ಪ್ರಕಾರಗಳ ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಇದೆ. ನಮ್ಮಲ್ಲಿ ನೀರಾವರಿಗೆ ವಿಫುಲವಾದ ಅವಕಾಶಗಳು ಇವೆ. ಅದರ ಸದುಪಯೋಗವನ್ನು ನಾವು ಮಾಡಿಕೊಳ್ಳಬೇಕಾಗಿದೆ. ರೈತರು ಬೆಳೆದಂತಹ ಬೆಳೆಗೆ ನಾವು ಯೋಗ್ಯವಾದ ಬೆಲೆಯನ್ನು ಕೊಡಬೇಕಾಗುತ್ತದೆ. ಯೋಗ್ಯವಾದ ಬೆಲೆ ಸಿಗುವಂತಹ

ರೀತಿಯಲ್ಲಿ ಸರ್ಕಾರ ಆದ್ಯತೆಯನ್ನು ಕೊಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ನಾವು ನಿರೀಕ್ಷೆ ಮಾಡಿದಂತೆ ಕಳೆದ ಅನೇಕ ವರ್ಷಗಳಿಂದ ಭೂಮಿ ವಿಸ್ತರಣೆ ಹೆಚ್ಚು ಆಗದೆ ಭೂಮಿಯ ವಿಸ್ತರಣೆ ಕಡಿಮೆಯಾಗುತ್ತಿದೆ. ನೀರಾವರಿ ಪ್ರದೇಶ ಹೆಚ್ಚು ಆಗದೆ ನಾವು ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು ಉಪಯೋಗ ಮಾಡಿದರೂ ಸಹ ನಾವು ಕೃಷಿಯಲ್ಲಿ ಏನೂ ಉತ್ಪಾದನೆಯನ್ನು ನಿರೀಕ್ಷೆ ಮಾಡಿದ್ದೆವೋ ಆ ನಿರೀಕ್ಷಿತ ಉತ್ಪಾದನೆ ಆಗಿಲ್ಲ. ಸರಿಯಾದ ಬೆಳೆ ಬಂದಿಲ್ಲ. ನಮ್ಮ ರಾಜ್ಯದಲ್ಲಿ ನಾವು ಎಲ್ಲಾ ಬೆಳೆಗಳನ್ನು ಬೆಳೆಯಬಹುದು ಎನ್ನತಕ್ಕಂಥ ವಿಚಾರವನ್ನು ನಾನು ಈ ಹಿಂದೆ ಹೇಳಿದ್ದೆ. ನಮ್ಮ ರಾಜ್ಯದಲ್ಲಿ ಎಕದಳ ಆಹಾರಪದಾರ್ಥಗಳನ್ನು ಬೆಳೆಯುವುದಕ್ಕೆ ಸಾಕಷ್ಟು ಉತ್ತಮವಾದ ಭೂಮಿ ಹವಾಗುಣ ಇದ್ದರೂ ಸಹ ನಾವು ಇಟ್ಟುಕೊಂಡಿದ್ದ ಗುರಿಯನ್ನು ಇನ್ನೂ ತಲುಪಲು ಆಗಲಿಲ್ಲ. ಕಳೆದ ಅನೇಕ ವರ್ಷಗಳಿಂದ ನಾವು ನಮ್ಮ ಗುರಿಯನ್ನು ಇಟ್ಟುಕೊಂಡಿದ್ದರೂ ಸಹ ಆ ಗುರಿಯನ್ನು ತಲುಪಲು ಆಗಲಿಲ್ಲ. ಅದೇ ರೀತಿ ಎಣ್ಣೆ ಕಾಳುಗಳ ವಿಷಯದಲ್ಲಿಯೂ ಸಹ ನಾವು ಏನು ಗುರಿಯನ್ನು ಇಟ್ಟುಕೊಂಡಿದ್ದೆವೋ ಆ ಗುರಿಯನ್ನು ತಲುಪಲು ಆಗಲಿಲ್ಲ. ಎಣ್ಣೆಕಾಳುಗಳಲ್ಲಿ ನಾವು 8 ಲಕ್ಷ ಟನ್ ಅಷ್ಟು ಕಡಿಮೆ ಆಗಿದೆ. ಅದೇ ರೀತಿ ಹಣಕಾಸಿನ ಬೆಳೆಯಾದ ಕಬ್ಬು 23 ಲಕ್ಷ ಟನ್ ಬೆಳೆಯುವ ಗುರಿ ಇಟ್ಟುಕೊಂಡಿದ್ದರೂ ಸಹ ನಮ್ಮ ಗುರಿಯನ್ನು ತಲುಪಲು ಆಗಲಿಲ್ಲ. ಅದೇ ರೀತಿ ಹತ್ತಿ ಬೆಳೆಯಲ್ಲಿ ನಾವು 3 ಲಕ್ಷ ಟನ್ ಕೊರತೆಯನ್ನು ಕಾಣುತ್ತಿದ್ದೇವೆ.

ಇವೊತ್ತು ನಾವು ಇರುವಂಥ ಭೂಮಿಯಲ್ಲಿ ಸರಿಯಾದಂಥ ರಾಸಾಯನಿಕ ಗೊಬ್ಬರಗಳನ್ನು ಹಾಕಿದಾಗ್ಯೂ ಕೂಡ ಏನೂ ಆಗುತ್ತಿಲ್ಲ. ಗೊಬ್ಬರದ ಉಪಯೋಗದ ಪ್ರಮಾಣವು ಹೆಚ್ಚಾಗುತ್ತಾ ಇದೆ. ಆದರೆ ರೈತರು ಖರ್ಚು ಮಾಡಿದಂಥ ಹಣಕ್ಕೆ ಯಾವ ಪ್ರತಿಫಲ ಸಿಗಬೇಕಾಗಿದೆಯೋ ಅದು ಸಿಗುತ್ತಾ ಇಲ್ಲ. ರೈತರು ಪಟ್ಟಂಥ ಶ್ರಮ ಮತ್ತು ಹಾಕಿದಂಥ ಗೊಬ್ಬರಕ್ಕೆ ಅನುಗುಣವಾಗಿ ಯಾವ ಉತ್ಪನ್ನ ಬರಬೇಕಾಗಿದೆ ಆ ಒಂದು ಇಳುವರಿಯು ಭೂಮಿಯಲ್ಲಿ ಕಡಿಮೆಯಾಗುತ್ತಿರುವುದನ್ನು ನಾವು ಇವೊತ್ತು ಕಾಣುತ್ತಾ ಇದ್ದೇವೆ. ರಾಸಾಯನಿಕ ಗೊಬ್ಬರಗಳ ಉಪಯೋಗದಿಂದಾಗಿ ಭೂಮಿಯ ಫಲವತ್ತತೆಯು ಕಡಿಮೆಯಾಗುತ್ತಾ ಇದೆ. ಇಳುವರಿ ಕಡಿಮೆಯಾಗುವುದರೊಂದಿಗೆ ರೈತರು ಮಾಡಿದ ವೆಚ್ಚಕ್ಕೆ ಕೊರತೆಯುಂಟಾಗುವುದನ್ನು ನಾವು ಕಾಣುತ್ತಾ ಇದ್ದೇವೆ. ಅಂತೆಯೇ ಕ್ರಿಮಿಕೀಟಗಳ ಹಾವಳಿಯಿಂದಾಗಿ ಬೆಳೆಯು ನಾಶವಾಗಿ ರೈತರು ಇವೊತ್ತು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಯನ್ನು ನಾವು ರಾಜ್ಯದಲ್ಲಿ ಕಾಣುತ್ತಾ ಇದ್ದೇವೆ. ಇದು ಬಹಳ ವಿಷಾದದ ಸಂಗತಿ. ರಾಜ್ಯದಲ್ಲಿ ಇದೊಂದು ಐತಿಹಾಸಿಕವಾದ ದುರ್ಘಟನೆಯಾಗಿದೆ ಎಂದು ಹೇಳಬಯಸುತ್ತೇನೆ. ಸರಕಾರವು ಸರಿಯಾದಂಥ ಮುಂಜಾಗರೂಕತಾ ಯೋಜನೆಗಳನ್ನು ಮಾಡಲಿಲ್ಲ ಎಂಬುದೇ ಇದಕ್ಕೆ ಕಾರಣವಾಗಿದ್ದು ರೈತರ ಬಗ್ಗೆ ಹೆಚ್ಚು ಲಕ್ಷ್ಯ ವಹಿಸದೇ ಇರುವುದನ್ನು ನಾವು ಕಾಣುತ್ತಾ ಇದ್ದೇವೆ. ಇವೊತ್ತು ನೀರಿನ ಬಳಕೆಯು ಸದುಪಯೋಗವಾಗುತ್ತಾ ಇಲ್ಲ. ಕೆನಾಲ್‌ಗಳಲ್ಲಿನ ನೀರು ಸರಿಯಾದ ರೀತಿಯಲ್ಲಿ ರೈತರಿಗೆ ಮುಟ್ಟುತ್ತಾ ಇಲ್ಲ. ನೀರು ಎಲ್ಲಿ ಮುಟ್ಟುತ್ತಾ ಇದೆ, ಯಾವ ಬೆಳೆಗಳು ಅಲ್ಲಿ ಬೆಳೆಯುತ್ತಾ ಇವೆ, ಆ ಭೂಪ್ರದೇಶದಲ್ಲಿ ಯಾವ ಬೆಳೆಗಳನ್ನು ಬೆಳೆಯಬಹುದು ಎಂಬುದನ್ನು ನೋಡಬೇಕು. ಅಲ್ಲಿ ಅದಕ್ಕಿಂತಲೂ ಹೆಚ್ಚು ನೀರು ಯುಟಿಲೈಸ್ ಆಗುತ್ತಾ ಇದೆಯೇ ಇಂಬುದನ್ನು ನೋಡಬೇಕು. ಹೀಗಾಗಿ ಅಲ್ಲಿ ಭೂಮಿಯು ಕೆಡುತ್ತಾ

ಇದೆ. ಸವಳು ಭೂಮಿಯಾಗುತ್ತಾ ಇದೆ. ಎಷ್ಟೋ ಭೂಮಿಯು ಇವೊತ್ತು ಬಂಜರಾಗುತ್ತಾ ಇದೆ. ಈ ಕುರಿತು ಸರಕಾರ ಹೆಚ್ಚು ಗಮನವನ್ನು ಕೊಡುತ್ತಾ ಇಲ್ಲ. ಇಲಾಖೆಯವರೂ ಕೂಡ ಗಮನ ಕೊಡುತ್ತಾ ಇಲ್ಲ. ಇದಕ್ಕೆ ಕೃಷಿ ವಿಶ್ವವಿದ್ಯಾಲಯದವರು ಬಹಳಷ್ಟು ಗಮನಕೊಟ್ಟು ಈ ಬಂಜರು ಆಗುತ್ತಿರುವ ಭೂಮಿಯನ್ನು ತಡೆಗಟ್ಟಬೇಕು. ನೀರಿನ ಹೆಚ್ಚು ಬಳಕೆಯಾಗಿ ಭೂಮಿ ಬಂಜರಾಗುತ್ತಿರವುದನ್ನು ತಡೆಯಬೇಕು. ಭೂಮಿಯ ಫಲವತ್ತತೆಯು ನಾಶವಾಗುತ್ತಿರುವ ಬಗ್ಗೆಯೂ ನಾವು ಲಕ್ಷ್ಯ ಕೊಡಬೇಕಾಗಿದೆ. ಹೀಗಾಗಲು ಕೃಷಿವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖೆಯವರು ಕಾರಣ ಎಂದು ಹೇಳಬೇಕಾಗುತ್ತದೆ.

ಇವೊತ್ತು ರೈತರು ಏನಾದರೂ ಮಾಡಿ ಬೆಳೆ ಬೆಳೆಯಬೇಕೆಂದು ನಿಶ್ಚಯಿಸಿದರೆ ಅವರಿಗೆ ಭಾವಿಯಲ್ಲಿ ನೀರು ಸಿಗುತ್ತಾ ಇಲ್ಲ. ಬೋರ್‌ನಲ್ಲಿ ನೀರು ಬರುತ್ತಾ ಇಲ್ಲ ಕೆರೆಕಟ್ಟೆಗಳಲ್ಲಿ ಕೂಡ ನೀರು ಭತ್ತಿ ಹೋಗಿದೆ. ಕೆರೆ ಕಟ್ಟೆಗಳ ಹೂಳನ್ನು ತೆಗೆಸುತ್ತೇವೆಂದು ಸರಕಾರದವರು ಹೇಳುತ್ತಾ ಇದ್ದಾರಯೇ ವಿನಹ ಅದನ್ನು ತೆಗೆಸಲು ಜೆಸಿಬಿ ಮತ್ತಿತರ ಮೆಷಿನರಿಗಳನ್ನು ಕೊಟ್ಟಿಲ್ಲ. ಕೇವಲ ಹೆಸರಿಗೆ ಮಾತ್ರ ಹೂಳು ತೆಗೆಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ನಮ್ಮ ಧಾರವಾಡ ಜಿಲ್ಲೆಯ ಸುತ್ತಮುತ್ತ ಅನೇಕ ಕೆರೆಗಳ ಇದ್ದಾವೆ ಆ ಕೆರೆಗಳ ಹೂಳೆತ್ತಲು ನಾನು ವಿನಂತಿ ಮಾಡಿಕೊಂಡಿದ್ದೇವೆ. ಆದರೆ ಇನ್ನೂ ಅವರಿಗೆ ಜೆಸಿಬಿ ಸಿಗುತ್ತಾ ಇಲ್ಲ. ಸಿಕ್ಕರೂ ಕೂಡ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಅನೇಕ ಸದಸ್ಯರು ಕೂಡ ಮಾತನಾಡಿದ್ದಾರೆ. ಪ್ರಮುಖವಾಗಿ ಕೆರೆಕಟ್ಟೆಗಳಲ್ಲಿ ಹೂಳನ್ನು ಕೂಡಲೇ ತೆಗೆಸಲೇ ಬೇಕು. ಕೆರೆಕಟ್ಟೆಗಳ ರಿಪೇರಿ ಕಾರ್ಯವು ನಡೆಯಬೇಕು. ನೀರಿನ ಜಲಸಂಗ್ರಹಣಾ ಕಾರ್ಯವು ಹೆಚ್ಚಾಗಬೇಕು. ಭೂಮಿಯಲ್ಲಿನ ನೀರಿನ ಪಾತಳಿ ಹೆಚ್ಚಾದರೆ ಓಪನ್‌ವೆಲ್‌ಗಳಲ್ಲಿಯೂ ನೀರು ಬರುವ ಹಾಗೆ ಮಾಡಿದರೆ ಬೋರ್‌ವೆಲ್‌ಗಳಲ್ಲಿಯೂ ಕೂಡ ನೀರು ಬರುತ್ತದೆ. ಇದರ ಮೂಲಕ ರೈತರು ಉತ್ತಮವಾದಂಥ ಕೃಷಿಗೆ ತೊಡಗಲು ಅನುಕೂಲವಾಗುತ್ತದೆ. ಅವನು ಹೆಚ್ಚು ಉತ್ಪಾದನೆ ಮಾಡಲು ಅನುಕೂಲವಾಗುತ್ತದೆ. ರೈತರ ಬಗ್ಗೆ ನಾವು ವಿಚಾರ ಮಾಡುವಾಗ ರಾಜ್ಯದಲ್ಲಿನ ವಿದ್ಯುಚ್ಛಕ್ತಿಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ರೈತರು ಬೆಳೆಯ ಬೇಕೆಂಬ ಆಶೆಯಿಂದ ಪಂಪ್‌ಸೆಟ್‌ಗಳನ್ನು ಅಳವಡಿಸಿ ನೀರಿನ ಸೌಕರ್ಯವಿದ್ದರೂ ಕೂಡ ವಿದ್ಯುಚ್ಛಕ್ತಿ ಇಲ್ಲದೆ, ಸರಬರಾಜು ಸರಿಯಾಗಿಲ್ಲದೆ, ದಿನಕ್ಕೆ 8 ಗಂಟೆಗಳ ಕಾಲ ಕೂಡ ವಿದ್ಯುತ್ ಸರಬರಾಜು ಇಲ್ಲದ ಕಾರಣ, ರೈತರು ಬೆಳೆದ ಪೈರು ಒಣಗಿ ಹೋಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗೆ ರೈತರು ಬೆಳೆದ ಸ್ಟ್ಯಾಂಡಿಂಗ್‌ಕ್ರಾಪ್‌ಗಳನ್ನು ಉಳಿಸುವಂಥಾದ್ದು ಮತ್ತು ರೈತರ ಆದಾಯವನ್ನು ಹೆಚ್ಚಿಸುವ ಕಡೆಗೆ ಸರ್ಕಾರವು ಗಮನಕೊಟ್ಟಿಲ್ಲ. ಯಾವುದೇ ತೊಂದರೆ ರಹಿತ ವಿದ್ಯುಚ್ಛಕ್ತಿಯನ್ನು ರೈತರಿಗೆ ಸರಬರಾಜು ಮಾಡಬೇಕೆಂದು ನಾವು ಸತತವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತಾ ಬಂದಿದ್ದೇವೆ. ಇವೊತ್ತಿನ ದಿವಸ ರೈತರು ತಮ್ಮ ಮಣ್ಣಿನ ಗುಣಧರ್ಮವನ್ನು ಕಾಪಾಡಬೇಕು ಅಂದರೆ, ಮಣ್ಣಿನಲ್ಲಿರುವಂಥ ಲವಣಗಳ ಬಗ್ಗೆ, ಫರ್ಟಿಲಿಟಿ ಬಗ್ಗೆ ತಿಳಿದುಕೊಳ್ಳುವಂತಾಗಲು ಮಣ್ಣುಪರೀಕ್ಷಾ ಕೇಂದ್ರಗಳು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬೇಕಾಗಿವೆ. ಪ್ರತಿ ತಾಲ್ಲೂಕಿನಲಿಯೂ ಅಂಥ ಕೇಂದ್ರಗಳು ಸರಿಯಾಗಿ ಕೆಲಸ ಮಾಡಬೇಕಾಗಿದೆ. ಇವೊತ್ತು ರೈತರು ಮಣ್ಣಿನ ಸ್ಯಾಂಪಲುಗಳನ್ನು ತೆಗೆದುಕೊಂಡು ಹೋದರೆ ಸರಿಯಾದ ಸಮಯದಲ್ಲಿ ಅದರ ಮಾಹಿತಿಗಳನ್ನು ಒದಗಿಸಿಕೊಡುತ್ತಾ ಇಲ್ಲ. ಆದ್ದರಿಂದ ಇಂಥ ಮಾಹಿತಿಗಳನ್ನು ಸಕಾಲದಲ್ಲಿ ಒದಗಿಸಿಕೊಡುವ ಬಗ್ಗೆ ಇಲಾಖೆಯು ನಿಗಾ

ವಹಿಸಬೇಕಾಗಿದೆ. ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಸರಿ ಮಾಡಿ, ಸಾವಯವ ಗೊಬ್ಬರಗಳ ಬಗ್ಗೆ ಮತ್ತು ಎರೆಹುಳುಗಳ ಹಾಗೂ ಮಳೆಹುಳುಗಳ ಉಪಯುಕ್ತತೆಯನ್ನು ಬಳಸಿಕೊಳ್ಳುವ ಬಗ್ಗೆ ವಿಚಾರ ಮಾಡಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಬೆಲ್ಲದರವರು ಬೆಲ್ಲದಷ್ಟೇ ಸ್ವಾದಿಷ್ಟವಾದ ರೀತಿಯಲ್ಲಿ ರುಚಿಕರವಾದ ಭಾಷಣವನ್ನು ಮಾಡುತ್ತಿದ್ದಾರೆ ಅದನ್ನು ಕೇಳಲು ನಮ್ಮ ಕೃಷಿ ಸಚಿವರು ಇಲ್ಲ. ಇಂಥ ಭಾಷಣವನ್ನು ಬಾಯ್‌ಕಟ್ ಮಾಡಿಕೊಂಡು ಹೋಗಿದ್ದಾರೆ. ಇದಾದ ಮೇಲೆ ಅಡಿಕೆಯವರ ಭಾಷಣವಿದೆ. ಅದನ್ನಾದರೂ ಕೇಳಿ ಸದಸ್ಯರು ಮಾಡಿದ ಭಾಷಣವನ್ನು ಕೇಳುವವರು ಮತ್ತು ಬರೆದುಕೊಳ್ಳುವವರು ಯಾರು? ನಮ್ಮಲ್ಲಿ ಬೆಲ್ಲವಿದ್ದ ಕಡೆ ನೊಣಗಳು ಮುತ್ತುತ್ತವೆ ಎಂಬ ಗಾದೆ ಮಾತು ಇದೆ. ಹಾಗೆಯೇ ನೀವು ಮೃದು ಧೋರಣೆ ತಾಳಿದ್ದರಿಂದ ಮುಖ್ಯಮಂತ್ರಿಯವರೂ ಕೂಡ ಬರುತ್ತಾ ಇಲ್ಲ. ಸ್ವಲ್ಪ ಜೋರು ಮಾಡಿ.

ಶ್ರೀ ಚಂದ್ರಕಾಂತ ಬೆಲ್ಲದ : ಸನ್ಮಾನ್ಯ ಮುಖ್ಯ ಮಂತ್ರಿಯವರು ಇಂಥ ವಿಚಾರಗಳ ಬಗ್ಗೆ ಗಮನಕೊಡುತ್ತಾರೆಂದು ನಾವು ಅಂದುಕೊಂಡಿದ್ದೇವೆ. ಈಗ ಉಪಮುಖ್ಯಮಂತ್ರಿಗಳು ಆಗಮಿಸುತ್ತಿದ್ದಾರೆ. ಬಹಳ ಸಂತೋಷ, ಅವರಾದರೂ ಈ ಬಗ್ಗೆ ಗಮನಕೊಡಲಿ...

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ರುಚಿಕರವಾದ ಮತ್ತು ಸ್ವಾರಸ್ಯಕರವಾದ ಭಾಷಣವನ್ನು ಮಾಡುತ್ತಿದ್ದಾರೆ. ಸರಕಾರಕ್ಕೆ ಅಂಕಿಸಂಖ್ಯೆಗಳ ಮೂಲಕ ಹೇಳುತ್ತಿದ್ದಾರೆಯಾದರೂ ಯಾರೂ ಸರಕಾರದಿಂದ ಅದನ್ನು ಅಲಿಸುತ್ತಾ ಇಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಮಾನ್ಯ ಉಪಮುಖ್ಯಮಂತ್ರಿಯವರು ಇದ್ದರೂ ಕೃಷಿ ಸಚಿವರು ಉತ್ತರ ಕೊಡಬೇಕೆಂಬ ದೃಷ್ಠಿಯನ್ನು ಗಮನಿಸಬೇಕು.

ಉಪಾಧ್ಯಕ್ಷರು : ತಾವು ಕುಳಿತುಕೊಳ್ಳಿ, ಮಾನ್ಯ ಉಪಮುಖ್ಯಮಂತ್ರಿಯವರು ಬಂದಿದ್ದಾರೆ. ಅವರು ಗಮನಿಸುತ್ತಾರೆ. ಬೆಲ್ಲದ್‌ರವರು ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಚಂದ್ರಕಾಂತ ಬೆಲ್ಲದ : ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ನಮ್ಮ ರೈತರು ಕಡಿಮೆ ಮಾಡುವ ದೃಷ್ಟಿಯಲ್ಲಿ ಅವರಿಗೆ ಕಾಂಪೋಸ್ಟ್ ಗೊಬ್ಬರ, ಹಸಿರೆಲೆ ಗೊಬ್ಬರ, ಎರೆಹುಳುಗಳೊಬ್ಬರ ಅಣುಜೀವಿಗೊಬ್ಬರ ಮುಂತಾದವುಗಳ ಬಗ್ಗೆ ಮಾಹಿತಿ ನೀಡಬೇಕಾಗಿದೆ. ನಮ್ಮ ಹಿರಿಯರ ಕಾಲದಿಂದಲೂ ಕೃಷಿಯನ್ನು ಈ ಮೂಲಕ ಮಾಡಿ ಭೂಮಿಯಲ್ಲಿ ಫಲವತ್ತತೆಯನ್ನು ಉಂಟುಮಾಡಿಕೊಂಡು ಬೆಳೆಯನ್ನು ಚೆನ್ನಾಗಿ ಬೆಳೆಸಿ ಉತ್ಪಾದನೆಯನ್ನು ಮಾಡಿಕೊಂಡು ಬಂದಿದ್ದರು. ಆ ದೃಷ್ಟಿಯನ್ನು ನಾವು ಪುನಃ ಉಪಯೋಗಿಸಿಕೊಂಡು ಆ ಗೊಬ್ಬರಗಳನ್ನು ಬಳಸಿಕೊಳ್ಳುವ ಬಗ್ಗೆ ರೈತರವನ್ನು ತೊಡಗಿಸಬೇಕಾಗಿದೆ ಅದಕ್ಕಾಗಿ ಕೃಷಿ ವಿಸ್ತರಣಾ ಇಲಾಖೆಯವರು ಹೆಚ್ಚು ಗಮನಕೊಟ್ಟು ಅದರ ಬಗ್ಗೆ ಸಾಕಷ್ಟು ಪ್ರಯತ್ನಗಳನ್ನು ಮಾಡಬೇಕಾಗಿದೆ. ಇನ್ನು ಕೀಟನಾಶಕಗಳ ಬಗ್ಗೆ ಹೇಳುವುದಾದರೆ, ಕ್ರಿಮಿಕೀಟಗಳ ಸಂಖ್ಯೆಯು ರಾಸಾಯನಿಕ ಗೊಬ್ಬರಗಳ ಬಳಕೆ ಹಾಗೂ ಬೆಳೆಗಳ ಸಂಕೀರ್ಣದಿಂದ, ಇವೊತ್ತು ಹೈ ಈಲ್ಡಿಂಗ್

ವೆರೈಟೀಸ್ ಏನು ಬಂದಿದ್ದಾವೆ ಅವುಗಳೆಲ್ಲವುಗಳ ಹೆಚ್ಚು ಉಪಯೋಗದ ಬೆಳವಣಿಗೆಯನ್ನು ನಾವು ಕಾಣುತ್ತಾ ಇರುವಾಗ, ಅದರ ಜೊತೆಗೇ ಹುಳುಗಳ ಬಾಧೆ ಮತ್ತು ರೋಗಗಳ ಬಾಧೆ ಸಾಕಷ್ಟು ಹೆಚ್ಚುತ್ತಾ ಇದೆ. ಈಗಾಗಲೇ ಅದರ ದುಷ್ಪರಿಣಾಮವನ್ನು ಕಾಣುತ್ತಾ ಇದ್ದೇವೆ. ಕ್ರಿಮಿಕೀಟಗಳಿಗೆ ಸಿಲೀಂದ್ರನಾಶಕಗಳೇ ಆಗಲಿ, ಮತ್ತಿತರ ತಡೆಗಟ್ಟುವ ಔಷಧಿಗಳು ಮಾರ್ಕೆಟ್‌ನಲ್ಲಿ ಸರಿಯಾಗಿ ದೊರೆಯುತ್ತಾ ಇಲ್ಲ. ಅವುಗಳಲ್ಲಿಯೂ ನಕಲಿ ಔಷಧಿಗಳು ಬಂದು ರೈತರು ಹಾಳಾಗುತ್ತಾ ಇದ್ದಾನೆ. ಒಂದು ಕಡೆ ರಾಸಾಯನಿಕ ಗೊಬ್ಬರದ ಬಳಕೆಯಿಂದ ಹಾಳಾಗುತ್ತಾ ಇದ್ದಾನೆ. ನೀರಿನ ಸರಿಯಾದ ಪೂರೈಕೆಯಿಲ್ಲದೆಯೂ ಹಾಳಾಗುತ್ತಾ ಇದ್ದಾನೆ. ವಿದ್ಯುಚ್ಛಕ್ತಿಯನ್ನು ಸರಕಾರದವರು ಸರಿಯಾಗಿ ಪೂರೈಸದೇ ಇದ್ದ ಕಾರಣ ಹಾಳಾಗುತ್ತಾ ಇದ್ದಾನೆ. ಇದೆಲ್ಲಕ್ಕೂ ಮಿಗಿಲಾಗಿ ಕ್ರಿಮಿಕೀಟ ನಾಶಕ ಔಷಧಿಗಳನ್ನು ಮಾರಾಟ ಮಾಡುವವರೂ ಕೂಡ ನಕಲಿ ಔಷಧಿಗಳನ್ನು ಕೊಟ್ಟು ರೈತರನ್ನು ಹಾಳು ಮಾಡುತ್ತಾ ಇದ್ದಾರೆ. ಈ ವಿಚಾರಗಳ ಬಗ್ಗೆ ಸರಕಾರದವರ ಸರಿಯಾದ ನಿಯಂತ್ರಣವಿಲ್ಲ. ಪೆಸ್ಟಿಸೈಡ್ ಮ್ಯಾನುಫ್ಯಾಕ್ಚರಿಂಗ್ ಕಂಪನಿಗಳು ಏನಿದ್ದಾವೆ, ಇದನ್ನು ತಯಾರು ಮಾಡುವ ಕಂಪನಿಗಳೇನಿದ್ದಾವೆ, ಅಲ್ಲಿ ನಾವು ಸರಿಯಾದ ನಿಯಂತ್ರಣವನ್ನು ಇಡಬೇಕು. ಅನೇಕ ಕಂಪನಿಗಳಿಲ್ಲ, ಫಾರ್ಮುಲೇಷನ್ ಮಾಡುವಂಥ ಯಾವುದೇ ಉಪಕರಣಗಳಲ್ಲಿ. ಅಂಥವರೂ ಕೂಡ ಲೈಸನ್ಸ್ ತೆಗೆದುಕೊಂಡಿದ್ದಾರೆ. ಬೇರೆ ಬೇರೆ ನಕಲಿ ಬ್ರಾಂಡ್‌ಗುಳು ಮಾರ್ಕೆಟ್‌ನಲ್ಲಿ ಬರುತ್ತಿವೆ. ಮೂಲಭೂತವಾಗಿ ಯಾವ ಕಂಪನಿಯವರು ತಯಾರು ಮಾಡಿ ಮಾರ್ಕೆಟ್‌ನಲ್ಲಿ ಬರುತ್ತಾ ಇದ್ದಾರೋ, ಅವರಲ್ಲಿ ಯಾವ ಇನ್‌ಫ್ರಾಸ್ಟ್ರಕ್ಚರ್ ಇದೆ. ತಾಂತ್ರಿಕ ತಜ್ಞರ ಸಿಬ್ಬಂಧಿ ಇದೆ, ಅವರಲ್ಲಿ ಯಾವ ಇನ್‌ಪುಟ್ಸ್ ಇವೆ, ಮೆಶಿನರಿಗಳು ಇವೆ, ಮುಂತಾಗಿ ಎಲ್ಲವನ್ನೂ ಪರಿಶೀಲಿಸಿ ಅಂಥವರು ಸರಿಯಾದ ಔಷಧಿಗಳನ್ನು ಮಾರ್ಕೆಟ್‌ಗೆ ಬಿಡುಗಡೆ ಮಾಡುತ್ತಾರೋ ಎಂಬುದನ್ನು ನೋಡಿ ನಿಯಂತ್ರಣ ಮಾಡಬೇಕಾಗಿದೆ. ಈ ವಿಚಾರದಲ್ಲಿ ನಮ್ಮ ಕೃಷಿ ಇಲಾಖೆಯು ಬಹಳಷ್ಟು ನಿರ್ಲಕ್ಷ ಮಾಡುತ್ತಿದೆ. ಅದರಿಂದಾಗಿ ಅನೇಕ ಕಂಪನಿಗಳು ಪರಿಣಾಮ ಬೀರದ, ನಕಲಿ ಔಷಧಿಗಳನ್ನು ರೈತರಿಗೆ ಒದಗಿಸಿ ರೈತರನ್ನು ನಾಶ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ಇಂಥ ದುಸ್ಥಿತಿಗೆ ತಂದಿರುವುದನ್ನು ನಾವು ಕಾಣುತ್ತಾ ಇದ್ದೇವೆ. ಬೀಜಗಳ ಉತ್ಪಾದನೆ ವಿಚಾರ. ಬೀಜಗಳ ಉತ್ಪಾದನೆಯಲ್ಲಿ ಸಹ ತಳಿಗಳ ಸಂಕೀರ್ಣ ಬೀಜಗಳ ಬೇಡಿಕೆ ಏನು ಇದೆ. ಸರಿಯಾದ ವೇಳೆಗೆ ಎಷ್ಟು ಪ್ರಮಾಣದಲ್ಲಿ ನಮ್ಮ ರೈತರಿಗೆ ಬೀಜಗಳು ಬೇಕು, ಏಕದಳ ಧಾನ್ಯದ ಹೈಬ್ರಿಡ್ ತಳಿಗಳೇ ಆಗಲಿ, ದ್ವಿದಳ ಧಾನ್ಯಗಳ ಹೈಬ್ರಿಡ್ ತಳಿಗಳೇ ಆಗಲಿ, ಅಥವಾ ಇಲ್ಲಿ ನಮ್ಮ ಸ್ಥಳೀಯ ತಳಿಗಳು ಆಗಲಿ, ಎಣ್ಣೆಕಾಳಿನ ಬೀಜವಾಗಲೀ ಇವು ಯಾವುದೇ ವೇಳೆಗೆ ಸರಿಯಾಗಿ ನಮ್ಮ ಕೃಷಿ ಇಲಾಖೆಯಿಂದಾಗಲೀ ಅಥವಾ ನಮ್ಮ ಬೀಜದಿಂದಾಗಲೀ ಮಾರ್ಕೆಟ್‌ನಲ್ಲಿ ಲಭ್ಯವಾಗುತ್ತಿಲ್ಲ. ಇವತ್ತು ನಾನು ಇವತ್ತು ನಮ್ಮ ಕೃಷಿ ಇಲಾಖೆಗೆ ಸಂಬಂಧಿಸಿದ ಹಾಗೆ ಅನೇಕ ಫಾರ್ಮ್‌ಗಳಿವೆ. ಇಲ್ಲಿ ಇವತ್ತೇನು ಪ್ರಯೋಗಗಳು ನಡೆಯುತ್ತಿದ್ದಾವೆ; ಆ ಫಾರ್ಮ್‌ನಲ್ಲಿ ಬೀಜ ಉತ್ಪಾದನೆ ಮಾಡುತ್ತಿದ್ದಾರೋ ಹೇಗೆ? ಇವತ್ತು ನಾನು ಒಂದು ವಿನಂತಿಯನ್ನು ತಮ್ಮ ಮೂಲಕ ಮಾನ್ಯ ಕೃಷಿ ಸಚಿವರಲ್ಲಿ ಮಾಡುತ್ತಿದ್ದೇನೆ. ಇವೆಲ್ಲಾ ಫಾರ್ಮ್‌ಗಳನ್ನು ನೀವು ಕೃಷಿ ವಿಶ್ವವಿದ್ಯಾಲಯಕ್ಕೆ ಕೊಟ್ಟು ಬಿಡಿ. ಬೀಜೋತ್ಪಾದನೆ ಕಾರ್ಯವನ್ನು ಕೃಷಿ ವಿಶ್ವವಿದ್ಯಾಲಯಕ್ಕೆ ಕೊಟ್ಟು ಬಿಡಿ. ಬೀಜೋತ್ಪಾದನೆ ಕಾರ್ಯವನ್ನು ಕೃಷಿ ವಿಶವಿದ್ಯಾನಿಲಯ ತೆಗೆದುಕೊಳ್ಳಲಿ. ಸಂಶೋಧನೆ ಕಾರ್ಯವನ್ನು ಕೃಷಿ ವಿಶ್ವವಿದ್ಯಾಲಯ ತೆಗೆದುಕೊಳ್ಳಲಿ. ಕೃಷಿ ಇಲಾಖೆ ಕೇವಲ ವಿಸ್ತರಣಾ ಕಾರ್ಯವನ್ನು ಮಾಡಲಿ. ಇವತ್ತು ರೈತರಿಗೆ ಹೊಸ

ಹೊಸ ವಿಷಯವಾಗಿ ಈ ತಾಂತ್ರಿಕ ಅಭಿಪ್ರಾಯವನ್ನು ತೆಗೆದುಕೊಂಡು ಕೃಷಿ ವಿಶ್ವವಿದ್ಯಾಲಯದ ಜೊತೆಗೆ ಹೊಂದ್ವಾಣಿಕೆ ಮಾಡಿಕೊಂಡು ಅವರಲ್ಲಿ ಸರಿಯಾದಂತಹ ತರಬೇತಿಗಳನ್ನು ಪಡೆದುಕೊಳ್ಳಬೇಕು. ಇವತ್ತು ರೈತರಿಗೆ ತರಬೇತಿ, ಮಹಿಳೆಯರಿಗೆ ತರಬೇತಿ ಕೊಡುವುದರ ಜೊತೆಗೆ ನಮ್ಮ ವಿಸ್ತರಣಾ ಅಧಿಕಾರಿಗಳು, ಯಾವ್ಯಾವ ಹಂತದಲ್ಲಿ ಕೆಲಸ ಮಾಡುತ್ತಿದ್ದಾರೆ, ಅವರಿಗೆ ಸರಿಯಾದಂತಹ ತರಬೇತಿಯನ್ನು ಕೊಡಬೇಕು. ಇಮ್ಮೀಡಿಯಟ್ ಆಗಿ ಮಾರ್ಕೆಟ್‌ನಲ್ಲಿರುವಂತಹ ಸಮಸ್ಯೆಗಳ ಬಗ್ಗೆ ಪರಿಹಾರ ಮಾಡುವಂಥದ್ದು ಆಗಬೇಕು. ರೈತನ ಸಮಸ್ಯೆಗಳನ್ನು ತಿಳಿದು ಕೊಂಡು ವಿಶ್ವವಿದ್ಯಾನಿಲಯಗಳಿಂದ ಸಂಶೋದಕರಿಂದ, ವಿಜ್ಞಾನಿಗಳಿಂದ ಅವರಿಗೆ ಸರಿಯಾದ ಪರಿಹಾರ ಸಿಗುವಂತಹ ಕಾರ್ಯ ಇವತ್ತು ಕೃಷಿ ವಿಶ್ವವಿದ್ಯಾಲಯದಿಂದ ನಡೆಯಬೇಕು. ಅದಕ್ಕೆ ವಿಸ್ತರಣಾ ಸಿಬ್ಬಂದಿ ಆ ಕಾರ್ಯವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) : ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ಬೆಲ್ಲದ್ ಅವರು ಗಂಭೀರವಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಕೃಷಿ ಸಚಿವರು ಇದ್ದಾರೆ. ಬಹಳ ಗಂಭೀರವಾಗಿ ವಿಚಾರಗಳನ್ನು ತೆಗೆದುಕೊಳ್ಳುತ್ತಿದ್ದೀರಿ. ಆದರೆ ಕೃಷಿ ಇಲಾಖೆಯ ನಿರ್ದೇಶಕರು ಇದ್ದಾರಾ? ಮಾನ್ಯ ಸದಸ್ಯರು ಇಂತಹ ವಿಚಾರಗಳನ್ನು ಹೇಳುವಾಗ ಅವರು ಇದನ್ನು ಗಮನಿಸಬೇಕು. ಇಷ್ಟೂ ಕೂಡ ಅವರಿಗೆ ಗಂಭೀರತನ ಇಲ್ಲದಿದ್ದರೆ ಹೇಗೆ? ಕೃಷಿ ಇಲಾಖೆಯ ಮೇಲೆ ಚರ್ಚೆ ನಡೆಯುತ್ತಿರುವಾಗ ಬಂದು ಕುಳಿತುಕೊಳ್ಳಬೇಕೆಂಬ ಇಚ್ಛೆ ಇಲ್ಲದೇ ಹೋದರೆ ನಾವು ಏನೆಂದು ಹೇಳಬೇಕು. ಕೃಷಿ ಸಚಿವರು ಇದ್ದಾರೆ, ಅವರು ಬರೆದು ಕೊಳ್ಳುತ್ತಾರೆ ಆದರೆ ನಿರ್ದೇಶಕರಿಗೆ ಇನ್ನೇನು ಕೆಲಸ ಇದೆ? ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ಡಿಮ್ಯಾಂಡ್ಸ್ ಬಗ್ಗೆ ಮಾತನಾಡುತ್ತಿರುವಾಗ ಅವರು ಇಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಏನು ಕಷ್ಟ ಇದೆ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ನಾನು ಗಮನಿಸದ್ದೇನೆ. ಕೃಷಿ ನಿರ್ದೇಶಕರಿಗೆ ಎಚ್ಚರಿಕೆಯನ್ನು ಕೂಡ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಮಾನ್ಯ ಸುರೇಶ್‌ಕುಮಾರ್ ಅವರು ಹೇಳಿರತಕ್ಕದ್ದು ನಿಜ. ನಾವು ಮಂತ್ರಿಗಳಾರಿರತಕ್ಕವರು ಉತ್ತರ ಕೊಡುತ್ತೇವೆ. ಆದರೆ ಕಾರ್ಯಗತ ಮಾಡತಕ್ಕವರು ಅಧಿಕಾರಿಗಳು. ಅವರೂ ಸಹ ಈ ಸದನದಲ್ಲಿ ಮಾನ್ಯ ಸದಸ್ಯರುಗಳು ಏನು ಹೇಳುತ್ತಾರೆ ಎನ್ನತಕ್ಕದ್ದನ್ನು ಗಮನಿಸಬೇಕಾದ್ದು ಅತಿ ಅವಶ್ಯಕ. ಏಕೆಂದರೆ ನೇರವಾಗಿ ಕಾರ್ಯಗತ ಮಾಡತಕ್ಕವರು. ನಾವೆಲ್ಲಾ ಹೇಳತಕ್ಕವರು. ಆದರೆ ಅವರು ಇರಬೇಕಾದ್ದು ಅತಿ ಅವಶ್ಯಕ.

ಉಪಾಧ್ಯಕ್ಷರು : ಈಗ ಅವರಿಗೆ ಬರಲು ಹೇಳಿ ಕಳುಹಿಸಿ.

ಶ್ರೀ ಸಿ. ಬೈರೇಗೌಡ : ಅವರು ಬರಲೇ ಬೇಕಾಗಿತ್ತು. ಅವರಿಗೆ ತೀವ್ರವಾದ ಎಚ್ಚರಿಕೆಯನ್ನು ಈ ಸಂಧರ್ಭದಲ್ಲಿ ಕೊಡುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ತಾವು ಈ ಲೋಪವನ್ನು ಗಮನಿಸಿದ್ದಕ್ಕೆ ತಮಗೆ ಧನ್ಯವಾದಗಳು.

ಉಪಾಧ್ಯಕ್ಷರು : ಮಾನ್ಯ ಬೆಲ್ಲದ್ ಅವರು ಬೇಗ ಮುಗಿಸಬೇಕು. ಬೇರೆಯವರಿಗೂ ಸಮಯ ಕೊಡಬೇಕಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಕಾರ್ಯದರ್ಶಿಯವರಿಗೂ ಹೆಚ್ಚಿನ ಜವಾಬ್ದಾರಿ ಇರುತ್ತದೆ.

ಶ್ರೀ ಸಿ. ಬೈರೇಗೌಡ : ಕಾರ್ಯದರ್ಶಿಗಳ ಗೈರು ಹಾಜರಿಯನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಅವರಿಗೆ ಹೇಳಿದ್ದೆ. ಅಂದರೆ ಬೇರೆ ಅಧಿಕಾರಿಗಳು ಇದ್ದಾರೆ. ನಮ್ಮ ಅಡಿಷನಲ್ ಡೈರೆಕ್ಟರ್ಸ್ ಇದ್ದಾರೆ, ನಮ್ಮ ಕೃಷಿ ವಿಶ್ವವಿದ್ಯಾಲಯದ ಅಧಿಕಾರಿಗಳು ಇದ್ದಾರೆ. ಡೈರೆಕ್ಟರ್ ಆಫ್ ರೀಸರ್ಚ್ ಎಲ್ಲರೂ ಇದ್ದಾರೆ. ಅವರು ಗಮನಿಸುತ್ತಿದ್ದಾರೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಬೀಜದ ಅಗತ್ಯತೆಯನ್ನು ಪೂರೈಸುವಂತಹ ಕಾರ್ಯ ಕೃಷಿ ಇಲಾಖೆಯ ಮೇಲಿದೆ. ಕೃಷಿ ಇಲಾಖೆ ರೈತರಿಗೆ ಬೇಕಾದಂತಹ ಬೀಜಗಳನ್ನು ಸರಿಯಾದ ವೇಳೆಗೆ ಪ್ರತಿ ಒಂದು ಕಡೆಗೆ ಲಭ್ಯವಾಗುವಂತೆ ನೋಡಿಕೊಳ್ಳಬೇಕಾದಂತಹ ಅಗತ್ಯತೆ ಇದೆ. ಆ ದೃಷ್ಟಿಯಿಂದ ಹೊಸ ಹೊಸ ಬೀಜಗಳನ್ನು ಇವತ್ತು ಓಪನ್ ಮಾರ್ಕೆಟ್‌ನಲ್ಲಿ ಅನೇಕ ಖಾಸಗಿ ಕಂಪನಿಯವರು ಉತ್ತಮವಾದಂತಹ ಬೀಜಗಳನ್ನು ಕೊಡುತ್ತಿದ್ದಾರೆ. ಆದರೆ ರೈತರಿಗೆ ಇವತ್ತು ವಿಶ್ವಾಸ ಇರುವುದು ನಮ್ಮ ಕರ್ನಾಟಕ ಬೀಜ ನಿಗಮದ ಮೇಲೆ. ಅವರು ಸಾಕಷ್ಟು ಪ್ರಮಾಣದಲ್ಲಿ ಬೀಜೋತ್ಪಾದನೆಗಳನ್ನು ಮಾಡಿ ಮಾರ್ಕೆಟ್‌ನಲ್ಲಿ ಸರಿಯಾದ ವೇಳೆಗೆ ಲಭ್ಯ ಮಾಡಿಕೊಟ್ಟಿದ್ದರೆ, ಪ್ರಮಾಣಿತವಾದಂತಹ ಬೀಜಗಳು ಲಭ್ಯವಾಗಿದ್ದರೆ. ಅವರು ಬೇರೆ ಕಡೆಗೆ ಹೋಗುವಂತಹ ಅವಶ್ಯಕತೆ ಬೀಳುವುದಿಲ್ಲ. ಖೊಟ್ಟಿ ಬೀಜಗಳನ್ನು ತೆಗೆದುಕೊಳ್ಳುವಂತಹ ಅವಶ್ಯಕತೆ ಬೀಳುವುದಿಲ್ಲ. ಖೊಟ್ಟಿ ಬೀಜಗಳಿಂದ ರೈತ ಮೋಸ ಆಗುವಂತಹ ಪರಿಸ್ಥಿತಿಗೆ ಬರುವುದಿಲ್ಲ. ಆದ್ದರಿಂದ ಜವಾಬ್ದಾರಿ ವಹಿಸಬೇಕಾಗಿತ್ತು. ಆ ಜವಾಬ್ದಾರಿ ಕೃಷಿ ಇಲಾಖೆ ವಹಿಸಬೇಕಾಗಿತ್ತು. ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನೂರಕ್ಕೆ ನೂರು ಇವತ್ತು ಕೃಷಿಯ ಬೆಳವಣಿಗೆಗೆ ಕೃಷಿ ವಿಶ್ವವಿದ್ಯಾಲಯಗಳೇ ಇವೆಲ್ಲಾ ಬೀಜಗಳ ಉತ್ಪಾದನೆ ಮಾಡಲು ಒಂದು ಅವಕಾಶವನ್ನು ಮಾಡಿಕೊಡಬೇಕು. ಅವರಿಗೆ ಹೆಚ್ಚಿನ ಹಣವನ್ನು ಒದಗಿಸಬೇಕು. ಅವರಿಗೆ ಹೆಚ್ಚಿಗೆ ಹಣವನ್ನು ವಹಿಸಿ ನಮ್ಮ ರಾಜ್ಯದ ಬೇಡಿಕೆಯ ಪ್ರಕಾರ ಬೀಜೋತ್ಪಾದನೆ ಮಾಡಲಿಕ್ಕೆ ಸರ್ಕಾರ ಗಮನ ಹರಿಸಬೇಕು ಎನ್ನುವುದನ್ನು ನಾನು ವಿನಂತಿಸುತ್ತಿದ್ದೇನೆ. ಅಲ್ಲದೆ ರೈತ ಬೆಳೆದಂತಹ ಮಾಲುಗಳಿಗೆ ಸರಿಯಾದಂತಹ ಸ್ಪರ್ಧೆಗಳನ್ನು ಏರ್ಪಡಿಸಬೇಕಾಗಿದೆ.

ಉಪಾಧ್ಯಕ್ಷರು : ಮಾನ್ಯ ಬೆಲ್ಲದ್‌ರವರೇ ತಾವು ಮುಗಿಸಬೇಕು. ಒಂದು ಗಂಟೆ 25 ನಿಮಿಷ ಮಾತಾನಾಡಿದ್ದೀರಿ; ಬೇರೆಯವರಿಗೆ ಮಾತನಾಡಲು ಅವಕಾಶ ಕೊಡಬೇಕು. ನೀವು ಒಬ್ಬರೇ ಸಮಯ ತೆಗೆದುಕೊಂಡರೆ ಉಳಿದವರಿಗೆ ಸಮಯ ಬೇಕಲ್ಲ!

ಶ್ರೀ ಎಸ್. ಸುರೇಶ್ ಕುಮಾರ್ : ಲೆಕ್ಕದಲ್ಲಿ ವ್ಯತ್ಯಾಸ ಆಗಿದೆ. ಊಟಕ್ಕೆ ಬಿಡುವ ಮುಂಚೆ ಅವರು ಶುರು ಮಾಡಿದ್ದಾರೆ.

ಉಪಾಧ್ಯಕ್ಷರು : ಮೊದಲಿಗೆ 45 ನಿಮಿಷ ಮಾತನಾಡಿದ್ದಾರೆ. ನಮ್ಮ ಹತ್ತಿರ ಸಮಯ ಇಲ್ಲ ರೆಕಾರ್ಡ್ ಇದೆ. ಈಗ ತಾವು ಬೇಗ ಮುಕ್ತಾಯ ಮಾಡಿ. ಒಳ್ಳೆಯ ವಿಷಯಗಳನ್ನು ತಾವು ಹೇಳಿದ್ದೀರಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ನಾನು ಕೇಳಿಕೊಳುತ್ತಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಇವತ್ತು ಎಷ್ಟೋ ಸಂಶೋಧನಾ ಕೇಂದ್ರಗಳು ಇವೆ. ಈ ಸಂಶೋಧನಾ ಕೇಂದ್ರಗಳು ಎರಡೂ ವಿಶ್ವವಿದ್ಯಾನಿಲಯದ ನಡುವೆ ಸಾಧಾರಣ 55 ಸಂಶೋಧನಾ ಫಾರ್ಮ್‌ಗಳಿವೆ. ಅದರಂತೆ ಕೃಷಿ ಇಲಾಖೆಯಲ್ಲಿಯೂ ಸಹ ಅನೇಕ ಫಾರ್ಮ್‌ಗಳಿವೆ. ಇವೆಲ್ಲಾ ಫಾರ್ಮ್‌ಗಳನ್ನು ಕೃಷಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಕೊಡಬೇಕು ಮತ್ತು ಪ್ರತಿ ಒಂದು ತಾಲ್ಲೂಕಿನಲ್ಲಿ ಒಂದು ಈ ಸಂಶೋಧನೆ ಆಗಲಿ ಬೀಜೋತ್ಪಾದನೆ ಮಾಡುವಂತಹ ಫಾರ್ಮ್‌ಗಳು ಪ್ರತಿ ಒಂದು ತಾಲ್ಲೂಕಿನಲ್ಲೂ ಬೇಕು. ಏಕೆಂದರೆ ಆ ಪ್ರದೇಶದಲ್ಲಿ ಬೆಳೆಯುವಂತಹ ಕೃಷಿಯ ಬೆಳವಣಿಗೆ ಆಗಬೇಕಾಗಿದೆ, ಆ ದೃಷ್ಟಿಯಿಂದ ಅಂತಹ ಸಂಶೋದನಾ ಕೇಂದ್ರಗಳು ಪ್ರತಿ ಒಂದು ತಾಲ್ಲೂಕಿನಲ್ಲೂ ಆಗಬೇಕು. ಇಷ್ಟೇ ಅಲ್ಲ ರೈತರಿಗೆ ಈಗ ಬೇರೆ ಬೇರೆ ಬೆಳೆಯಲ್ಲಿ ಬಹುಮಾನವನ್ನು ಕೊಡುತ್ತಿದ್ದಾರೆ. ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಬಹುಮಾನ ಕೊಡುತ್ತಿದ್ದಾರೆ. ನಾನೂ ಸಹ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಮಾರಂಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆ ಭಾಗವಹಿಸಿದ್ದೇನೆ. ಇದನ್ನು ಇನ್ನೂ ಹೆಚ್ಚು ಮಾಡಬೇಕು. ನನ್ನ ದೃಷ್ಟಿಯಲ್ಲಿ ಗ್ರಾಮಪಂಚಾಯತಿ ಮಟ್ಟದಿಂದ ಸಹ ಬಹುಮಾನ ಕೊಡುವಂತಹ ಒಂದು ಪ್ರಯೋಗ ಶುರುವಾಗಬೇಕು. ಏಕೆಂದರೆ ಆ ಸ್ಪರ್ಧೆ ಶುರುವಾಗಬೇಕಾಗಿದೆ. ಗ್ರಾಮ ಪಂಚಾಯಿತಿಯ ಮಟ್ಟದಿಂದ ಹಿಡಿದು ಬೇರೆ ಬೇರೆ ಬೆಳೆಗೆ ಈ ಒಂದು ಸ್ಪರ್ಧೆಯನ್ನು ಏರ್ಪಡಿಸಿ ಬಹುಮಾನವನ್ನು ಕೊಡಬೇಕು. ಏಕೆಂದರೆ ಪ್ರತಿಯೊಂದು ಕಡೆಗೆ ಸ್ಪರ್ಧಾತ್ಮಕವಾಗಿ ಈ ಕೃಷಿಯ ಬೆಳವಣಿಗೆಯಲ್ಲಿ ನಮ್ಮ ರೈತರನ್ನು ತೊಡಗಿಸಬೇಕಾಗಿದೆ. ಆ ದೃಷ್ಟಿಯಲ್ಲಿ ಇದನ್ನು ಹೆಚ್ಚು ಬೆಳವಣಿಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ರೈತ ಬೆಳೆಯುತ್ತಿದ್ದಾನೆ. ಬೆಳೆದಂತಹ ಫಸಲಿಗೆ ಇವತ್ತು ಸರಿಯಾದಂತಹ ಬೆಲೆ ಸಿಗುತ್ತಾ ಇಲ್ಲ. ಆದರೆ ಎಷ್ಟೋ ರೈತ ಇಷ್ಟೆಲ್ಲಾ ಹಣ ತೊಡಗಿಸಿ ಬೆಳೆದಂತಹ ಮಾಲಿಗೆ ಅವನು ಒಯ್ದು ತನ್ನ ಮನೆಯಲ್ಲಿ ಇಟ್ಟುಕೊಳ್ಳಲಿಕ್ಕೆ ಜಾಗ ಇಲ್ಲ. ಅಥವಾ ಬೆಳೆದ ತಕ್ಷಣ ಸಾಕಷ್ಟು ಸಾಲದ ಹೊರೆ ಇರುತ್ತದೆ. ಸಾಲದ ಹೊರೆ ಎಷ್ಟು ಇರುತ್ತದೆ ಎಂದರೆ ಅವನು ಬೆಳೆದುದ್ದನ್ನು ಮಾರಿ ಸಾಲ ತೀರಿಸಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ಇರುತ್ತಾನೆ. ಮಾರುಕಟ್ಟೆಗೆ ಹೋಗುತ್ತಾನೆ. ಆತ ಮಾರುಕಟ್ಟೆಗೆ ಹೋದರೆ ಅಲ್ಲಿ ಕೈಗೆ ಬಂದಂತಹ ಬೆಲೆಗೆ ಮಾರುವಂತಹ ಪರಿಸ್ಥಿತಿ ಇವತ್ತು ಬಂದಿದೆ. ಇದರ ಸಲುವಾಗಿ ಎಪಿಎಂಸಿಯಿಂದ ಮಾಲು ಸಂಗ್ರಹ ಮಾಡಬೆಕು. ಅವರಿಗೆ ಸಾಲ ಕೊಡಬೇಕು ಎಂದು ಇದೆ. ಅದು ಎಷ್ಟರಮಟ್ಟಿಗೆ ಕಾರ್ಯಗತ ಆಗಿದೆ? ಎಷ್ಟು ರೈತರ ಮಾಲುಗಳನ್ನು ಇಟ್ಟುಕೊಳ್ಳುವುದಕ್ಕೆ ಉಗ್ರಾಣಗಳ ವ್ಯವಸ್ಥೆ ಇದೆ? ಇವತ್ತು ಗೋಡೌನ್‌ಗಳ ವ್ಯವಸೆ ಎಷ್ಟು ಇದೆ? ರೈತರು ಹೋದರೆ ಆ ಗೋಡೌನ್‌ಗಳಲ್ಲಿ ಹಂಚಿಕೊಳ್ಳುವುದಕ್ಕೆ ಜಾಗ ಇಲ್ಲ. ಅಥವಾ ಅವನು ಹಂಚಿದರೆ ಆತನಿಗೆ ಸರಿಯಾದ ಹಣ ಸಿಗುವುದಿಲ್ಲ. ಆತ ಇವತ್ತು ಕೈಗ ಬಂದಂತೆ ಮಾರಿ ಹಣವನ್ನು ಪಡೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಏನು ವ್ಯವಸ್ಥೆ ಇರಬೇಕು? ಆತ ಮಾರುಕಟ್ಟೆಗೆ ಹೋದರೆ ಪ್ರತಿ ಒಂದು ಮಾರುಕಟ್ಟೆಯಲ್ಲಿ ರೈತ ಬೆಳೆದಂತಹ ಮಾಲಿನ ಸಲುವಾಗಿಯೇ ನಿಗದಿತವಾದಂತಹ ಗೋಡೌನ್‌ಗಳು ಇರಬೇಕು. ಆತ ಅಲ್ಲಿ ಸಂಗ್ರಹ ಮಾಡಿದಂತಹ, ಬೆಳದಂತಹ ಉತ್ಪನ್ನವನ್ನು ನೀಡಿದ ತಕ್ಷಣ ಅವನಿಗೆ70 ಪರ್ಸೆಂಟ್ ಹಣ ಸಿಗುವಂತಹ ಒಂದು ಅವಕಾಶವನ್ನು ರೈತರಿಗೆ ಮಾಡಬೇಕಾದಂತಹ

ಅಗತ್ಯತೆ ಇವತ್ತು ಇದೆ. ಅದೂ ಇಲ್ಲ. ಅನೇಕ ಸಂಸ್ಕರಣದ ಕೇಂದ್ರಗಳು ಬರಬೇಕಾಗಿದೆ. ಇದು ನಿಸರ್ಗದ ಮೇಲೆ ಅವಲಂಬವಾದಂತಹ ಕಾಯಕ ಸತ್ಯಶುದ್ದವಾದಂತಹ ಯಾವುದಾದರೂ ಕಾಯಕ ಈ ದೇಶದಲ್ಲಿದ್ದರೆ. ಜಗತ್ತಿನಲ್ಲಿದ್ದರೆ ಇದೊಂದೇ ಸತ್ಯಶುದ್ಧವಾದಂತಹ ಕಾಯಕ. ಶ್ರಮ ಹಾಕಿ, ಮಣ್ಣಿನ ಜೊತೆಗೆ ಆತ ಶ್ರಮ ಹಾಕಿ ದುಡ್ಡು ಹಾಕಿ ನಿಸರ್ಗದ ಜೊತೆ ಹೊಂದಿಕೊಂಡು ಬೆಳೆಯುವಂತಹ ಕಾಯಕ. ಇದಕ್ಕೆ ಅವನಿಗೆ ಸರಿಯಾದಂತಹ ಲಾಭದಾಯಕವಾಗಿ ಬೆಳೆ ಬರಲಿಕ್ಕೆ ಹಾಗೂ ಲಾಭದಾಯಕವಾಗುವ ಹಾಗೆ ಮಾಡಬೇಕಾಗಿದೆ. ಇದಕ್ಕೆ ಸಾಲದ ವ್ಯವಸ್ಥೆ ಏನು ಇದೆ? ರೈತರಿಗೆ ಸಾಲ ಸರಿಯಾದ ವೇಳೆಯಲ್ಲಿ ಸಿಗುತ್ತಾ ಇಲ್ಲ. ಸಹಕಾರಿ ಸಂಘಗಳಿಂದ ಸಹ ಅವನಿಗೆ ಯಾವಾಗ ಸಾಲ ಬೇಕಾಗಿದೆ, ಅಗ ಸಾಲ ಸಿಗುತ್ತಾ ಇಲ್ಲ ಯಾವುದೇ ಬ್ಯಾಂಕಿನ ವ್ಯವಸ್ಥೆಯಿಂದಲೂ ಅವನಿಗೆ ಸರಿಯಾದ ವೇಳೆಗೆ ಸಾಲ ಸಿಗುವುದಿಲ್ಲ. ಪ್ರತಿ ವರ್ಷ ಅವನು ಸಾಲದ ಸಲುವಾಗಿ ಓಡಾಡಬೇಕು. ವೇಳೆಗೆ ಸರಿಯಾಗಿ ಸಾಲ ಸಿಗದೇ ಇದ್ದ ಕಾರಣ ಇವತ್ತು ಎಷ್ಟೋ ರೈತ ಹಾನಿಗೆ ಒಳಗಾಗುತ್ತಿದ್ದಾನೆ. ಕೃಷಿ ಸಹ ಒಂದು ಉದ್ದಿಮೆ ಆಗಬೇಕು ಎನ್ನುವಂತಹ ದೃಷ್ಟಿಯಿಂದ ಇವತ್ತು ಏಕೆ ಅವರಿಗೆ ಕ್ರೆಡಿಟ್ ಕಾರ್ಡ್ ಮಾಡಬಾರದು? ಅವನಿಗೆ ಇರುವಂತಹ ಹಿಡುವಳಿಗೆ ತಕ್ಕಂತೆ, ಅವನಿಗೆ ಇರುವ ನೀರಾವರಿಯ ಸೌಲಭ್ಯಕ್ಕೆ ತಕ್ಕಂತೆ , ಅವನು ಬೆಳೆಯುತ್ತಿರುವ ಬೆಳೆಗೆ ತಕ್ಕಂತೆ, ಅವನಿಗೆ ನಿರ್ದಿಷ್ಟವಾದಂತಹ ಕ್ರೆಡಿಟ್ ಕಾರ್ಡ್ ಮಾಡಬೇಕು. ಒಂದು ಇಂಡಸ್ಟ್ರಿಗೆ ಹಣವನ್ನು ರಾಮೆಟೀರಿಯಲ್‌ಗೆ ಒದಗಿಸುತ್ತಾರೆ. ಆಮೇಲೆ ಫಿನಿಷ್ಡ್ ಗುಡ್ಸ್ ಮೇಲೆ ಸಹ ಬ್ಯಾಂಕ್‌ನವರು ಹಣವನ್ನು ಒದಗಿಸುತ್ತಾರೆ. ಆ ಪ್ರಕಾರ ಇವತ್ತು ಬೆಳೆ ಸಾಲ ಎಂದು ಇಷ್ಟು ಕೊಡುತ್ತೀರಿ, ಬೆಳೆದ ನಂತರ ಅವನ ಉತ್ಪಾದನೆಗಳಿಗೆ ಸಾಲ ಸಿಗುವಂತಹ ವ್ಯವಸ್ಥೆ ಏಕೆ ಮಾಡಬಾರದು? ಅವನಿಗೆ ಸರಿಯಾದ ವೇಳೆಯಲ್ಲಿ ಮಾರಲಿಕ್ಕೆ ಅವಕಾಶ ಆಗುತ್ತದೆ. ಅವನಿಗೆ ಅಲ್ಲಿ ಹಣ ಸಿಕ್ಕರೆ, ಅವನು ಬೆಳೆದಂತಹ ಮಾಲಿನ ಮೇಲೆ ಹಣ ಸರಿಯಾಗಿ ಸಿಕ್ಕರೆ ಅವನು ಕೈಗೆ ಬಂದ ಹಾಗೆ ಮಾರುವಂತಹ ಪರಿಸ್ಥಿತಿ ಬರುವುದಿಲ್ಲ.

3.30 ಪಿ.ಎಂ

ಅದಕ್ಕೆ ಕ್ರೆಡಿಟ್ ಕಾರ್ಡ್ ಮಾಡಿ ಪ್ರತಿಯೊಬ್ಬ ರೈತರಿಗೆ ಅವರು ಬೆಳೆಯುವ ಬೆಳೆಗಳಿಗೆ ಅನುಗುಣವಾಗಿ ನೀರಾವರಿ ಸೌಲಭ್ಯಕ್ಕೆ ಅನುಗುಣವಾಗಿ ಕ್ರೆಡಿಟ್ ಕಾರ್ಡ್ ಮಾಡಬೇಕು. ಬೆಳೆಸಾಲವಿರಬಹುದು, ಮಧ್ಯಮಾವಧಿ, ದೀರ್ಘಾವಧಿ, ಸಾಲವಿರಬಹುದು ಅದು ದೊರಕುವಂತೆ ಮಾಡಬೇಕು. ರೈತರು ಬೆಳೆದಂಥ ಮಾಲಿಗೆ ಕೇಂದ್ರ ಸರ್ಕಾರವಾಗಲಿ, ರಾಜ್ಯಸರ್ಕಾರವಾಗಲಿ ಸರಿಯಾದಂಥ ಬೆಲೆಯನ್ನು ಕೊಡಬೇಕಾಗುತ್ತದೆ. ಪಂಜಾಬ್, ಹರಿಯಾಣ, ರಾಜಾಸ್ತಾನಗಳಲ್ಲಿ ಬೆಳೆದಂಥ ಗೋಧಿಗೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ನೂರು ರೂಪಾಯಿ ಹೆಚ್ಚು ಬೆಲೆಯನ್ನು ಕೊಟ್ಟಿದೆ. ನಮ್ಮಲ್ಲಿ ಗೋಧಿ, ಜೋಳ, ಬೆಳೆದಂಥ ರೈತರಿಗೆ ಮತ್ತು ರೈತರು ಯಾವ ಬೆಳೆಯ ಮೇಲೆ ಹೆಚ್ಚು ಅವಲಂಭಿಸಿರುತ್ತಾರೋ ಆ ಬೆಳೆಗೆ ಹೆಚ್ಚು ಬೆಲೆಯನ್ನು, ಬೆಂಬಲ ಬೆಲೆಯನ್ನು ರಾಜ್ಯ ಸರ್ಕಾರ ಕೊಡಬೇಕು. ಇಂದು ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಅದರ ಜೊತೆಗೆ ಫಲವತ್ತಾದ ಭೂಮಿಯ ಪ್ರಮಾಣ ಕಡಿಮೆಯಾಗುತ್ತಿದೆ. ಅದನ್ನು ನಿಯಂತ್ರಣ ಮಾಡಬೇಕಾಗಿದೆ. ರಾಜ್ಯದ ಯೋಜನಾ

ಮಂಡಳಿಯ ಉಪಾಧ್ಯಕ್ಷರಾದ ಡಾ: ನಂಜುಂಡಪ್ಪನವರು ಮೊನ್ನೆ ಇದರ ಬಗ್ಗೆ ಹೇಳಿದ್ದಾರೆ. ನಾನು 1985 ರಿಂದಲೂ ಹೇಳುತ್ತಿದ್ದೇನೆ. ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳಿಗಾಗಲಿ ಮತ್ತೊಂದಕ್ಕಾಗಲಿ ತೆಗೆದುಕೊಳ್ಳಬೇಡಿ. ಇದರಿಂದ ರೈತರನ್ನು ಹಾಳು ಮಾಡುತ್ತೀರಿ, ಎಷ್ಟೇ ಹಣ ರೈತರಿಗೆ ಕೊಟ್ಟರೂ ಪ್ರಯೋಜನವಾಗುವುದಿಲ್ಲ. ನಮ್ಮ ದೇಶ ಹಾಳಾಗುತ್ತದೆ. ಬೇಕಾದಷ್ಟು ಬಂಜರು ಭೂಮಿ ಇದೆ, ಅಲ್ಲಿ ಹುಲ್ಲೂ ಸಹ ಬೆಳೆಯುವುದಿಲ್ಲ. ಅಲ್ಲಿ ಬೇಕಾದರೆ ಕೈಗಾರಿಕೆಗಳನ್ನು ಮತ್ತಾವುದನ್ನಾದರೂ ಪ್ರಾರಂಭ ಮಾಡಿ. ಆದರೆ ಅದಕ್ಕಾಗಿ ಫಲವತ್ತಾದ ಭೂಮಿಯನ್ನು ತೆಗೆದುಕೊಳ್ಳಬೇಡಿ ಎಂದು ವಿನಂತಿ ಮಾಡುತ್ತಿದ್ದೇನೆ. ಆದರೂ ಅಧಿಕಾರಿಗಳು ಯಾವುದನ್ನೂ ಗಮನಿಸದೆ ಅವರ ಸ್ವಂತದ ಲಾಭಕ್ಕಾಗಿ ದೇಶವನ್ನು ಹಾಳು ಮಾಡುತ್ತಿದ್ದಾರೆ. ನಮ್ಮ ಭಾಗದಲ್ಲಿ ಫಲವತ್ತಾದ ಭೂಮಿಯನ್ನು ವಶಪಡಿಸಿಕೊಂಡು ಕೈಗಾರಿಕೆಗಳಿಗೆ ನಿವೇಶನಗಳಿಗೆ ಕೊಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಸರ್ಕಾರ ಇದರ ಬಗ್ಗೆ ತೀವ್ರವಾದ ಗಮನಹರಿಸಬೇಕು. ಒಂದು ಲಕ್ಷ ರೂಪಾಯಿ ರೈತರಿಗೆ ಕೊಟ್ಟರೂ ರೈತರ ಉದ್ಧಾರವಾಗುವುದಿಲ್ಲ. ಒಂದು ಕೋಟಿ ಕೊಟ್ಟರು ಅಂಥ ಭೂಮಿಯನ್ನು ತಯಾರು ಮಾಡುವುದಕ್ಕಾಗುವುದಿಲ್ಲ. ಬರುವ ದಿವಸಗಳಲ್ಲಿ ಇದಕ್ಕಾಗಿ ನಾವು ಪಶ್ಚಾತ್ತಾಪ ಪಡಬೇಕಾಗುತ್ತದೆ. ಫಲವತ್ತಾದ ಭೂಮಿಯನ್ನು ಯಾವುದೇ ಕಾರಣಕ್ಕೆ ಪಡೆಯಬಾರದೆಂದು ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ. ಇವತ್ತು ಯಾಂತ್ರಿಕರಣದಿಂದ ನಮ್ಮ ಕೃಷಿಯ ಅಭಿವೃದ್ಧಿಯಾಗಬೇಕಾಗಿದೆ. ಆ ದೃಷ್ಟಿಯಿಂದ ಸರ್ಕಾರದವರು ಕೆಲವು ಯಂತ್ರಗಳನ್ನು ರೈತರಿಗೆ ಕೊಡುತ್ತಿದ್ದಾರೆ. ಆ ರೀತಿ ಯಂತ್ರಗಳನ್ನು ಕೊಡುವ ಕೆಲಸ ಪ್ರತಿ ತಾಲ್ಲೂಕಿನಲ್ಲೂ ಹೆಚ್ಚು ಮಾಡಬೇಕು; ಟ್ರಾಕ್ಟರ್ ಆಗಲಿ ಮತ್ತಾವುದೇ ಯಂತ್ರಗಳಗಾಲಿ ಇಂಥವರಿಂದಲೇ ಕೊಂಡುಕೊಳ್ಳಬೇಕೆಂದು ರೈತನಿಗೆ ಒತ್ತಾಯ ಮಾಡಬಾರದು. ನಮ್ಮ ಅನೇಕ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿವೆ. ಅವುಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಸಬ್ಸಿಡಿಯನ್ನು ಕೊಟ್ಟು ಅಲ್ಲಿಂದ ಯಂತ್ರಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವುದು ಸರಿಯಲ್ಲ. ರೈತರು ಬೇಕಾದಲ್ಲಿ ಯಾವುದೇ ಯಂತ್ರವನ್ನು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಬೇಕು. ಏಕೆಂದರೆ ರೈತ ತನ್ನ ಭೂಮಿಯ ಮೇಲೆ ಸಾಲ ತೆಗೆದುಕೊಂಡು ಯಂತ್ರವನ್ನು ಪಡೆಯುತ್ತಿರುತ್ತಾನೆ. ಅವನಿಗೆ ಸರಿಯಾದಂಥ ಸೇವೆ ಸಹ ದೊರಕಬೇಕಾಗುತ್ತದೆ. ಆದ್ದರಿಂದ ಅವನು ಎಲ್ಲಿಬೇಕಾದರೂ ಯಂತ್ರವನ್ನು ತೆಗೆದುಕೊಳ್ಳಲು ಅವಕಾಶ ಕೊಡಬೇಕು. ಇದರ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಉಪಕರಣಗಳನ್ನು ಹೆಚ್ಚು ಹೆಚ್ಚು ಬಳಕೆ ಮಾಡುವ ಪ್ರಯೋಗವನ್ನು ರೈತರು ಮಾಡಬೇಕಾಗಿದೆ. ಮಣ್ಣಿನ ಫಲವತ್ತತೆ ಹೆಚ್ಚಾಗಬೇಕಾದರೆ. ಬೇರೆ ಬೇರೆ ರೀತಿಯ ಉಪಕರಣಗಳನ್ನು ಉಪಯೋಗ ಮಾಡಲು ರೈತರನ್ನು ಸಜ್ಜುಗೊಳಿಸಬೇಕಾಗುತ್ತದೆ. ಬೇರೆ ಬೇರೆ ಉಪಕರಣಗಳನ್ನು ಟ್ರ್ಯಾಕ್ಟರ್ ಜೊತೆಯಾಗಲಿ, ಎತ್ತುಗಳ ಜೊತೆಯಾಗಲಿ ಉಪಯೋಗ ಮಾಡುವುದರಿಂದ ಭೂಮಿಯ ಫಲವತ್ತತೆ ಹೆಚ್ಚಾಗುತ್ತದೆ. ಅದಕ್ಕಾಗಿ ರೈತರು ಯಂತ್ರಗಳನ್ನು ತೆಗೆದುಕೊಳ್ಳಲು ಸಬ್ಸಿಡಿಯನ್ನು, ಹೆಚ್ಚು ಹಣವನ್ನು ಕೊಡುವ ಕೆಲಸ ಮಾಡಬೇಕು. ಇನ್ನು ತೋಟಗಾರಿಕೆಯ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಒಳ್ಳೆಯ ಕೆಲಸವಾಗಬೇಕಾಗಿದೆ. ಕೋಲಾರದಲ್ಲಿ ಇತ್ತೀಚೆಗೆ ಟೊಮ್ಯಾಟೊ ಬೆಳದ ರೈತರು ಸರಿಯಾದ ಬೆಲೆ ಸಿಗದೆ ರಸ್ತೆಯಲ್ಲಿ ಚೆಲ್ಲಿಹೋದರು. ನಮ್ಮಲ್ಲಿ

ಆಲೂಗಡ್ಡೆಯ ಸ್ಥಿತಿ ಅದೇ ರೀತಿಯಾಗಿದೆ. ತೋಟಗಾರಿಕೆ ಸಂಬಂಧಪಟ್ಟ ಸಸಿಗಳು ಇಲಾಖೆಯಲ್ಲಿ ಸಿಗುತ್ತಿಲ್ಲ. ಅವುಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಬೇಕು. ಎಲ್ಲೆಲ್ಲಿ ತೋಟಗಾರಿಕೆ ಬೆಳೆ ಜಾಸ್ತಿ ಇದೆ ಅಲ್ಲಿ ಶೈತ್ಯಾಗಾರಗಳನ್ನು ನಿರ್ಮಾಣ ಮಾಡಬೇಕು. ಹಸಿರು ಕ್ರಾಂತಿಯ ಜೊತೆಗೆ ಬಿಳಿ ಕ್ರಾಂತಿಯೂ ಆಗಬೇಕಾಗಿದೆ. ನಮ್ಮ ರಾಜ್ಯ ಹೈನುಗಾರಿಕೆಗೆ, ಪಶುಸಂಗೋಪನಕ್ಕೆ ಬಹಳ ಉತ್ತಮವಾಗಿದೆ. ಆದ್ದರಿಂದ ನಮ್ಮಲ್ಲಿ ಪಶುಸಂಗೋಪನಾ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸಬೇಕು. ನಮ್ಮಲ್ಲಿ ಬಹಳ, ಉದ್ದವಾದ ಸಮುದ್ರ ಪ್ರದೇಶವಿದೆ. ಒಳನಾಡು ಮೀನು ಅಭಿವೃದ್ಧಿಗೆ ಸಾಕಷ್ಟು ಅವಕಾಶವಿದೆ. ಆದ್ದರಿಂದ ಮೀನುಗಾರಿಕೆ ಸಾಕಷ್ಟು ಅವಕಾಶ ಕೊಡಬೇಕು. ರೇಷ್ಮೆಗೂ ಅವಕಾಶ ಮಾಡಿಕೊಡಬೇಕು. ನಮ್ಮಲ್ಲಿರುವಷ್ಟು ನಿಸರ್ಗ ಸಂಪತ್ತು ಮತ್ತೆಲ್ಲೂ ಇಲ್ಲ. ಸರ್ಕಾರ ಈ ಎಲ್ಲಾ ಇಲಾಖೆಗಳಿಗೆ ಹೆಚ್ಚು ಆದ್ಯತೆಯನ್ನು ಕೊಡಬೇಕು. ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಇದನ್ನು ಕಾರ್ಯಗತ ಮಾಡಬೇಕು. ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳ ನಂತರವಾದರೂ ಕೃಷಿ ಮತ್ತು ರೈತರ ಅಭಿವೃದ್ಧಿಯಾಗಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತಿದ್ದೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೇ, ಅತ್ಯಂತ ಪ್ರಮುಖವಾದಂಥ ಬೇಡಿಕೆಯ ಮೇಲೆ ಇವತ್ತು ಚರ್ಚೆ ಮಾಡುತ್ತಿದ್ದೇವೆ. ನಮ್ಮ ಬದುಕು, ಆರ್ಥಿಕ ವ್ಯವಸ್ಥೆ ಹೆಚ್ಚಾಗಿ ಕೃಷಿ ವಲಯವನ್ನು ಅವಲಂಭಿಸಿದೆ. ಕೃಷಿ ವಲಯವನ್ನು ಪ್ರತಿನಿಧಿಸತಕ್ಕ ಐದು ಜನ ಸಚಿವರು ಇಲ್ಲಿ ಇದ್ದಾರೆ. ಅವರುಗಳೆಂದರೆ ಕೃಷಿ ಸಚಿವರು, ಪಶುಸಂಗೋಪನಾ ಸಚಿವರು, ತೋಟಗಾರಿಕೆ ಸಚಿವರು, ಮೀನುಗಾರಿಕೆ ಸಚಿವರು, ತೋಟಗಾರಿಕಾ ಸಚಿವರು, ರೇಷ್ಮೇ ಸಚಿವರು, ಈ ಪಂಚಭೂತಗಳು ಇದ್ದಾವೆ. ಮನುಷ್ಯನ ಅಸ್ತಿತ್ವವು ಪಂಚಭೂತಗಳಿಂದಾಗಿದೆ. ನಮ್ಮ ರಾಜ್ಯದ ಪ್ರಮುಖ ಇಲಾಖೆಯನ್ನು ಐದು ಜನ ಪಂಚಭೂತಗಳು ಜವಾಬ್ದಾರಿಯನ್ನು ಹೊತ್ತಿವೆ. ಇದರಲ್ಲಿ ಒಂದು ಸಂಶಯ ನನಗೆ ಕಾಡುತ್ತಿದೆ. ಮನುಷ್ಯನ ಇಡೀ ದೇಹದಲ್ಲಿ ಈ ಪಂಚಭೂತಗಳು ಇದ್ದಾವೆ. ಇವರು ಆಡಳಿತ ಮಾಡತಕ್ಕ ಅವಧಿಯಲ್ಲಿ ಎಂದಾದರೂ ಒಂದು ದಿವಸ ಒಂದು ಮನಸ್ಸು ಮಾಡಿ, ಒಂದು ಆತ್ಮವಾಗಿ ಆಲೋಚನೆ, ವಿಚಾರ ಮಾಡಿದ್ದಾರೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ತಿಮ್ಮಪ್ಪನವರು ಇವತ್ತು ಎಚ್ಚೆತ್ತುಕೊಳ್ಳುತ್ತಿದ್ದಾರೆ, ತಿಮ್ಮಪ್ಪನವರಿಗಿಂತ ಮೊದಲು, ಸುಮಾರು ಮೂರು ವರ್ಷಗಳಿಗಿಂತ ಮೊದಲು ಎಚ್ಚೆತ್ತುಕೊಂಡಿರತಕ್ಕಂತಹ ರಾಜ್ಯ ಸರ್ಕಾರ ಯಾವುದಾದರೂ ಇಡೀ ಭಾರತ ದೇಶದಲ್ಲಿ ಇದೆ ಎಂದರೆ ಅದು ಕರ್ನಾಟಕ ರಾಜ್ಯ ಸರ್ಕಾರ. ಈಗ ಅಧಿಕಾರದಲ್ಲಿರತಕ್ಕಂತಹ ಸರ್ಕಾರದಲ್ಲಿ ನನ್ನ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಉಪ ಸಮಿತಿ ಇದೆ. ಅನೇಕ ಸಂದರ್ಭಗಳಲ್ಲಿ ನಾವು ಸಚಿವ ಸಂಪುಟದ ಉಪ ಸಮಿತಿ ಸಭೆ ಸೇರಿ ಮಾನ್ಯ ತಿಮ್ಮಪ್ಪನವರು ಹೇಳಿರತಕ್ಕಂತಹ ಎಲ್ಲಾ ವಿಚಾರಗಳನ್ನು ಹೈನುಗಾರಿಕೆ ಇರಬಹುದು, ರೇಷ್ಮೆ ಇರಬಹುದು, ಮೀನುಗಾರಿಕೆ ಇರಬಹುದು, ತೋಟಗಾರಿಕೆ ಇರಬಹುದು, ಕೃಷಿ ಇಲಾಖೆ ಇರಬಹುದು, ಸಹಕಾರ ಇಲಾಖೆ ಇರಬಹುದು, ನೀರಾವರಿ ಇಲಾಖೆ, ವಿದ್ಯುಚ್ಛಕ್ತಿ ಮಂಡಳಿ ಇರಬಹುದು, ಇವರೆಲ್ಲರೂ ಕೃಷಿಗೆ ಸಂಬಂಧಪಟ್ಟಿರತಕ್ಕಂತಹವರು. ಈ ದೇಶದ

50 ವರ್ಷಗಳ ಸ್ವಾತಂತ್ರ್ಯದ ಚರಿತೆಯಲ್ಲಿ ಎಲ್ಲಾ ಸಂಬಂಧಪಟ್ಟ ಮಂತ್ರಿಗಳನ್ನು ಅಲ್ಲದೆ ಅಧಿಕಾರಿಗಳನ್ನೂ ಕೂಡ ಕರೆದು ತೀವ್ರವಾಗಿ ಚರ್ಚೆ ನಡೆಸಿ ಅನೇಕ ಉತ್ತಮವಾದ ತೀರ್ಮಾನಗಳನ್ನು ತೆಗೆದುಕೊಂಡಿರತಕ್ಕಂತಹ ಸರ್ಕಾರ ಯಾವುದಾದರೂ ಇದ್ದರೆ ಅದು ಕರ್ನಾಟಕ ರಾಜ್ಯ ಸರ್ಕಾರ. ಅದು ಪಟೇಲರ ಮುಖಂಡತ್ವದಲ್ಲಿ ಮತ್ತು ಹಿಂದೆ ಇದ್ದಂತಹ ದೇವೇಗೌಡರ ಮುಖಂಡತ್ವದಲ್ಲಿ ಇದ್ದಂತಹ ಸರ್ಕಾರ ಎನ್ನತಕ್ಕಂಥದ್ದನ್ನು ಮಾನ್ಯ ಕಾಗೋಡು ತಿಮ್ಮಪ್ಪನವರು ತಿಳಿದುಕೊಳ್ಳಬೇಕೆಂದು ತಮ್ಮ ಮೂಲಕ ಮನವಿ ಮಾಡುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ ತಿಳಿದುಕೊಂಡಿದ್ದೇನೆ. ಏಕೆಂದರೆ, ಶ್ರೀಮಾನ್ ದೇವೇಗೌಡರು ಸಚಿವರಾಗಿ ಕಾರ್ಯ ನಿರ್ವಹಿಸಬೇಕಾದರೆ ಅವರು ಒಂದು ಕೃಷಿ ನೀತಿಯನ್ನು ರಾಜ್ಯಕ್ಕೆ ಕೊಟ್ಟಿದ್ದಾರೆ. ಇಡೀ ರಾಷ್ಟ್ರದಲ್ಲಿ ಒಂದು ಕೃಷಿ ನೀತಿ ಇದೆ. ಅದನ್ನು ಅವರು ಮರೆತಿದ್ದಾರೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ಅದು ಇಲ್ಲ. ಬಹಳ ವಿಷಾದದಿಂದ ಈ ವಿಚಾರವನ್ನು ಈ ಸಭೆಯ ಗಮನಕ್ಕೆ ಮತ್ತು ರಾಜ್ಯದ, ದೇಶದ ರೈತರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲಿಯವರೆಗೆ ರಾಷ್ಟ್ರಕ್ಕೆ ಸಂಬಂಧಪಟ್ಟ ಕೃಷಿ ನೀತಿ ಆಗಿಲ್ಲ. ಅಲ್ಲಿ ಇಲ್ಲಿ ಸ್ವಲ್ಪ ಕರಡು ನೀತಿಯನ್ನು ಕೇಂದ್ರ ಸರ್ಕಾರ ಮೊದಲು ಇದ್ದಂತಹ ಸರ್ಕಾರ ಅನ್ನು ರೂಪಿಸಿತ್ತು. ತದ ನಂತರ ಬಂದ ಸರ್ಕಾರವೂ ಸಹ ಅದನ್ನು ಕರಡು ನೀತಿ ಏನು ರೂಪಿಸಿದ್ದರು ಇಲ್ಲಿಯವರೆಗೆ ಅದು ಪಾರ್ಲಿಮೆಂಟಿನಲ್ಲಿ, ಇಲ್ಲ, ಲೋಕಸಭೆಯಲ್ಲಿ ಚರ್ಚೆಗೆ ಬಂದಿಲ್ಲ. ಅದಕ್ಕೆ ಒಂದು ಸ್ವರೂಪ ಇದುವರೆಗೂ ಬಂದಿಲ್ಲ. ಅವೆಲ್ಲವನ್ನೂ ಮಾಡಿ ಸ್ವರೂಪವನ್ನು ನೀಡಿರತಕ್ಕಂಥದ್ದು ಕರ್ನಾಟಕ ಸರ್ಕಾರ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಈಗಲೂ ಬದ್ಧನಾಗಿದ್ದೇನೆ. ರಾಷ್ಟ್ರದಲ್ಲಿ ಒಂದು ಕೃಷಿ ನೀತಿ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಾಷ್ಟ್ರದಲ್ಲಿ ಒಂದು ಕೃಷಿ ನೀತಿ ಇಲ್ಲ. ಇಡೀ ರಾಷ್ಟ್ರಕ್ಕೆ ಸಂಬಂಧಪಟ್ಟಂತೆ ಒಂದು ಕೃಷಿ ನೀತಿಯನ್ನು ಈ ದೇಶದಲ್ಲಿ ಇದುವರೆಗೂ ತರಲಿಲ್ಲ. ತಂದಿದ್ದರೆ ಈ ದುರಂತ ಬಹುಶಃ ಈ ದೇಶಕ್ಕೆ ಬರುತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಈಗ ಈ ಒಂದು ಕೃಷಿ ನೀತಿಯನ್ನು ತಂದಿದ್ದಾರೆ. ಆದರೆ ಅವರು ಆಡಳಿತವನ್ನು ಪ್ರಾರಂಭ ಮಾಡಿದ ಮೇಲೆ ಕೃಷಿ ನೀತಿಯ ಆಧಾರದ ಮೇಲೆ ಮತ್ತು ಇಡೀ ಕರ್ನಾಟಕ ರಾಜ್ಯದ ಕೃಷಿ ವಲಯಗಳನ್ನು ಸರ್ವಾಂಗೀಣ ಸಂವೃದ್ಧಭರಿತವಾದ ಕ್ಷೇತ್ರವನ್ನಾಗಿ ಮಾಡಬೇಕೆಂದು ಅವರ ಅಪೇಕ್ಷೆಯಾಗಿತ್ತು. ಬರೀ ಕೃಷಿ ನೀತಿ ಒಂದಿದ್ದರೆ ಸಾಲದು, ಎಂದು ಅವರು ಇಡೀ ಪ್ರಪಂಚವನ್ನು ತಿರುಗಾಟ ಮಾಡಿ ಬಂದಿದ್ದಾರೆ. ಒಬ್ಬರು ಹೋಗಿದ್ದಾರೆ. ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗಿಲ್ಲ. ಹೋಗಿ ಚೈನಾ ನೋಡಿದ್ದಾರೆ, ಇಸ್ರೇಲ್ ನೋಡಿದ್ದಾರೆ, ಅಮೇರಿಕಾ ನೋಡಿದ್ದಾರೆ, ಇಂಗ್ಲೇಂಡ್ ನೋಡಿದ್ದಾರೆ, ವಿಶ್ವದ ಬಹು ಭಾಗದ ರಾಷ್ಟ್ರಗಳನ್ನು ಕಂಡು ಬಂದಿದ್ದಾರೆ. ತಮ್ಮ ಕೃಷಿ ನೀತಿಯನ್ನು ಜಾರಿಗೆ ತರಬೇಕಾದರೆ ವಿದೇಶದಲ್ಲಿರತಕ್ಕಂತಹ ತಂತ್ರಜ್ಞಾನವನ್ನು ಇದರಲ್ಲಿ

ಬಳಸಬೇಕೆಂದು ಬಗ್ಗೆ ಅಪಾರ ಅನುಭವವನ್ನು ಪಡೆದು ಬಂದಿದ್ದಾರೆ. ಆ ಅನುಭವದ ಎರಕವನ್ನು ಈ ಕರ್ನಾಟಕದ ಕೃಷಿ ಕ್ಷೇತ್ರಕ್ಕೆ ಎರೆದಿದ್ದಾರೆಯೇ ಎನ್ನುವುದು ಮೊದಲು ಪ್ರಶ್ನೆ. ಎಷ್ಟರ ಮಟ್ಟಿಗೆ ಎರಕ ಹೊಯ್ದಿದ್ದಾರೆ ಎನ್ನುವುದನ್ನು ವಿಶ್ಲೇಷಣೆ ಮಾಡಿ ಅವರಿಗೆ ತೋರಿಸಿದರೆ ಇನ್ನು ಎಷ್ಟು ಕೆಲಸ ಉಳಿದಿದೆ ಎಂದು ಅವರಿಗೆ ಗೊತ್ತಾಗುತ್ತದೆ. ಕೃಷಿ ನೀತಿಯನ್ನು ಅವರು ಜಾರಿಗೆ ತಂದಿದ್ದಾರೆ. ಕೃಷಿ ವಲಯ ಎಂದರೆ, ಐದು ಅಂಗಗಳು ಇವೆಲ್ಲಾ ಏಕ ಕಾಲದಲ್ಲಿ ಕೆಲಸ ಮಾಡಿದರೆ ನಮ್ಮ ಕೃಷಿ ಕ್ಷೇತ್ರ ಸಂವೃದ್ಧವಾಗಿ ಬೆಳೆಯುವುದಕ್ಕೆ ಇವತ್ತು ಸಾಧ್ಯವಾಗುತ್ತದೆ. ಈ ಕೃಷಿ ನೀತಿ ಅವರು ಪ್ರಾರಂಭ ಮಾಡುವಾಗ ವಿಶೇಷವಾಗಿ ಅವರು ಗಮನ ಹರಿಸಿದ್ದುದು ಸಂವೃದ್ಧ ಗ್ರಾಮೀಣ ಸಮಾಜದ ನಿರ್ಮಾಣ. ಇದು ಅವರ ಪರಿಕಲ್ಪನೆಯ ಕೃಷಿ ನೀತಿ. ಇದರ ಹಿಂದೆ ಅನೇಕ ಕಾರ್ಯಕ್ರಮಗಳೆಲ್ಲಾ ಸಂಯೋಜಿತವಾಗಿವೆ. ಈ ಸಂವೃದ್ಧ ಗ್ರಾಮೀಣ ಸಮಾಜದ ನಿರ್ಮಾಣದ ದಿಕ್ಕಿನಲ್ಲಿ ಎಷ್ಟು ದೂರ ನಡೆದಿದ್ದಾರೆ ಎನ್ನತಕ್ಕಂಥದ್ದನ್ನು ಇವತ್ತು ತುಲನಾತ್ಮಕವಾಗಿ ಕಾರ್ಯರೂಪದಲ್ಲಿ ವಿಶ್ಲೇಷಣೆ ಮಾಡಿ ನಾವು ನೋಡಬೇಕಾಗಿದೆ. ನಮ್ಮ ಕೃಷಿ ಕ್ಷೇತ್ರ ದೊಡ್ಡದೇನೋ ಹೌದು. ಇದು ಇನ್ನು ವಿಸ್ತಾರ ಮಾಡುವುದಕ್ಕಾಗುವುದಿಲ್ಲ. ಎಷ್ಟು ಭೂಮಿ ಕೃಷಿ ಕ್ಷೇತ್ರಕ್ಕೆ ಒಳಪಟ್ಟಿದೆ 1956ನೇ ಇಸವಿಯಲ್ಲಿ ಎಷ್ಟು ಇದೆ ಅದಕ್ಕಿಂತ ಒಂದು ಐದು ಪರ್ಸೆಂಟ್ ಜಾಸ್ತಿ ಆಗಿರಬಹುದೇ ವಿನಹ, ಅದಕ್ಕಿಂತ ಜಾಸ್ತಿ ಆಗಿಲ್ಲ. ಇನ್ನು ಮುಂದೆ ಜಾಸ್ತಿಯಾಗುವುದಕ್ಕೆ ಸಾಧ್ಯವಿಲ್ಲ. ಕೃಷಿ ಭೂಮಿಯನ್ನು ಹೆಚ್ಚಿಸುವುದಕ್ಕೆ ಅರಣ್ಯದ ಕಡೆ ಹೋಗಬೇಕಾಗುತ್ತದೆ, ಏಕೆಂದರೆ ನಮ್ಮ ಬೈರೇಗೌಡರು ರಾಗಿ ಬೆಳೆಯುವುದಕ್ಕೆ ಆಗುವುದಿಲ್ಲ, ನೀಲಗಿರಿ ಬೆಳೆಯುವವರೂ ಇದ್ದಾರೆ. ಕುಷ್ಟಗಿ ಪ್ರದೇಶದಲ್ಲಿ ಲಾಭದಾಯಕವಾದ ಬೆಳೆ ಆಗುವುದಿಲ್ಲವೆಂದು ತಿಳಿದುಕೊಂಡು ಅವರು ಅಕೇಶಿ ಎಂದು ಅರಣ್ಯ ಪದಾರ್ಥ ಬೆಳೆಯುವುದಕ್ಕೆ ಪ್ರಾರಂಭ ಮಾಡುತ್ತಾರೆ. ಹೀಗಾಗಿ ನಮ್ಮಲ್ಲಿರತಕ್ಕಂತಹ ಕೃಷಿ ಕ್ಷೇತ್ರವನ್ನು ಇನ್ನಷ್ಟು ವಿಸ್ತಾರ ಮಾಡುವುದಕ್ಕೆ ಸಾಧ್ಯವಿಲ್ಲ. ಏನಿದ್ದರೂ ವಿಸ್ತರಿಸುವುದಕ್ಕೆ ಆಗಬೇಕಾದ ಕೆಲಸ ಇವತ್ತು ಆಗಬೇಕಾಗಿದೆ. ಆದ್ದರಿಂದ ಇವತ್ತು ಅವರು ಈ ಕೃಷಿ ನೀತಿಯನ್ನು ಮಾಡುವಾಗ ಕೆಲವು ನಿರ್ದಿಷ್ಟವಾಗಿ ಕಾರ್ಯ ಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಅದರಲ್ಲಿ ಏನು ವಿಶೇಷವಾಗಿದೆ ಎಂದರೆ, ನಮ್ಮ ಕೃಷಿ ಕ್ಷೇತ್ರ ಬಹಳವಾಗಿ ತಾರತಮ್ಯಕ್ಕೆ ಒಳಗಾಗಿದೆ. ಕೈಗಾರಿಕೆಗೆ ಹೋಲಿಸಿ ನೋಡಿದರೆ ಕೃಷಿ ಹಿಂದುಳಿದಿದೆ. ಮತ್ತು ಎಲ್ಲಾ ರೀತಿಯಿಂದ ಉತ್ಪಾದನೆ ದೃಷ್ಟಿಯಿಂದ, ರಕ್ಷಣೆ ದೃಷ್ಟಿಯಿಂದ, ಬಂಡವಾಳ ಹೂಡಿಕೆ ದೃಷ್ಟಿಯಿಂದ ಕಾರ್ಮಿಕರ ಹಿತರಕ್ಷಣೆ ದೃಷ್ಟಿಯಿಂದ, ಎಲ್ಲಾ ರೀತಿಯಿಂದ ಕೂಡ ಈ ಕೃಷಿ ವಂಚಿತವಾಗಿದೆ. ಈ ವಂಚಿತವಾದ ಕ್ಷೇತ್ರವನ್ನು ನಾನು ಬೆಳೆಸಬೇಕಾಗುತ್ತದೆ. ನಮ್ಮ ಸರ್ಕಾರ ಮಾಡುತ್ತದೆ ಎನ್ನತಕ್ಕಂತಹ ಅವರ ದೀರ್ಘವಾದ ತೀರ್ಮಾನ ಇದೆ. ಒಳ್ಳೆಯದು ನಾನು ಒಪ್ಪುತ್ತೇನೆ. ಕೈಗಾರಿಕೆಗೆ ಕೊಟ್ಟ ಪ್ರೋತ್ಸಾಹ ಕೃಷಿಗೆ ಸಿಗಲಿಲ್ಲ. ಕೈಗಾರಿಕೆಗೆ ಸಿಕ್ಕ ಧನ ಸಹಾಯ, ಪ್ರೋತ್ಸಾಹ ಕೈಗಾರಿಕೆಯಲ್ಲಿ ಕೆಲಸ ಮಾಡತಕ್ಕಂತಹ ಕಾರ್ಮಿಕರಿಗೆ ಸಿಕ್ಕಿದಂತಹ ಯಾವುದೇ ಪ್ರೋತ್ಸಾಹ ಸೋಷಿಯಲ್ ಸೆಕ್ಯೂರಿಟಿಯನ್ನೊಳಗೊಂಡು ಇದು ಯಾವುದೂ ಇವತ್ತು ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥವರಿಗೆ ಸಿಕ್ಕಿಲ್ಲ. ಅದಕ್ಕಾಗಿ ಅವರು ಕೃಷಿ ನೀತಿಯಲ್ಲಿ ಇದನ್ನೆಲ್ಲಾ ಹೇಳಿದ್ದಾರೆ. ಹೇಳುತ್ತಾ ಒಂದು ಮಾತನ್ನು ಏನು ಹೇಳಿದ್ದಾರೆಂದರೆ, ಈ ಕೃಷಿ ಕಾರ್ಮಿಕರ ಬಗ್ಗೆ ಚಿಂತನೆ ಮಾಡಿದ್ದಾರೆ. ಇದು ವಂಚನೆಗೆ ಒಳಗಾಗಿರತಕ್ಕಂತಹ ಒಂದು ವರ್ಗ. ಇವರಿಗೆ ಎಲ್ಲಾ ರೀತಿಯ ರಕ್ಷಣೆ ಕೊಡಬೇಕೆಂದು ಅವರು ಈ ಕೃಷಿ ನೀತಿಯಲ್ಲಿ

ಸ್ಪಷ್ಟವಾಗಿ ಹೇಳಿದ್ದಾರೆ. ಈ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಕೃಷಿ ಕಾರ್ಮಿಕರ ಕನಿಷ್ಠ ವೇತನವನ್ನು ಬದಲಾವಣೆ ಮಾಡಿದರು? ಪರಿಶೀಲನೆ ಮಾಡಿ ಜಾಸ್ತಿ ಮಾಡಿದರು? ಎಷ್ಟು ಈ ಕೃಷಿ ಕಾರ್ಮಿಕರಿಗೆ ಸಾಮಾಜಿಕ ನ್ಯಾಯ ಕೊಡತಕ್ಕಂತಹ ಕಾನೂನು ತರುವುದಕ್ಕೆ ಪ್ರಯತ್ನ ಪಟ್ಟರು? ಏಕೆಂದರೆ ಕೈಗಾರಿಕಾ ಕ್ಷೇತ್ರದಲ್ಲಿರತಕ್ಕಂಥ ಕಾರ್ಮಿಕರಿಗೆ ಕನಿಷ್ಠ ವೇತನ ಸಿಗುತ್ತದೆ, ಬೇರೆ ಬೇರೆ ಪ್ರಾವಿಡೆಂಟ್ ಫಂಡ್ ಇನ್ನಿತರೆ ಅನೇಕ ಇರುತ್ತವೆ. ಕೈಗಾರಿಗಾ ಕ್ಷೇತ್ರದಲ್ಲಿರತಕ್ಕಂತಹ ಕಾರ್ಮಿಕರಿಗೆ ಏನೆಲ್ಲಾ ಸವಲತ್ತು, ಸೌಲಭ್ಯ, ರಕ್ಷಣೆ ಸಿಗುತ್ತಿದೆ. ಆ ಎಲ್ಲಾ ಸವಲತ್ತು ಸೌಲಭ್ಯ, ರಕ್ಷಣೆ ಕೊಡುವುದಕ್ಕೆ ಆಗದೆ ಇದ್ದರೂ ಕೂಡ ಕೊನೆಯ ಪಕ್ಷ ಯಾವುದಾದರೂ ಒಂದು ರೀತಿಯಲ್ಲಿ ಈ ಕೃಷಿ ಕಾರ್ಮಿಕರಿಗೆ ಈ ಮೂರು ವರ್ಷಗಳ ಅವಧಿಯಲ್ಲಿ ಕೊಟ್ಟಂತಹ ಪ್ರಸಂಗ ಇದ್ದಿದ್ದರೆ ನಾನು ಒಪ್ಪುತ್ತಿದ್ದೆ. ಇವರ ಕೃಷಿ ನೀತಿಗೆ ಮೆರುಗು ಬಂದಿದೆ. ಈ ಕೃಷಿ ನೀತಿಯನ್ನು ಜನರು ಮೆಚ್ಚಿದ್ದಾರೆ. ಈ ಕೃಷಿ ನೀತಿಯ ಬಗ್ಗೆ ಜನರ ಬೆಂಬಲ ಇದೆ, ಎಂದು ನಾನು ಹೇಳುತ್ತಿದ್ದೆ. ಆದರೆ ಕೃಷಿ ಕಾರ್ಮಿಕರ ಬಗ್ಗೆ ಮೂರು ವರ್ಷಗಳ ತಮ್ಮ ಅವಧಿಯಲ್ಲಿ ಮಾಡಿದ ಕೆಲಸ ಏನೂ ಇಲ್ಲ. ಇನ್ನೂ ಅವರ ಕನಿಷ್ಠ ವೇತನ 26ಕ್ಕೆ ನಿಂತಿದೆ. ಅದಕ್ಕಿಂತ ಜಾಸ್ತಿ ಹೋಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರಿಗೆ ನಿಗದಿ ಮಾಡಿಲ್ಲ. ಸೆಂಟ್ರಲ್ ಗವರ್ನಮೆಂಟ್‌ನಲ್ಲಿ ಎಂಟನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ಸತತವಾಗಿ ಪ್ರಯತ್ನ ನಡೆಯುತ್ತಿದ್ದರೂ ಅದರ ಬಗ್ಗೆ ಸೆಂಟ್ರಲ್ ಗವರ್ನಮೆಂಟ್‌ನವರು ಸೇರಿಸಲಿಲ್ಲ. ರಾಜ್ಯ ಸರ್ಕಾರ ಮಿನಿಮಮ್ ವೇಜ್ ಆ್ಯಕ್ಟ್ ಎಂದು ಹೇಳುತ್ತಾರೆ. ಆದರೆ ಅದು ಇಂಪ್ಲಿಮೆಂಟ್ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಆದ್ದರಿಂದ ಇವತ್ತು ಒಂದು ಯಾವುದಾದರರೂ ಕೆಲಸವಾದರೂ ಮಾಡಬೇಕಾಗಿತ್ತು. ಇವೊತ್ತು ಒಟ್ಟು ಕಾರ್ಮಿಕರ ಸಂಖ್ಯೆಯಲ್ಲಿ ಮೂರನೆಯ ಎರಡು ಭಾಗದಷ್ಟು ಕೃಷಿ ಕಾರ್ಮಿಕರೇ ಇದ್ದಾರೆ. ಕೃಷಿ ಕ್ಷೇತ್ರವೇ ಇಂದು ನಮ್ಮ ಒಟ್ಟಾರೆ ಜನಸಂಖ್ಯೆಯ ಮೂರನೇ ಎರಡು ಭಾಗದಷ್ಟು ಜನರಿಗೆ ಉದ್ಯೋಗವನ್ನು ಕೊಡುತ್ತಿದೆ. ನಾವು ಬಹಳ ದಿವಸಗಳ ಕಾಲ ಇದರಲ್ಲಿ ಕಳೆದಿದ್ದೇವೆ. ಸ್ವಾತಂತ್ರ್ಯ ಬಂದು ಈಗಾಗಲೇ 50 ವರ್ಷಗಳು ಆಗಿವೆ. ಇಷ್ಟು ವರ್ಷಗಳಾಗಿದ್ದರೂ ಕೂಡ ಕೃಷಿ ಕಾರ್ಮಿಕರಿಗೆ ರಕ್ಷಣೆ ಕೊಡತಕ್ಕಂಥ ಕೆಲಸವನ್ನು ನಾವು ಮಾಡದೇ ಹೋದರೆ ರೈತರಿಗೆ ನಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅದಕ್ಕೋಸ್ಕರವೇ ನಾವು ಕೃಷಿ ಕಾರ್ಮಿಕರ ಕಲ್ಯಾಣ ನಿಧಿ ಎನ್ನುವ ರೀತಿಯಲ್ಲಿ ಕಾನೂನನ್ನು ಮಾಡಲು ಮುಂದಾಗಿದ್ದೆವು, ಆದರೆ ಅದು ಮಧ್ಯದಲ್ಲಿ ಯಾವುದೋ ಕಾರಣಾಂತರದಿಂದ ನಿಂತುಹೋಯಿತು. ಈಗಲಾದರೂ ನಮ್ಮ ಕೃಷಿ ಮಂತ್ರಿಗಳು ಈ ದಿಕ್ಕಿನಲ್ಲಿ ಏಕೆ ಚಿಂತನೆಯನ್ನು ಮಾಡಬಾರದು? ಏಕೆಂದರೆ ಕೃಷಿ ಕಾರ್ಮಿಕರಿಗೆ ಇಂದು ರಜಾದಿನಗಳ ಸೌಲಭ್ಯಗಳಾಗಲೀ, ಪ್ರಾವಿಡೆಂಟ್ ಫಂಡಾಗಲೀ, ಬೋನಸ್ ಆಗಲೀ ಅಥವಾ ಬೇರೆ ಕಾರ್ಮಿಕರಿಗೆ ಇ.ಎಸ್.ಐ ಸೌಲಭ್ಯ ಏನು ಸಿಗುತ್ತದೋ ಅದೂ ಕೂಡ ಇವರಿಗೆ ಸಿಗುವುದಿಲ್ಲ, ಇವರಿಗೆ ಯಾವುದೇ ರೀತಿಯಾದ ಸಾಮಾಜಿಕ ರಕ್ಷಣೆಯ ಪ್ರಯೋಜನ ದೊರೆಯುತ್ತಿಲ್ಲ. ತಾವೇನೋ ಹೇಳಿಬಿಟ್ಟರಿ, ಇಡೀ ರಾಷ್ಟ್ರದಲ್ಲಿಯೇ ತಂದಿಲ್ಲದ ಕೃಷಿ ನೀತಿಯನ್ನು ನಮ್ಮ ರಾಜ್ಯದಲ್ಲಿ ತಂದಿದ್ದೇವೆ, ಇದನ್ನು ತಂದಾಗ ಮಾನ್ಯ ದೇವೇಗೌಡರು ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು, ನಾನು ಕೃಷಿ ಸಚಿವನಾಗಿದ್ದೆ, ಆದರೆ ಇಂದು ಜೆ.ಹೆಚ್.

ಪಟೇಲ್‌ರವರು ಮುಖ್ಯಮಂತ್ರಿಗಳಾಗಿದ್ದಾರೆ. ಯಾರೂ ಮಾಡಲಾಗದಂಥ ಕೆಲಸವನ್ನು ನಾವು ಮಾಡಿದ್ದೇವೆ ಎಂದು ಶಹಭಾಸ್‌ಗಿರಿಯನ್ನು ಪಡೆದ ನೀವು ಮೊದಲನೇ ಪ್ರಾಶಸ್ತ್ಯದಲ್ಲಿಯೇ ಈ ಕೃಷಿ ಕಾರ್ಮಿಕರಿಗೆ ನ್ಯಾಯದಾನವನ್ನು ಮಾಡತಕ್ಕ ಕೆಲಸವನ್ನು ಮಾಡಲಿಲ್ಲವೆಂದರೆ ತಮ್ಮ ಸಾಮಾಜಿಕ ಚಿಂತನೆ ಯಾವ ದಿಕ್ಕಿನ ಕಡೆಗೆ ಹೋಗಿದೆ ಎನ್ನತಕ್ಕ ಪ್ರಶ್ನೆಯನ್ನು ಉಪಾಧ್ಯಕ್ಷರ ಮೂಲಕ ಕೇಳಬೇಕಾಗಿದೆ. ಇನ್ನು ಇವರ ಕೃಷಿ ನೀತಿಯಲ್ಲಿ ಬಂಡವಾಳ ಹೂಡಿಕೆಯ ವಿಚಾರವೇ ಎರಡನೇ ಅಂಶದಲ್ಲಿ ಬಂದಿದೆ. ಇವೊತ್ತು ನಮ್ಮ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಬಂಡವಾಳದ ಅವಶ್ಯಕತೆ ಇದೆ. ಏಕೆಂದರೆ ಇವೊತ್ತಿಗೂ ಕೂಡ ನಾವು ಮತ್ತು ನೀವೆಲ್ಲರೂ ವ್ಯವಸಾಯಗಾರರೇ, ನಾವೆಲ್ಲಾ ಕೃಷಿಯ ಬಗ್ಗೆ ಇಟ್ಟುಕೊಂಡಿರತಕ್ಕಂಥ ಮನೋಭೂಮಿಕೆಯೇ ಬೇರೆ. ಇವೊತ್ತು ಒಬ್ಬ ಸಾಮಾನ್ಯ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿರುವವನು 10 ಸಿಗರೇಟ್ ತಂದು ಮಾರಾಟ ಮಾಡಬೇಕಾದರೆ ಆತ ತನಗೆ ಒಂದೈದು ರೂ.ಗಳಾದರೂ ಲಾಭ ಬರಲೇಬೇಕೆಂದು ಲಾಭ ಮತ್ತು ನಷ್ಟದ ಬಗ್ಗೆ ಯೋಚನೆ ಮಾಡಿಯೇ ಮಾರಾಟ ಮಾಡುತ್ತಾನೆ. ಆದರೆ ವ್ಯವಸಾಯಗಾರರಾಗಿರುವವರು ಯಾರೂ ಕೂಡ ಈ ಲಾಭ ಮತ್ತು ನಷ್ಟದ ಲೆಕ್ಕ ಇಟ್ಟುಕೊಂಡು ಕೃಷಿಯನ್ನು ಮಾಡುತ್ತಿಲ್ಲ. ಈ ಭೂಮಿಗೆ ನಾವು ಅಂಟಿಕೊಂಡಿದ್ದೇವೆ. ಭೂತಾಯಿ ಏನು ನಮಗೆ ಫಲ ಕೊಡುತ್ತಾಳೋ ಅದನ್ನೇ ನಾವು ಪ್ರಸಾದ ಎಂದು ಸ್ವೀಕಾರ ಮಾಡುತ್ತೇವೆ. ಫಲ ಬಂದರೆ ಬರುತ್ತದೆ, ಇಲ್ಲದಿದ್ದರೆ ಇಲ್ಲ. ಫಲ ಬರದಿದ್ದರೆ ಏನೋ ದೇವರು ನಮಗೆ ಹೀಗೆ ಮಾಡಿಬಿಟ್ಟ ಎಂದು ಹೇಳಿಬಿಡುತ್ತೇವೆ, ಎಲ್ಲದಕ್ಕೂ ದೇವರ ಮೇಲೆ ಭಾರ ಹಾಕಿಬಿಡುತ್ತೇವೆ. ಎಲ್ಲಾ ವ್ಯವಸಾಯಗಾರನೂ ಹಣೆಬರಹವನ್ನು ನಂಬುತ್ತಾನೆ, ಅಂದರೆ ದೇವರನ್ನು ನಂಬುತ್ತಾನೆ. ಏನೋ ಭೂಮಿ ಇರುತ್ತದೆ, ಅದಕ್ಕೆ ಬೀಜ ಬಿತ್ತಬೇಕು, ಅದರ ಪ್ರಕಾರ ಬಿತ್ತುತ್ತೇವೆ, ಮಳೆ ಬರುತ್ತದೋ ಅಥವಾ ಇಲ್ಲವೋ ಗೊತ್ತಿಲ್ಲವಾದ ಕಾರಣ ದೇವರ ಮೇಲೆ ಭಾರಹಾಕಿಬಿಡುತ್ತೇವೆ. ಬೆಳೆ ಬರುತ್ತದೋ ಅಥವಾ ಇಲ್ಲವೋ ಎಂಬ ಬಗ್ಗೆ ದೇವರಿಗೆ ಭಾರ ಹಾಕಿ ನೋಡುವ ರೈತರುಗಳೇ ಜಾಸ್ತಿಯಾಗಿದ್ದಾರೆ. ರೈತರುಗಳೆಲ್ಲರೂ ಆ ಹಂತದೊಳಗೇ ಇದ್ದಾರೆಯೇ ವಿನಹ ಅದಕ್ಕಿಂತ ಮುಂದಕ್ಕೆ ಹೋಗಿಲ್ಲ. ಇಷ್ಟೆಲ್ಲಾ ಕಷ್ಟಪಟ್ಟು ಬೆಳೆ ಬಿತ್ತಿ ಬರುತ್ತೇವೆ, ನಮ್ಮ ಮನೆಗಳಲ್ಲಾಗಲೀ ಅಥವಾ ನಿಮ್ಮ ಮನೆಗಳಲ್ಲಾಗಲೀ ಕೇಳೇ ಕೇಳುತ್ತಾರೆ, ಏನಾಗುತ್ತದಪ್ಪ ಬೆಳೆ ಎಂದು, ಆಗ ನಾವು ಹೇಳುತ್ತೇವೆ, ಏನೋ ಬೆಳೆಯನ್ನು ಬಿತ್ತಿದ್ದೇವೆ, ಏನಾಗೂತ್ತದೋ ಏನೋ ನಮಗೆ ಗೊತ್ತಿಲ್ಲ ಎನ್ನುವಂಥ ಉತ್ತರವನ್ನು ಹೇಳುತ್ತೇವೆ. ಅಂದರೆ ಈ ಸ್ಥಿತಿಯನ್ನು ನಮ್ಮ ವ್ಯವಸಾಯ ಕ್ಷೇತ್ರ ತಲುಪಿದೆ. ಇನ್ನು ಕೃಷಿ ಕ್ಷೇತ್ರಕ್ಕೆ ಬಂಡವಾಳ ಹೂಡಿಕೆ ಬಗ್ಗೆ ಹೇಳಬೇಕೆಂದರೆ ಇಂದು ಇದೂ ಕೂಡ ಒಂದು ಕೈಗಾರಿಕೆಯ ಅಂಗ ಎಂದು ತಿಳಿದು ತನ್ಮೂಲಕ ಈ ಕೃಷಿ ಕ್ಷೇತ್ರಕ್ಕೆ ಬಂಡವಾಳವನ್ನು ಹೂಡಬೇಕೆನ್ನುವ ಭಾವನೆ ಇವೊತ್ತಿನವರೆಗೆ ನಮ್ಮ ದೇಶದ ರೈತರಿಗೆ ಬಂದಿಲ್ಲ. ಆ ರೀತಿಯ ಮನೋಭಾವನೆ ಬರಬೇಕೆನ್ನುವುದೇ ನಮ್ಮ ಮಂತ್ರಿಗಳು ಮಾಡಿರುವ ಕೃಷಿ ನೀತಿಯ ಆಧಾರ. ಇಂಥ ಕೃಷಿ ನೀತಿಯನ್ನು ಹೇಳಿದ ಮಾನ್ಯ ಮಂತ್ರಿಗಳು ಇದಕ್ಕಾಗಿ ಐದುಸಾವಿರ ಕೋಟಿಯನ್ನು ಖರ್ಚು ಮಾಡಲಾಗುವುದೆಂದು ಹೇಳಿರುವ ಹಿನ್ನೆಲೆಯಲ್ಲಿ ಈಗಾಗಲೇ ಮೂರು ವರ್ಷ ಕಳೆದಿರುವುದರಿಂದ ಇದಕ್ಕಾಗಿ3 ಸಾವಿರ ಕೋಟಿಗಳನ್ನು ಇದಕ್ಕಾಗಿ ತೊಡಗಿಸಿರಲೇಬೇಕಲ್ಲವೇ ? ಇನ್ನು ಇವರ ಆಡಳಿತಾವಧಿ ಇರುವುದು ಕೇವಲ ಒಂದೂವರೆ ವರ್ಷವಿರುವುದರಿಂದ ಇದುವರೆಗೆ ಮೂರು ಸಾವಿರ ಕೋಟಿ

ರೂ.ಗಳಂತೂ ತೊಡಗಿಸಿರಲೇಬೇಕಲ್ಲವೇ ? ನಾನು ಏಕೆ ಹೇಳುತ್ತಿದ್ದೇನೆಂದರೆ ಶ್ರೀಮಾನ್ ಬೈರೇಗೌಡರೇ ಕೃಷಿ ನೀತಿಯನ್ನು ಜಾರಿಗೆ ಕೊಟ್ಟಿದ್ದಾರಲ್ಲದೇ ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಆಜ್ಞೆ ಕೂಡ ಆಗಿದೆ. ಅದರ ಪ್ರಕಾರ ಕೃಷಿ ವಲಯಕ್ಕೆ ಪ್ರತಿ ವರ್ಷ ಒಂದು ಸಾವಿರ ಕೋಟಿ ರೂ.ಗಳನ್ನು ತೊಡಗಿಸುತ್ತೇವೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ ಹಾಗಾಯಿತು. ಆದುದರಿಂದ ನಾನು ಇಂದು ಕೇಳುತ್ತಿದ್ದೇನೆ, ಈ ಮೂರು ವರ್ಷಗಳ ಅವಧಿಯಲ್ಲಿ ಎಷ್ಟು ಬಂಡವಾಳವನ್ನು ತೊಡಗಿಸಿದ್ದೀರಿ ಎಂಬ ಬಗ್ಗೆ ಸದನಕ್ಕೆ ಲೆಕ್ಕ ಕೊಡಬೇಕಾಗುತ್ತದೆ. ಈ ವಿವರವನ್ನು ಅವರು ಆಮೇಲೆ ಕೊಡಲಿ. ಇನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಒಂದೊಂದು ಆಧುನಿಕವಾದಂಥ ಕೃಷಿ ಕ್ಷೇತ್ರ ವಲಯವನ್ನು ಸ್ಥಾಪನೆ ಮಾಡುತ್ತೇವೆಂದು ಮಂತ್ರಿಗಳು ತಮ್ಮ ಕೃಷಿ ನೀತಿಯಲ್ಲಿ ಹೇಳಿದ್ದಾರೆ. ಆ ಕೃಷಿ ಕ್ಷೇತ್ರದಲ್ಲಿ ಬೀಜಗಳು, ಗೊಬ್ಬರಗಳು, ಪರಿಕರಗಳು ಮತ್ತು ಇನ್ನಿತರ ಕೃಷಿ ಸಾಮಗ್ರಿಗಳು ಎಲ್ಲವೂ ಸಿಗುವಂಥ ಏರ್ಪಾಡನ್ನು ಮಾಡಲಾಗುವುದೆಂದು ಕೃಷಿ ನೀತಿಯಲ್ಲಿ ಹೇಳಿದ್ದಾರೆ. ಆದರೆ ಈ ಮೂರು ವರ್ಷದ ಅವಧಿಯಲ್ಲಿ ಇಂಥ ಯಾವುದೇ ಒಂದು ಕೇಂದ್ರ ಯಾವುದೇ ತಾಲ್ಲೂಕಿನಲ್ಲಿಯೂ ಕೂಡ ಸ್ಥಾಪನೆಯಾಗಿಲ್ಲ. ಅಂದರೆ ಇದರರ್ಥ ಇವರ ಕೃಷಿ ಬಂಡವಾಳ ಹೂಡಿಕೆಯ ಯೋಜನೆಯ ಮಾತು ಕೇವಲ ಕಾಗದದ ಮೇಲೆ ಉಳಿದಿದೆಯೇ ವಿನಃ ಕೃತಿಯಲ್ಲಿ ಬಂದಿಲ್ಲವೆಂದಾಯಿತು. ಈ ರೀತಿಯಲ್ಲಿ ಈ ಯೋಜನೆ ನಡೆದಿದೆ. ಇನ್ನು ನಮ್ಮ ರೈತರಿಗೆ ಅನೇಕ ರೀತಿಯ ಸಾಲವನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಬೆಳೆ ಸಾಲದಲ್ಲಿ, ಮಧ್ಯಮಾವಧಿ ಸಾಲವಿರಬಹುದು. ಅಲ್ಪಾವಧಿ ಸಾಲವಿರಬಹುದು. ಇಂಥ ಸಾಲವನ್ನು ಕೊಡತಕ್ಕಂಥ ಬ್ಯಾಂಕುಗಳಲ್ಲಿ ಪಿ.ಎಲ್.ಡಿ. ಬ್ಯಾಂಕ್ ಒಂದು ಕಡೆ ಇರುತ್ತದೆ. ಭೂ ಅಭಿವೃದ್ಧಿ ಬ್ಯಾಂಕ್ ಒಂದು ಕಡೆ ಇರುತ್ತದೆ, ಜಿಲ್ಲಾ ಬ್ಯಾಂಕ್ ಇನ್ನೊಂದು ಕಡೆ ಇರುತ್ತದೆ, ಇದರ ಬಗ್ಗೆ ತಾವು ಕೃಷಿ ನೀತಿಯಲ್ಲಿ ಏನು ಹೇಳಿದ್ದೀರೆಂದರೆ ಮೇಲಿನದೆಲ್ಲವನ್ನೂ ರದ್ದು ಮಾಡಿ ರೈತನಿಗೆ ಯಾವುದೇ ರೀತಿಯ ಸಾಲವನ್ನಾದರೂ ಕೂಡ ಒಂದೇ ಕಡೆ ಸಿಗುವಂತೆ ಆಗಲು ಸಿಂಗಲ್ ವಿಂಡೋ ಏಜೆನ್ಸಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಇಲ್ಲಿ ರೈತನಿಗೆ ಬೆಳೆ ಸಾಲವಾಗಲೀ, ಭೂ ಅಭಿವೃದ್ಧಿಗೆ ಸಾಲವಾಗಲೀ, ಮಧ್ಯಮಾವಧಿ ಸಾಲವಾಗಲೀ ಅಥವಾ ಪಶು ಸಂಗೋಪನೆಗಾಗಲೀ ಅಥವಾ ಮತ್ಯಾವ ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯ ಸಾಲವಾಗಲೀ ಅದು ರೈತನಿಗೆ ಈ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿಯೇ ಸಿಗುವ ಹಾಗೆ ಮಾಡುತ್ತೇವೆಂದು ಕೃಷಿ ನೀತಿಯಲ್ಲಿ ಹೇಳಿದ್ದೀರಿ. ಇಂಥ ಶಿಫಾರಸ್ಸನ್ನು ಈ ಹಿಂದೆಯೇ ದಿವಂಗತ ಚೆನ್ನಬಸಪ್ಪನವರು ಕೃಷಿ ಕ್ಷೇತ್ರಕ್ಕೆ ಸಂಬಂಧಪಟ್ಟ ಉಪಸಮಿತಿಯನ್ನು ಹನುಮಂತಪ್ಪನವರ ಕಾಲದಲ್ಲಿ ಮಾಡಿದ್ದಾಗ ಆಗಲೇ ಅವರು ತಾವು ಕೊಟ್ಟಂಥ ವರದಿಯಲ್ಲಿ ಸಿಂಗಲ್ ವಿಂಡೋ ಏಜೆನ್ಸಿ ಬಗ್ಗೆ ಶಿಫಾರಸ್ಸನ್ನು ಮಾಡಿದ್ದರು. ಅದರಲ್ಲಿ ಏನು ಹೇಳದ್ದಾರೆಂದರೆ, ಈ ಭೂ ಅಭಿವೃದ್ಧಿ ಬ್ಯಾಂಕ್, ಜಿಲ್ಲಾ ಸಹಕಾರಿ ಬ್ಯಾಂಕ್, ಇಂಥವನ್ನೆಲ್ಲಾ ರದ್ದು ಮಾಡಿ ಒಂದೇ ರೀತಿಯ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿದ್ದರು. ಆದರೆ ಇದು ಇಲ್ಲಿಯವರೆಗೂ ಕಾರ್ಯಗತವಾಗಿಲ್ಲ. ನಮ್ಮ ಬೈರೇಗೌಡರು ಕೃಷಿ ಸಚಿವರಾದ ಮೇಲೆ ಕೃಷಿ ನೀತಿಯಲ್ಲಿ ಈ ಸಿಂಗಲ್ ವಿಂಡೋ ಏಜೆನ್ಸಿ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಆದರೆ ಈಗಾಗಲೇ ಮೂರು ವರ್ಷ ಕಳೆದಿದ್ದರೂ ಕೂಡ ಇನ್ನೂ ಏಕೆ ಸಿಂಗಲ್ ವಿಂಡೋ ಏಜೆನ್ಸಿಯನ್ನು ಮಾಡಿಲ್ಲವೆನ್ನುವ ಬಗ್ಗೆ ಮಂತ್ರಿಗಳು ಉತ್ತರ

ಕೊಡಬೇಕು. ಇದನ್ನು ಮಾಡುವುದಕ್ಕೆ ನಿಮಗೆ ಸಮಯ ಸಿಗಲಿಲ್ಲವೇ ಅಥವಾ ಅಂದು ನೀವು ಕೃಷಿ ನೀತಿಯನ್ನು ಮಾಡುವಾಗ ಇದ್ದಂಥ ಅನಿಸಿಕೆಗಳು ಮತ್ತು ಅಪೇಕ್ಷೆಗಳು ಇಂದು ಮಾಯವಾಗಿಬಿಟ್ಟಿವೆಯೇ? ಏಕೆಂದರೆ ಇಂಥ ಒಂದು ಕಾರ್ಯಕ್ರಮವನ್ನು ಜಾರಿಗೆ ತರುವುದಕ್ಕೆ ನಿಮಗೆ ಮೂರು ವರ್ಷಗಳು ಬೇಕೆ? ಏಕೆ ನೀವು ಇದನ್ನು ಮಾಡಲಿಲ್ಲ? ಏಕೆಂದರೆ ಇಂದು ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಇಂದು ಸಾಕಷ್ಟು ಇದೆ. ಕೆಲವರು ನಮಗೆ ಜಿಲ್ಲಾ ಸಹಕಾರಿ ಬ್ಯಾಂಕ್ ಇರಬೇಕು ಎಂದರೆ ಮತ್ತೆ ಕೆಲವರು ಭೂ ಅಭಿವೃದ್ಧಿ ಬ್ಯಾಂಕ್ ಇರಬೇಕು ಎನ್ನುತ್ತಾರೆ, ಇನ್ನು ಕೆಲವರು ಈ ಎರಡೂ ವ್ಯವಸ್ಥೆಯಲ್ಲಿ ಸಾಲ ಪಡೆಯದಂಥವರು ನಮ್ಮ ಗ್ರಾಮೀಣ ಬ್ಯಾಂಕಿನ ಮುಖಾಂತರ ಸಹಾಯವನ್ನು ಪಡೆಯುತ್ತಾರೆ, ಇನ್ನೂ ಕೆಲವರು ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಸಹಾಯವನ್ನು ಪಡೆಯುತ್ತಾರೆ, ಈ ವ್ಯವಸ್ಥೆಯಿಂದ ಏನಾಗಿದೆಯೆಂದರೆ ಇಂದು ಇವುಗಳು ನೀಡತಕ್ಕಂಥ ಬಂಡವಾಳದ ಕೊರತೆ ಹೆಚ್ಚಾಗಿದೆ. ಆದುದರಿಂದಲೇ ಇಂದು ಯಾವುದಾದರೂ ಒಂದೇ ಏಜೆನ್ಸಿ ಕೃಷಿ ಕ್ಷೇತ್ರಕ್ಕೆ ಬಂಡವಾಳವನ್ನು ತೊಡಗಿಸುವ ಕೆಲಸವನ್ನು ಮಾಡದೇ ಹೋದರೆ ನೀವು ಹೇಳಿದ ರೀತಿಯಲ್ಲಿ ಕೃಷಿ ಕ್ಷೇತ್ರಕ್ಕೆ ಹೆಚ್ಚು ಬಂಡವಾಳವನ್ನು ತೊಡಗಿಸುತ್ತೇವೆಂದು ಹೇಳಿದ್ದೀರಿ ಅದು ನಿಜವಾಗಿಯೂ ಫಲ ಕೊಡುವುದಿಲ್ಲ. ಬಂಡವಾಳ ಹೆಚ್ಚು ಕೊಡದಿದ್ದರೆ ಹೆಚ್ಚು ದುಡಿಮೆಯಾಗುವುದಿಲ್ಲ, ಏಕೆಂದರೆ ಈ ಕಾಲವೇ ಅಂಥದ್ದಾಗಿದೆ. ಏಕೆಂದರೆ ಈಗ ಕೃಷಿ ಸಾಮಗ್ರಿಗಳೆಲ್ಲಾ ದುಬಾರಿ ಬೆಲೆಯಾಗಿದೆ. ಈ ದುಬಾರಿ ಕಾಲದಲ್ಲಿ ನೀವು ಬಂಡವಾಳವನ್ನು ಸಕಾಲದಲ್ಲಿ ತೊಡಗಿಸದೇ ಹೋದರೆ ನೀವು ಹೇಳಿರತಕ್ಕಂಥ ಎಲ್ಲಾ ಮಾತುಗಳು ಕೇವಲ ಭ್ರಮೆಯಾಗಿ ಉಳಿಯುತ್ತವೆಯೇ ವಿನಃ ಕಾರ್ಯರೂಪಕ್ಕೆ ತರುವುದಕ್ಕಾಗುವುದಿಲ್ಲ. ಆದುದರಿಂದ ಇನ್ನು ಮುಂದಾದರೂ ನೀವು ಎಲ್ಲಾ ಬ್ಯಾಂಕ್‌ಗಳನ್ನು, ಎಲ್ಲಾ ಏಜೆನ್ಸಿಗಳನ್ನು ಹಣಕಾಸಿನ ಸಂಸ್ಥೆಗಳನ್ನು ಒಂದುಗೂಡಿಸಿ ಒಂದೇ ಏಜೆನ್ಸಿಯನ್ನಾಗಿ ಮಾಡಿ ನಮ್ಮ ಕೃಷಿಕರಿಗೆ ಮುಕ್ತಿಯನ್ನು ಒದಗಿಸುತ್ತೀರಾ ಎಂಬ ಬಗ್ಗೆ ದಯವಿಟ್ಟು ತಾವು ಹೇಳಬೇಕು. ನಿಮಗೆ ಇದನ್ನು ಮಾಡುವುದಕ್ಕಾದರೆ ಆಗುತ್ತದೆ ಎಂದು ಹೇಳಿ, ಒಂದು ವೇಳೆ ಆಗದಿದ್ದರೆ ನಮಗೆ ಆಗುವುದಿಲ್ಲವೆಂದು ಖಂಡಿತವಾಗಿ ಹೇಳಿಬಿಡಿ. ಏಕೆಂದರೆ ಇದುವರೆಗೆ ಕೃಷಿ ನೀತಿ ಎನ್ನುವುದಿರಲಿಲ್ಲ, ಕೃಷಿ ನೀತಿಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರಿ ಆಜ್ಞೆ ಹಿಂದೆ ಹೊರಟಿರಲಿಲ್ಲ, ಆದರೆ ನೀವು ಆ ಸರ್ಕಾರಿ ಆಜ್ಞೆಯನ್ನು ಹೊರಡಿಸಿರುವುದರಿಂದ ನೀವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ನೀವು ಕೃಷಿ ನೀತಿಯನ್ನು ಮಾಡುವಾಗಲೇ ಮೊದಲೇ ಯೋಚನೆ ಮಾಡಿ ಯಾವ ಕೆಲಸವನ್ನು ಮಾಡುವುದಕ್ಕೆ ನಿಮ್ಮಿಂದ ಆಗುತ್ತದೆ ಅದನ್ನು ಮಾತ್ರ ಸೇರಿಸಿಕೊಂಡು ಮಾಡುವುದಕ್ಕಾಗದ ಕೆಲಸಗಳ ಬಗ್ಗೆ ಸೇರಿಸಬಾರದು ಎಂಬ ಬಗ್ಗೆ ತಾವು ಮೊದಲೇ ಯೋಜನೆ ಮಾಡಬೇಕಾಗಿತ್ತು.

4.00 ಪಿ.ಎಂ

ನೀವು ಇವತ್ತು ಒಂದು ಸಾರಿ ಸೇರಿಸಿ ಕೃಷಿ ನೀತಿ ಎಂದು ಹೇಳಿಕೊಂಡು ಸರ್ಕಾರದ ಆಜ್ಞೆ ಹೊರಡಿಸಿ ಅದಕ್ಕೆ ಮೇಲ್ವಿಚಾರಣೆ ಮಾಡತಕ್ಕಂಥ ಒಂದು ಸಮಿತಿಯ ಅಧ್ಯಕ್ಷರ ನೀವೇ ಆಗಿ ಮೂರು ವರ್ಷಗಳಾದರೂ ಈ ಕೆಲಸ ನೀವು ಮಾಡಲಿಲ್ಲವೆಂದರೆ, ನೀವು ಯಾವಾಗ ಮಾಡುವುದು? ಇನ್ನು ಉಳಿದದ್ದು ಎಷ್ಟು ವರ್ಷ ಅಧ್ಯಕ್ಷರೇ, ಇನ್ನು ಒಂದು ವರ್ಷ ಮಾತ್ರ. ಅದರ ಮೇಲೆ ಉಳಿದಂತಹ ಮೂರು ತಿಂಗಳು ಅಷ್ಟೊತ್ತಿಗೆ ಎಲೆಕ್ಷನ್ ಫೀವರ್ ಪ್ರಾರಂಭವಾಗುತ್ತದೆ. ಇದರ ಕಡೆ ಲೆಕ್ಕ

ಹೋಗುವುದಿಲ್ಲ. ಆದುದರಿಂದ ದಯವಿಟ್ಟು ಇವತ್ತು ರಾಜ್ಯದ ಜನರಿಗೆ ಕೊಡತಕ್ಕಂಥ ಮಾತನ್ನು ತಾವು ಉಳಿಸಿಕೊಳ್ಳತಕ್ಕಂಥ ನಿಟ್ಟಿನಲ್ಲಿ ಏನು ಈ ಸದನದಲ್ಲಿ ಉತ್ತರವನ್ನು ಕೊಡುತ್ತೀರಿ ಎಂದು ಹೇಳಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಸಹಕಾರಿ ಇಲಾಖೆ ಬೇಡಿಕೆ ಬಗ್ಗೆ ನೀವು ಮಾತನಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಅವರಿಗೆ ಹೇಳುವುದಕ್ಕೆ ಹೊರಟಿದ್ದೇನೆ ನಾನು? ಅವರು ಹೇಳಿಕೊಂಡಿರುವುದು ಈ ಕೃಷಿ ನೀತಿ. ಈ ಕೃಷಿನೀತಿಗೆ ಅಥಾರಿಟಿ ತಾವು. ಆಧಾರ ಪುರುಷರು ಕೃಷಿಸಚಿವರು. ನಾನು ಕೇಳುತ್ತಿರುವುದು ಕೃಷಿ ಸಚಿವರನ್ನು. ಇದರ ಅಧ್ಯಕ್ಷರು ನೀವು. ನೀವೇ ಹೇಳಬೇಕಾದದ್ದು, ಇದರ ಸೂತ್ರಧಾರಿ ನೀವು, ಆಧಾರಸ್ಥಂಬ ನೀವು, ಇವತ್ತು ನೀವು ಇದಕ್ಕೆ ಉತ್ತರ ಹೇಳಬೇಕೇ ಹೊರತು ಸಹಕಾರ ಸಚಿವರಲ್ಲ. ಇದನ್ನು ಮಾಡಿದ ನಂತರ ಸಹಕಾರ ಸಚಿವರು ಎಷ್ಟು ಹಣ ಬೇಕು? ಎಷ್ಟು ಕೊಡಬೇಕು? ಹೇಗೆ ಕೊಡಬೇಕು ಎನ್ನುವುದನ್ನು ನೋಡಬೇಕಾಗುತ್ತದೆ. ಈ ಕೆಲಸವನ್ನು ನೀವು ಪಂಚಭೂತ ನೀವಿದ್ದೀರಿ. ಪಂಚಭೂತಗಳು ನಿರ್ಧಾರ ಮಾಡತಕ್ಕಂಥ ಕೆಲಸ ಇದು.

ಶ್ರೀ ಎಂ. ಪಿ. ಪ್ರಕಾಶ್ : ಇವರೇನು ವಾಯುವೇ ಭೂತವೇ ಏನು ಎಂದು ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ : ಮೊದಲನೇ ಭೂತ ಅವರು.

ಶ್ರೀ ವಾಟಾಳ್ ನಾಗರಾಜ್ : ಒಂದು ಕಾಲದಲ್ಲಿ ಪಂಚಭೂತದಲ್ಲಿ ಇವರೂ ಒಂದು ಭೂತ. ಈಗ ಆ ಭೂತವನ್ನು ಬಿಟ್ಟು ಬೇರೆ ಕಡೆ ಹೊರಟು ಹೋಗಿದ್ದಾರೆ ಇವರು.

ಶ್ರೀ ಕಾಗೋಡು ತಿಮ್ಮಪ್ಪ : ಇನ್ನು ನಮ್ಮ ಕೃಷಿಗೆ ತತ್ಸಂಬಂಧವಾಗಿ ವಿಶೇಷ ಆಧಾರ ಎಂದರೆ ನೀರು. ಈ ನೀರಿಗೆ ಸಂಬಂಧಪಟ್ಟ ಹಾಗೆ ಒಂದು ಕೃಷಿ ನೀತಿಯನ್ನು ಕೂಡ ಅವರು ಹಂಚಿಕೊಂಡಿದ್ದಾರೆ. ಅವರು ಒಳ್ಳೆಯ ಮಾತನ್ನು ಹೇಳಿದ್ದಾರೆ, ಅದು ವಿಚಾರ ಮಾಡುವಂಥಾದ್ದು ಹೌದು. ಇವತ್ತು ಕೆರೆಗಳು ಇವೆ, ಅಣೆಕಟ್ಟುಗಳು ಇವೆ. ಹಿಂದೆ ಮಾಡಿರುವುದು ಇದೆ, ಮುಂದೆ ಮಾಡುವುದು ಇದೆ. ಇವತ್ತಿನ ದಿನ ಹಿಂದೆ ಮಾಡಿರುವಂತಹ ಕೆರೆಗಳನ್ನು ಉಳಿಸಿಕೊಳ್ಳಬೇಕು ಮತ್ತು ಅವುಗಳನ್ನು ಸುಧಾರಣೆ ಮಾಡಬೇಕು. ನೀರು ಹಾಳಾಗಬಾರದು, ಅದು ಸರಿಯಾದ ರೀತಿಯಲ್ಲಿ ಬಳಕೆಯಾಗಬೇಕು, ಇದೆಲ್ಲಾ ನೋಡಬೇಕೆಂದು ತಾವು ಹೇಳಿಕೊಂಡಿದ್ದೀರಿ. ಅದಕ್ಕೆ ನಾವು ಇಷ್ಟೆಲ್ಲಾ ಹಣ ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ವಸೂಲು ಆಗತಕ್ಕಂಥ ಹಣ ಇವತ್ತು ನಿರ್ವಹಣೆಗೆ ಸಾಕಾಗುತ್ತಿಲ್ಲ. ಇವತ್ತು ಬಂಡವಾಳ ಅದರಿಂದ ಹುಟ್ಟುವುದು ಹೋಗಲಿ, ನಿರ್ವಹಣಾ ವೆಚ್ಚ ಕೂಡ ಏನು ನೀರನ್ನು ಕೊಡುತ್ತಿದ್ದೇವೆ ಅದು ಬರುತ್ತಾ ಇಲ್ಲವೆಂದು ಹೇಳುತ್ತಿದ್ದೇನೆ. ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ, ನೀರಿನ ದರದ ವಿಚಾರದಲ್ಲಿ ರೈತರು ಕೊಡತಕ್ಕಂಥ ಕೆಲಸವನ್ನು ನಿರ್ದಾಕ್ಷಿಣ್ಯವಾಗಿ ಕೊಡಬೇಕಾಗುತ್ತದೆ. ವಾಟರ್ ರೇಟ್ ಆ್ಯಕ್ಟ್‌ಗೆ ಒಂದು ತಿದ್ದುಪಡಿ ತರುತ್ತೇವೆಂದು ಹೇಳಿದ್ದರು. ಇವತ್ತಿನವರೆಗೂ ನೀವು ಏಕೆ ಇರಿಗೇಷನ್ ಆ್ಯಕ್ಟ್‌ಗೆ ತಿದ್ದುಪಡಿ ತಂದಿಲ್ಲ. ಬಳಕೆದಾರರ ಸಂಘವನ್ನು ಮಾಡುತ್ತೇವೆಂದು ಹೇಳಿದಿರಿ. ಆದರೆ ಮಾಡಿಲ್ಲ. ನೀರಾವರಿ ಕಾನೂನಿಗೆ ತಿದ್ದುಪಡಿ ಮಾಡುತ್ತೇವೆಂದು ಹೇಳಿ, ಅದನ್ನು ಮಾಡಿಲ್ಲ. ಈ

ಮೂರು ವರ್ಷಗಳ ಅವಧಿಯಲ್ಲಿ ನೀರಾವರಿ ಕ್ಷೇತ್ರವನ್ನು ಬಳಸಿಕೊಳ್ಳತಕ್ಕಂಥ ವಿಧಾನದಲ್ಲಿ ಅಥವಾ ನಿಜವಾಗಿ ಬಳಸಿಕೊಂಡಿರತಕ್ಕಂಥ ರೈತರಿಂದ ನಾವು ಪಡೆಯತಕ್ಕಂಥ ಸಂದರ್ಭದಲ್ಲಿ ಪಡೆಯುವುದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ತರುವ ದೃಷ್ಟಿಯಿಂದ ನೀವು ಯಾವುದೇ ಕೆಲಸವನ್ನು ಇವತ್ತಿನವರೆಗೂ ಮಾಡಲಿಲ್ಲವೆಂದರೆ ನಿಮ್ಮ ಕೃಷಿ ನೀತಿ ಧೋರಣೆ ಏನಾಯಿತು? ನಮ್ಮ ಹಣಕಾಸಿನ ಸಚಿವರು ಹೊರಗೆ ಹೋದರು. ನೀರಾವರಿ ಸಚಿವರು ಇಲ್ಲಿ ಇದ್ದಾರೆ. ದೊಡ್ಡ ನೀರಾವರಿ, ಮಧ್ಯಮ ನೀರಾವರಿ ಇವತ್ತು 24-25 ಲಕ್ಷ ಹೆಕ್ಟೇರ್‌ನಷ್ಟು ಇದೆ. ನಮಗೆ ಕೃಷಿ ಭೂಮಿ ಬೆಳೆಗೆ ಒಳಪಟ್ಟಿರತಕ್ಕಂಥ ಭೂಮಿ ಇರುವುದು ಒಂದು ಕೋಟಿ ನಾಲ್ಕು ಲಕ್ಷ ಹೆಕ್ಟೇರ್ ಭೂಮಿ ಇದೆ. ಮಳೆಯನ್ನು ಆಧಾರಿತ ಭೂಮಿ ಸುಮಾರು 75 ಲಕ್ಷ ಹೆಕ್ಟೇರ್ ಇದೆ. ಇವತ್ತು ಎಷ್ಟೇ ನಾವು ದೊಡ್ಡ ಮತ್ತು ಮಧ್ಯಮ ನೀರಾವರಿ ಮಾಡಿದರೂ ಕೂಡ ನಮ್ಮ ಎಲ್ಲಾ ಕೃಷಿ ಭೂಮಿಗೆ ನೀರನ್ನು ಅದರ ಮೂಲದಿಂದ ಕೊಡುವುದಕ್ಕೆ ಆಗುವುದಿಲ್ಲ. ಅದರಿಂದಾಗಿ ನಮಗೆ ಪ್ರಾರಂಭದ 200-300 ವರ್ಷಗಳಿಂದ 35-36 ಸಾವಿರ ಕೆರೆಗಳು ಏನಿವೆ ಇವುಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಎಳ್ಳಷ್ಟು ಆಸಕ್ತಿ ವಹಿಸದೆ ಹೋದರೆ ಹೊಸ ಕೆರೆ ಮಾಡುವುದಕ್ಕೆ ಎಲ್ಲಿ ಜಾಗ ಇದೆ? ಯಾವ ತಾಲ್ಲೂಕಿನಲ್ಲಿ ಕೂಡ ಒಂದು ಹೊಸ ಕೆರೆ ಮಾಡುವುದಕ್ಕೆ ಅವಕಾಶ ಇಲ್ಲ. ಇರುವ ಕೆರೆಗಳು ಭೂಮಿಯಾಗಿ ಹೋಗಿದೆ. ಇರುವಂತಹ ಕೆರೆಗಳನ್ನು ಜೀರ್ಣೋದ್ಧಾರ ಮಾಡಿ ಅವುಗಳಲ್ಲಿ ಹೆಚ್ಚು ನೀರನ್ನು ಸಂಗ್ರಹಣೆ ಮಾಡಿ ಆ ಅಚ್ಚು ಕಟ್ಟುದಾರರಿಗೆ ಪೂರ್ಣ ಪ್ರಮಾಣದಲ್ಲಿ ನೀರನ್ನು ಕೊಡುವುದಕ್ಕೆ ಇವತ್ತು ಹೆಚ್ಚು ಹಣ ಖರ್ಚು ಮಾಡದೇ ಹೋದರೆ ನೀವು ಯಾವರೀತಿ ಮಾಡುತ್ತೀರಿ? ಈಗ ತಾವು ಹೂಳು ತೆಗೆಯತಕ್ಕಂಥ ವಿಚಾರವನ್ನು ಹೇಳುತ್ತಿದ್ದೀರಿ. ಇದರ ಬಗ್ಗೆ ಆಗಲೇ ಚರ್ಚೆ ಮಾಡಿದ್ದೇವೆ. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ವಿದ್ಯುಚ್ಛಕ್ತಿ ಮತ್ತು ನೀರಾವರಿ ಕ್ಷೇತ್ರ ಪ್ರಮುಖವಾದ ಕ್ಷೇತ್ರಗಳಾಗಿವೆ. ನೂರಕ್ಕೆ ಹೆಚ್ಚುಕಡಿಮೆ 45ರಷ್ಟು ಆಯವ್ಯಯ ಪೂರ್ತಿ ಅದಕ್ಕೆ ಹೋಗುತ್ತಿದೆ. ಆದರೆ ಸಣ್ಣ ನೀರಾವರಿಗೆ ಎಷ್ಟು ಕೊಡುತ್ತಿದ್ದೇವೆ? ಈಗ ಮಾನ್ಯ ತಿಪ್ಪೇಸ್ವಾಮಿಯವರು ಇಲ್ಲೇ ಇದ್ದಾರೆ. ಇವರು ನಾವು ಮಾಡಿಸುತ್ತೇವೆಂದು ಹೇಳುತ್ತಾರೆ. ಹೂಳು ತೆಗೆಯುವುದಕ್ಕೆ ಅವರೇ ದುಡ್ಡು ಕೊಡಬೇಕು. 1997-98ನೇ ಸಾಲಿನಲ್ಲಿ ಹೂಳು ತೆಗೆಯುವುದಕ್ಕೆ ಐದು ರೂಪಾಯಿ ಕೂಡ ನೀವು ಕೊಟ್ಟಿಲ್ಲ. ಖರ್ಚು ಮಾಡಿಲ್ಲ. ನಿಮ್ಮ ಕಾರ್ಯಕ್ರಮ ಏನು? ಈಗ ನಾನು 10 ಕೋಟಿ ರೂಪಾಯಿ ಕೊಡುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೂಳು ಎತ್ತುವುದಕ್ಕೋಸ್ಕರ ಹಣ ಕೊಡುತ್ತೇವೆ, ಕ್ರೇನ್ ತರಿಸುತ್ತೇವೆ ಎಂದು ಒಂದು ವಾರದ ಹಿಂದೆ ನಮಗೆ ಮಂತ್ರಿಗಳು ಹೇಳಿದ್ದರು. ನಾನು ಬೆಳಿಗ್ಗೆ ಕೂಡ ಹೇಳಿದೆ. ನಾವು ರಾತ್ರಿಯೆಲ್ಲಾ ರೆಡಿ ಇಟ್ಟುಕೊಂಡು ಕುಳಿತಿದ್ದೇವೆ. ಒಂದು ಎಕ್ಸ್‌ಕವೇಟರ್ ಬರಲಿಲ್ಲ. ಮೈನರ್ ಇರಿಗೇಷನ್ ಚೀಫ್ ಇಂಜಿನೀಯರ್ ಯಾರೋ ಮಹಾನುಭಾವರು ಒಂದು ರೇಟ್ ಫಿಕ್ಸ್ ಮಾಡಿದ್ದಾರೆ. ಆ ರೇಟ್ ಇರೋವರೆಗೂ ಆ ಎಕ್ಸ್‌ಕವೇಟರ್ ಬರುವುದಿಲ್ಲ. ಹೂಳು ಎತ್ತುವುದಿಲ್ಲ. ಆ ರೇಟ್‌ಗೆ ಯಾರೂ ಬರುವುದಕ್ಕೆ ಸಾಧ್ಯವಿಲ್ಲ. ರೇಟ್ ಜಾಸ್ತಿ ಮಾಡಿ. ಇಲ್ಲದಿದ್ದರೆ ನೀವು ಸುಮ್ಮನೆ ಹೆಸರಿಗೆ ಕಾರ್ಯಕ್ರಮ ಎಂದು ಇಟ್ಟು ಕೊಂಡಿದ್ದರೆ ಯಾವ ಕೆರೆಯ ಹೂಳನ್ನೂ ಎತ್ತುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಣ್ಣ ನೀರಾವರಿ ಮಂತ್ರಿಗಳು ಇಲ್ಲೇ ಇದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕೆರೆಗಳು ಇಟ್ಟುಕೊಂಡು ಒಂದು ಕೃಷಿ ನೀತಿ ತಂದು ಇರತಕ್ಕಂಥ ಜಲ ಮೂಲಗಳನ್ನು ಜೀರ್ಣೋದ್ಧಾರ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟು ಆಜ್ಞೆ ಮುಖಾಂತರ ಹೊರಡಿಸಿ. ಈ ಜೀರ್ಣೋದ್ಧಾರ ಮಾಡುವುದಕ್ಕೆ ನಿಮಗೆ ಪ್ರತಿ ವರ್ಷ 50 ಕೋಟಿ ರೂಪಾಯಿ ಕೊಡದೇ ಹೋದರೆ ಇದೆಲ್ಲಾ ಬರೀ ಮಾತಿನಿಂದ ಏನು ಪ್ರಯೋಜನ? 5 ಲಕ್ಷ ರೂಪಾಯಿ ಖರ್ಚು ಮಾಡಿ ಹೊಸ ಕೆರೆ ಕಟ್ಟುವುದಕ್ಕೆ ಆಗುತ್ತದೆಯೇ? 5 ಲಕ್ಷ ಅಥವಾ 10 ಲಕ್ಷ ರೂಪಾಯಿ ಖರ್ಚು ಮಾಡಿದರೂ ಇವತ್ತು ಹೊಸ ಕೆರೆಗಳನ್ನು ಕಟ್ಟುವುದಕ್ಕೆ ಅವಕಾಶ ಇದೆಯೇ? ಆದ್ದರಿಂದ ಅವುಗಳನ್ನು ಜೀರ್ಣೋದ್ಧಾರ ಮಾಡುವಂತಹ ಕೆಲಸ ಇವತ್ತು ಅಗತ್ಯವಾಗಿದೆ. ಏಕೆಂದರೆ ಅವುಗಳನ್ನು 200-300 ವರ್ಷಗಳ ಹಿಂದೆ ಮಾಡಿರುವುದು. ಅವುಗಳ ಏರಿಗಳು, ಬಂಡುಗಳು ಕಾಲಾಂತರದಲ್ಲಿ ಅಡಿಪಾಯದಲ್ಲಿ ಸಾಕಷ್ಟು ನಿಶ್ಯಕ್ತಿ ಆಗಿವೆ. ಅವುಗಳ ಬುಡವನ್ನು ಗಟ್ಟಿ ಮಾಡಬೇಕಾಗಿದೆ. ಹೂಳನ್ನು ತೆಗೆಯಬೇಕಾಗಿದೆ. ಹೆಚ್ಚು ನೀರು ಸಂಗ್ರಹ ಮಾಡಬೇಕಾಗಿದೆ. ಜೀರ್ಣೋದ್ಧಾರ ಕೆಲಸ ಇವತ್ತು ನಡೆಯಬೇಕಾಗಿದೆ. 1200 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ದೊಡ್ಡ ನೀರಾವರಿಗೆ ತಯಾರಿದ್ದೇವೆ, ಆದರೆ ಸಣ್ಣ ನೀರಾವರಿಗೆ 100 ಕೋಟಿ ರೂಪಾಯಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲವೆಂದರೆ ಸಣ್ಣ ನೀರಾವರಿ ಖಾತೆಯನ್ನು ಏಕೆ ಇಟ್ಟುಕೊಳ್ಳಬೇಕು? ಬರೀ ತೂಬು ರಿಪೇರಿ ಮಾಡಿಸಿ ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೈನರ್ ಇರಿಗೇಷನ್ ಎಂದರೆ ಕೆರೆ ಕಟ್ಟೆ, ತೂಬು ಕಾಲುವೆ ಎಲ್ಲಾ ಸರಿಯಾಗಿರಬೇಕು. ಕಾಲುವೆ ಸರಿಯಾಗದಿದ್ದರೆ ನೀರು ಹೋಗುವುದಿಲ್ಲ ಅದು ಇವರಿಗೆ ಗೊತ್ತೇ ಇಲ್ಲ. ಯಾವುದೇ ತೂಬಿನ ಕಡೆಗೆ ಮೈನರ್ ಇರಿಗೇಷನ್‌ರವರಿಗೆ ಗಮನವೇ ಇಲ್ಲ.

ಉಪಾಧ್ಯಕ್ಷರು : ಅವರ ಭಾಷಣ ಮುಗಿದ ತಕ್ಷಣ ನಿಮ್ಮ ಭಾಷಣ ಇದೆ. ಆಗ ವಿಷಯಗಳನ್ನು ಹೇಳುವಂತಿರಿ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಇವರು ಇಲಾಖಾ ಸಿಬ್ಬಂದಿಗೆ ಖರ್ಚು ಮಾಡುವಂತಹ ಹಣ ಕೂಡ ಇದಕ್ಕೆ ಸಿಗುತ್ತಾ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಪಂಚಭೂತಗಳಾದ ಐದು ಜನ ನೀವು ನಿರಶನ ವ್ರತವನ್ನು ಪ್ರಾರಂಭ ಮಾಡಿ. ಇಲ್ಲದಿದ್ದರೆ ಮಾನ್ಯ ಸಿದ್ಧರಾಮಯ್ಯನವರು ನಿಮಗ ಹಣವನ್ನು ಕೊಡುವುದೇ ಇಲ್ಲ. ಅವರು ಮರ್ಯಾಡಿಗಳನ್ನು ಮೀರಿ ಹೋಗಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಳೇ ಕಾಲದಲ್ಲಿ ನಿಧಿ ಮೇಲೆ ಸರ್ಪ ಕಾವಲು ಕುಳಿತಿರುತ್ತಿತ್ತು. ಅದು ಯಾರನ್ನೂ ಹತ್ತಿರ ಬರುವುದಕ್ಕೆ ಬಿಡುವುದಿಲ್ಲ. ಆ ರೀತಿ ಸಿದ್ದರಾಮಯ್ಯನವರು ಹಣದ ನಿಧಿ ಮೇಲೆ ಕುಳಿತಿದ್ದಾರೆ. ಯಾರನ್ನೂ ಹತ್ತಿರ ಸೇರಿಸುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈ ಕೃಷಿ ನೀತಿ ಬರದೇ ಹೋಗಿದ್ದರೆ ನಾನು ಉದ್ಧ ಭಾಷಣವನ್ನು ಮಾಡುವ ಅಗತ್ಯವಿರಲಿಲ್ಲ. ಈ ಕೃಷಿ ನೀತಿಯ ಬಗ್ಗೆ ಶ್ರೀಮಾನ್ ಬೈರೇಗೌಡರಿಗೆ ವಿವರಣೆಯನ್ನು

ಹೇಳಬೇಕೆಂದರೆ ಎಲ್ಲವನ್ನೂ ಈಗಾಗಲೇ ಮಾನ್ಯ ಚಂದ್ರಕಾಂತ ಬೆಲ್ಲದ್‌ರವರು ಗೊಬ್ಬರ, ಇತರ ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ನಾನು ಈ ಕೃಷಿ ನೀತಿಯ ಬಗ್ಗೆ ಹೇಳಬೇಕೆಂಬ ಉದ್ದೇಶದಿಂದಲೇ ಇವತ್ತು ಮಾತನಾಡುವುದಕ್ಕೆ ನಿಂತಿದ್ದೇನೆ. ಇದರ ಬಗ್ಗೆ ಬಹಳ ಉತ್ಸಾಹದಿಂದ ಹೊರಟು ಮಧ್ಯದಲ್ಲಿ ಗಾಡಿ ಎಲ್ಲಿ ನಿಂತಿದೆ ಎಂದು ನಮಗೆ ಗೊತ್ತಾಗದೆ ಹೋದರೆ ಮುಂದೆ ತೊಂದರೆಯಾಗುತ್ತದೆ. ಆದುದರಿಂದ ಇದನ್ನು ನೀವು ಐದು ಜನರು ಹೇಳಬೇಕು. ಇದರ ಮುಖಂಡತ್ವವನ್ನು ನೀವೇ ವಹಿಸಬೇಕು. ಇವತ್ತು ನೀವು ಕೇವಲ ಕೃಷಿ ಸಚಿವ ಬೈರೇಗೌಡರಾಗಿ ಮಾತ್ರವಲ್ಲ, ತಾವು ಸಂದರ್ಭ ಬಂದರೆ ಮುಖ್ಯಮಂತ್ರಿಗಳಾಗಲು ತಯಾರಾಗಿದ್ದವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಮುಖ್ಯಮಂತ್ರಿಗಳಾಗುವುದಕ್ಕೆ ತಮ್ಮ ಬೆಂಬಲವಿದೆ ಎಂದಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಇರುವಂತಹ ರಾಜಕಾರಣದ ಹಿನ್ನೆಲೆಯನ್ನು ಹೇಳಿದ್ದುದು. ಮಾನ್ಯ ಬೈರೇಗೌಡರಂಥವರ ನೇತೃತ್ವದಲ್ಲಿ ಕೃಷಿ ನೀತಿ ಜಾರಿಗೆ ಬಂತು. ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾಗಿದ್ದಾಗ ಇದನ್ನು ಜಾರಿಗೆ ಕೊಟ್ಟು ಇವತ್ತು ಅವರು ದೆಹಲಿಗೆ ಹೋದರೆಂದು ನೀವು ಈ ಕಡೆ ಚಾಪೆ ಕಟ್ಟಿಕೊಂಡು ಮನೆ ಕಡೆಗೆ ಹೊರಟರೆ ಈ ಕೃಷಿ ನೀತಿಯನ್ನು ಯಾರು ಜಾರಿಗೆ ಕೊಡುತ್ತಾರೆ? ಅದಕ್ಕೆ ತಾವು ಬಲವಾದಂತಹ ಹೋರಾಟವನ್ನು ಮಾಡಬೇಕಾಗುತ್ತದೆ. ಇದಕ್ಕೆ ನಾವೂ ಸಹ ತಯಾರಿದ್ದೇವೆ, ಇದನ್ನು ನಾನು ತಮಾಷೆಯಾಗಿ ಹೇಳುತ್ತಿಲ್ಲ, ಮಾನ್ಯ ಕೆ.ಎನ್. ನಾಗೇಗೌಡರು ಸದನದಲ್ಲಿ ಇಲ್ಲ, ಅವರು ವರುಣಾ ನಾಲೆಯಲ್ಲಿ ಇದು ಮಾಡುತ್ತೇವೆ, ಹೇಮಾವತಿ ನಾಲೆಯನ್ನು ತರುತ್ತೇವೆ. ಅದಕ್ಕೆ 300, 400 ಕೋಟಿ ರೂಪಾಯಿಗಳ ಖರ್ಚಾಯಿತು, ಸಾವಿರ ಕೋಟಿ ರೂಪಾಯಿಗಳ ಖರ್ಚಾಯಿತು, ಎಂದು ಹೇಳುತ್ತಾರೆ. ಇವತ್ತು ನಾನು ರೈಲಿನಲ್ಲಿ ತುಮಕೂರು ಮಾರ್ಗದಲ್ಲಿ ಬಂದೆ. ತುಮಕೂರಿಗೆ ಬರುವಂಥ ಹೇಮಾವತಿ ನಾಲೆಯನ್ನು ಗಮನಿಸಿದೆ, ಅಲ್ಲಿ ಸಿಡಿ ವರ್ಕ್ ಸ್ಲೂಯಿಸ್ ಕಟ್ಟಿದ್ದಾರೆ. ಕಾಲುವೆ ಮಣ್ಣಿನಿಂದ ಮುಚ್ಚಿ ಹೋಗಿದೆ. ಅಲ್ಲಿ ಬರೀ ಸ್ಲೂಯಿಸ್, ಸಿ ಡಿ ವರ್ಕ್ ಆಗಿರುವುದು ಮಾತ್ರ ಕಾಣುತ್ತದೆ. ಇದನ್ನು ಯಾರು ಬೇಕಾದರೂ ತನಿಖೆ ಮಾಡಬಹುದು, ನೀವೇ ಬೇಕಾದರೂ ತನಿಖೆ ಮಾಡಬಹುದು. ನೀವು ನಮ್ಮ ರೈತರಿಗೆ ಏನು ಅನ್ಯಾಯ ಮಾಡುತ್ತಿದ್ದೀರಿ ಎಂಬುದು ಗೊತ್ತಾಗುತ್ತದೆ. ನೀವು ರೈತರ ಪ್ರತಿನಿಧಿಗಳಾಗಿದ್ದೀರಿ, ನೀವು ಕೇವಲ ಮಂತ್ರಿಯಾಗಿಲ್ಲ. ಒಬ್ಬ ರೈತರಿಗೆ ಅನ್ಯಾಯವಾದರೆ ನೀವು ರೋಧನೆ ಮಾಡತಕ್ಕಂಥಾದ್ದು, ಕೂಗು ಹಾಕತಕ್ಕಂಥವರು. ಇದನ್ನು ಜನರು ಕೂಗಿ ಹೇಳುವಂಥಾದ್ದು, ವಿರೋಧ ಪಕ್ಷದವರು ಹೇಳಿ ನಂತರ ನೀವು ಹೇಳುವಂಥಾದ್ದು ಅಲ್ಲ. ನೀವು ವಿರೋಧಪಕ್ಷದವರಿಗೆ ಕರೆ ಕೊಡಬೇಕು. ಕೃಷಿ ವಲಯಕ್ಕೆ ಹಣ ಕಡಿಮೆ ಆಗಿದೆ, ನೀವೆಲ್ಲರೂ ನಮ್ಮ ಜೊತೆಗೆ ಧ್ವನಿಗೂಡಿಸಿ, ನಮ್ಮ ಜೊತೆಗೆ ಕೈ ಜೋಡಿಸಿ ಎಂದು ನೀವು ನಮ್ಮನ್ನು ಕರೆಯಬೇಕು. ನೀವೇ ಮಲಗಿದ್ದರೆ ಬಾಕಿ ಇರುವವರು ಏನು ಮಾಡಬೇಕು? ಏಕೆಂದರೆ ನಮ್ಮ ರೈತ ಸಮೂಹ ಇನ್ನೂ ಜಡತ್ವದಿಂದ ಇದೆ. ಅದು ನಿದ್ದೆ ಬಿಟ್ಟು ಮೇಲೆದ್ದಿದ್ದರೆ ಇಂತಹ ಪರಿಸ್ಥಿತಿ ಇರುತ್ತಿರಲಿಲ್ಲ. ಇದು ಅಸಂಘಟಿತವಾದುದು ಮತ್ತು ಜಡತ್ವದಿಂದ ಕೂಡಿರುವಂಥಾದ್ದು. ಅದೆಲ್ಲಾ ಭವಿಷ್ಯವನ್ನು ದೇವರ ಮೇಲೆ, ಹಣೆಬರಹದ ಮೇಲೆ ಇಟ್ಟು ಕುಳಿತು ಬಿಟ್ಟಿದೆ. ಆದುದರಿಂದಲೇ ನಾವು ಈ ವೇದನೆಯನ್ನು

ಹೇಳಿಕೊಳ್ಳಬೇಕಾಗಿದೆ. ಅದಕ್ಕೆ ತಾವು ಮೊದಲ ಬಾರಿಗೆ ಕೃಷಿ ನೀತಿಯನ್ನು ತಂದಿದ್ದೇವೆಂದು ಹೇಳುವಂಥಹ ತಮ್ಮಂಥವರಿಗೆ ಈ ಮಾತನ್ನು ಹೇಳಿದರೆ ತಮಗೆ ಸ್ವಲ್ಪ ಎಚ್ಚರಿಕೆ, ಪ್ರಜ್ಞೆ, ಆಲೋಚನೆ ಶಕ್ತಿ ಬರಬಹುದು. ಈ ದಿಸೆಯಲ್ಲಿ ತಾವು ನಾಳೆಯಿಂದಲೇ ಇದನ್ನು ಪ್ರಯತ್ನ ಮಾಡಿ, ಇಲ್ಲದಿದ್ದರೆ ತಮಗೆ ಒಂದು ಮಾತನ್ನು ಹೇಳುತ್ತೇನೆ. ತಾವು ಜೀರ್ಣೋದ್ಧಾರ ಮಾಡುತ್ತೇವೆ, ನೀರಾವರಿ ಮಂಡಳಿಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಅಲ್ಲಿ ರೈತರಿಗೆ ಪ್ರಾತಿನಿಧ್ಯವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ರೈತರು ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸಂಪೂರ್ಣವಾದಂತಹ ಅವಕಾಶವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈ ನೀರಾವರಿ ಮಂಡಳಿ ಎಲ್ಲಿ ಹೋಯಿತು? ಇದಕ್ಕೆ ಇನ್ನೂರು ಕೋಟಿ ರೂಪಾಯಿಗಳನ್ನು ತೊಡಗಿಸುತ್ತೇವೆಂದು ಹೇಳಿದ್ದೀರಿ. ಅದನ್ನು ತೊಡಗಿಸಲಿಲ್ಲ. ಅದು ಅಸ್ತಿತ್ವಕ್ಕೆ ಬರಲಿಲ್ಲ, ಇದನ್ನು ಯಾವಾಗ ಅಸ್ತಿತ್ವಕ್ಕೆ ತರುತ್ತೀರಿ? ಯಾವಾಗ ಕೆಲಸವನ್ನು ಮಾಡುತ್ತೀರಿ? ಏಕೆಂದರೆ ಕಾಲ ಮಿಂಚಿ ಹೋಗುತ್ತಿದೆ, ಇವತ್ತು ಇರುವಂಥಾದ್ದು ನಾಳೆ ಇರುವುದಿಲ್ಲ. ಒಂದು ವಿಷಯವನ್ನು ತೀರ್ಮಾನ ಮಾಡಿದ ಮೇಲೆ ಅದನ್ನು ಕಾರ್ಯಗತ ಮಾಡುವಂತಹ ಕೆಲಸವನ್ನು ಪ್ರಾರಂಭದಿಂದಲೇ ಪ್ರಯತ್ನ ಮಾಡಬೇಕೇ ವಿನಹ ತದ-ನಂತರ ಅಲ್ಲ. ಈಗಾಗಲೇ ಕಾಲ ಮಿಂಚಿದೆ, ಇದರ ವಿಫಲತೆಯಲ್ಲಿ ನೀವು ಭಾಗೀದಾರರಾಗಬೇಡಿ. ಕೃಷಿ ನೀತಿಯನ್ನು ಮಾಡುವುದಕ್ಕೆ ಹೊರಟ ನೀವು ಇದರ ಸಾಫಲ್ಯತೆಯನ್ನು ಕಂಡರೆ ಮಾತ್ರ ಆ ಜವಾಬ್ದಾರಿಯನ್ನು ವಹಿಸಿ ಇಲ್ಲದಿದ್ದರೆ ಈ ಜವಾಬ್ದಾರಿ ನಮ್ಮಿಂದ ಆಗುವುದಿಲ್ಲವೆಂದು. ಕೈ ಕಟ್ಟಿ ಕುಳಿತು ಬಿಡಿ. ಇನ್ನು ಬೆಲೆಗಳ ವಿಚಾರದಲ್ಲಿ ಅವರೇ ಎಲ್ಲವನ್ನೂ ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಚಂದ್ರಕಾಂತ ಬೆಲ್ಲದ್‌ರವರು ಹೇಳಿದ್ದಾರೆ. ರೈತರು ಯಾವ ರೀತಿಯಲ್ಲಿ ಈ ಬೆಲೆಯ ಕಷ್ಟಕ್ಕೆ ಒಳಗಾಗಿದ್ದಾನೆಂಬುದು ನಾವು ನೀವು ಹೇಳುವುದು ಬೇಡ. ಇದನ್ನು ಎಲ್ಲರೂ ಕಣ್ಣಾರೆ ಕಂಡಿದ್ದೇವೆ. ಇವತ್ತು ಮಾನ್ಯ ಕೃಷಿ ಸಚಿವರು ಮತ್ತು ತೋಟಗಾರಿಕೆ ಸಚಿವರು ಸದನದಲ್ಲಿದ್ದಾರೆ. ಇವತ್ತು ಅಡಿಕೆ ಬೆಳೆಗಾರರು ಹೇಳುವುದೇನೆಂದರೆ ಗುಟ್ಕಾ ನಿಷೇಧದಿಂದ ನಮ್ಮ ಅಡಿಕೆಬೆಲೆ ಬಿದ್ದು ಹೋಗುತ್ತದೆ. ನಮಗೆ ತೊಂದರೆಯಾಗುತ್ತದೆಂದು ಹೇಳುತ್ತಿದ್ದಾರೆ. ಇದನ್ನು ಬಹಳ ಜನರು ಅವಲಂಭಿಸಿದ್ದಾರೆಂದು ಹೇಳುತ್ತಾರೆ. ನೀವು ಅವರ ಪರವಾಗಿ ಬಹಿರಂಗವಾಗಿ ಏಕೆ ವಾದ ಮಾಡಲಿಲ್ಲ. ಇವತ್ತು ಆಲೂಗಡ್ಡೆ, ಟೊಮೆಟೋ ಬೆಲೆ ಬಿದ್ದು ಹೋಯಿತು. ಇದರ ಬಗ್ಗೆ ನಾನೇ ಕೇಳಿದೆ, 50 ಪೈಸೆಗೆ ಒಂದು ಕೆ.ಜಿ. ಟೋಮೆಟೋ ಹಣ್ಣನ್ನು ತೆಗೆದುಕೊಳ್ಳುವವರು ಇರಲಿಲ್ಲ. ಆ ಸಂದರ್ಭದಲ್ಲಿ ರೈತರು ಬಾಯಿ ಹೊಡೆದುಕೊಂಡು, ವಿರೋಧಪಕ್ಷದವರು ಕೂಗಾಟ ಮಾಡಿದರು, ಧರಣಿ ಮಾಡಿದರು.ಇದೆಲ್ಲಾ ಆದಮೇಲೆ ತಾವು ಅದಕ್ಕೆ ಬೆಂಬಲ ಬೆಲೆಯನ್ನು ಕೊಡುತ್ತೇವೆಂದು ಹೊರಟರೇ ವಿನಃ ಮೊದಲೇ ನೀವು ಏಕೆ ಇದರ ಬಗ್ಗೆ ಆಲೋಚನೆ ಮಾಡಲಿಲ್ಲ? ಈ ವಿಷಯಕ್ಕೆ ಯಾವಾಗ ಹೋದಿರೆಂದರೆ ರೈತರು ಕೂಗಾಟ ಮಾಡಿದ ಮೇಲೆ, ಅವರ ರೋಧನವನ್ನು ಕೇಳಿದ ಮೇಲೆ ಹೋಗಿದ್ದೀರಿ. ನೀವು ಅದನ್ನು ಕೇಳುವುದಕ್ಕೆ ಮುಂಚೆ ಹೋಗಲಿಲ್ಲ. ಇವತ್ತು ಆಲೂಗಡ್ಡೆ, ಟೊಮೆಟೋ, ಬೆಳೆಗಳು ಬಂದಿವೆ, ಅದಕ್ಕೆ ಯಾವ ಬೆಲೆ ಇರಬೇಕೆಂಬುದು ನಿಮ್ಮ ಹತ್ತಿರವಿರಲೇಬೇಕಲ್ಲಾ? ನಿಮ್ಮ ತಾಲ್ಲೂಕು ಮಟ್ಟದ, ಜಿಲ್ಲಾ ಮಟ್ಟದ ಅಧಿಕಾರಿಗಳು, ರಾಜ್ಯಮಟ್ಟದ ಅಧಿಕಾರಿಗಳು ಇಲ್ಲವೇ ನಿಮ್ಮ ಹತ್ತಿರ ಫೋನಗಳು, ಸೆಲ್ಯೂಲರ್ ಫೋನಗಳು ಇವೆ. ನೀವು ಕುಳಿತ ಸ್ಥಳದಿಂದಲೇ ಅಧಿಕಾರಿಗಳ ಮುಖಾಂತರ ವಿಷಯವನ್ನು

ಕೇಳಬಹುದು. ಇವತ್ತು ಸುಗ್ಗಿಯು ಪ್ರಾರಂಭವಾಯಿತು, ಇದರ ಬೆಲೆ ಇಷ್ಟು ಇರಬೇಕೆಂದು, ಅದರ ಬೆಲೆ ಮತ್ತು ಆ ಬೆಳೆಯನ್ನು ತೆಗೆಯದೇ ಇರುವುದಕ್ಕೆ ಕಾರಣವೇನು? ಇದಕ್ಕೆ ನೀವು ಏನು ಮಾಡಬೇಕು ಎಂಬ ಮುಂಜಾಗ್ರತೆಯ ಕ್ರಮವನ್ನು ಕೈಗೊಳ್ಳದೇ ಹೋದರೆ ಈ ಸರ್ಕಾರಕ್ಕೆ ತೋಟಗಾರಿಕಾ ಮಂತ್ರಿಗಳು ಎಂದು ಏಕೆ ಇರಬೇಕು? ನೀವು ಅವರ ಪ್ರತಿನಿಧಿಗಳು ಎಂದು ಹೇಳಬೇಕಾಗುತ್ತದೆ.

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ನಾನು ತೋಟಗಾರಿಕೆ ಮಂತ್ರಿಯಾಗಿ ಮೊಟ್ಟಮೊದಲನೆಯ ಬಾರಿಗೆ ಆಲೂಗಡ್ಡೆ, ಟೊಮೊಟೊ ಬೆಳೆಗಳಿಗೆ ಬೆಂಬಲ ಬೆಲೆಯನ್ನು ಕೊಡುವುದಕ್ಕೆ ಸಾಧ್ಯವಾಯಿತು. ಹಿಂದೆ ತಾವೂ ಕೂಡ ಅಧಿಕಾರದಲ್ಲಿ ಇದ್ದಿರಿ, ಆಗ ನಿಮ್ಮ ಸರ್ಕಾರ ಏಕೆ ಇದನ್ನು ಕೊಡಲಿಲ್ಲ? ಆಲೂಗಡ್ಡೆ, ಟೊಮೊಟೊ, ಬೆಳೆಗಳನ್ನು ಕೇಳುವವರು ಇರಲಿಲ್ಲ. ಆಗ ಟೊಮೊಟೊಗೆ 20 ಪೈಸೆಗೂ ಕೊಳ್ಳುವವರಿಲ್ಲದಾಗ ನಾವು ರೂ. 1-20 ಪೈಸೆಯಂತೆ ಮತ್ತು ಆಲೂಗಡ್ಡೆಗೆ ರೂ. 3-50 ಪೈಸೆಯಂತೆ ತೆಗೆದುಕೊಂಡಿದ್ದೇವೆ. ಇದನ್ನು ಕೃಷಿ ಸಚಿವರು ಮತ್ತು ತೋಟಗಾರಿಕೆ ಸಚಿವರು ಇದ್ದುದಕ್ಕೆ ಆಯಿತು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಸುಮಾರು ದಿವಸಗಳಿಂದ ಅಡಿಕೆ ಬೆಲೆ ಬಹಳ ವ್ಯತ್ಯಾಸವಾಗಿದೆ, ಗುಟ್ಕಾ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಯಿತು. ಸದನದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟರು. ಇವತ್ತು ಕೇಂದ್ರಸರ್ಕಾರಕ್ಕೂ ಕೂಡ ಅಡಿಕೆ ಬೆಳೆಯಿಂದ ಸಾಕಷ್ಟು ಆದಾಯ ಬರುತ್ತದೆ. ರೈತರು ನಿಮ್ಮಿಂದ ಯಾವುದನ್ನೂ ನಿರೀಕ್ಷೆ ಮಾಡದೆ ಅವರ ಬೆಳೆಗೆ ಅವರೇ ಬೆಲೆಯನ್ನು ಇಟ್ಟುಕೊಂಡಿದ್ದಾರೆ. ನೀವು ತೋಟಗಾರಿಕೆಯ ಸಚಿವರಾಗಿ ಇದರ ನೇತೃತ್ವವನ್ನು ವಹಿಸಬೇಕಾಗಿತ್ತು. ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೂ ಶಿಫಾರಸ್ಸು, ಮತ್ತು ಪ್ರಭಾವವನ್ನು ಬೀರಬೇಕು. ಇದರ ಬಗ್ಗೆ ಸರ್ಕಾರದ ನಿಲುವು ಏನೆಂದು ಸ್ಪಷ್ಟಪಡಿಸದೇ ಹೋದರೆ ಇವತ್ತು ಇಡೀ ಅಡಿಕೆ ಬೆಳೆಗಾರರ ಸಮೂಹ ಕಂಗಾಲಾಗಿ ಹೋಗುತ್ತದೆ. ಆದುದರಿಂದ ದಯಮಾಡಿ ಸರ್ಕಾರ ಇದರ ಬಗ್ಗೆ ಆಲೋಚನೆ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳುವಂಥಾದ್ದು ಸರಿಯಾಗಿದೆ.

ಶ್ರೀ ರಂಗ ದೇವರಾಯಲು (ಗಂಗಾವತಿ) : ಮಾನ್ಯ ಉಪಾಧ್ಯಕ್ಷರೇ, ನಿಮ್ಮ ಸರ್ಕಾರ ಏನು ಮಾಡಿತು ಎಂದು ಮಾನ್ಯ ಮಂತ್ರಿಯವರು ಕೇಳಿದರು. ನಮ್ಮ ಸರ್ಕಾರ 1993-94ರಲ್ಲಿ ಗಂಗಾವತಿ ತಾಲ್ಲೂಕಿನಲ್ಲಿ ಪ್ಯಾಡಿ ಜಾಸ್ತಿ ಬೆಳೆದಿದ್ದಾರೆಂದು ಅದನ್ನು ರೈತರಿಂದ ಖರೀದಿ ಮಾಡಬೇಕೆಂದು ಸರ್ಕಾರ ಎರಡು ಕೋಟಿ ರೂಪಾಯಿಗಳನ್ನು ಗಂಗಾವತಿ ತಾಲ್ಲೂಕಿಗೆ ಬಿಡುಗಡೆ ಮಾಡಿತು. ಆಗ ಸರ್ಕಾರ ರೈತರ ಮಾಲನ್ನು ಖರೀದಿ ಮಾಡಲು ಮುಂದೆ ಬಂದಿತ್ತು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ ಈ ವಿಚಾರದಲ್ಲಿ ತುಂಬಾ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಹೇರಳವಾಗಿ ಹಣವನ್ನು ಖರ್ಚು ಮಾಡಿ ಕೃಷಿಯನ್ನು ಮಾಡಬೇಕಾಗಿದೆ. ಇವತ್ತಿನ ಕೃಷಿ ಪದ್ಧತಿ ಮುಂಚಿನ ಕೃಷಿ ಪದ್ಧತಿಯಂತೆ ಇಲ್ಲ. ಈಗ ಬಹಳ ಶ್ರಮ ಪಡಬೇಕು, ಹಣವನ್ನು ಖರ್ಚು ಮಾಡಬೇಕು. ಇದು ಅಷ್ಟು

ಸುಲಭವಾದಂತಹ ಕೆಲಸವಲ್ಲ. ಇವತ್ತಿನ ದಿವಸ ಸಾಮಾನ್ಯ ಕೂಲಿಕಾರನಿಗೂ 50-60 ರೂಪಾಯಿಗಳನ್ನು ಕೊಟ್ಟರೂ ಬರುವುದಿಲ್ಲ, 100 ರೂಪಾಯಿಗಳವರೆಗೂ ಇದೆ. ಇವತ್ತು ಮೆಣಸಿನಕಾಯಿ ಅಥವಾ ಬೇರೆ ಇನ್ನಾವುದೋ ಬೆಳೆಯನ್ನು ಹಾಕಿ ಅದರ ಬೆಲೆ ಬಿದ್ದು ಹೋಯಿತೆಂದರೆ ಆ ರೈತನು ನೇಣು ಹಾಕಿಕೊಳ್ಳವಂಥಾದ್ದು, ವಿಷ ಕುಡಿದು ಸಾಯದೇ ಏನು ಮಾಡುವುದಕ್ಕಾಗುತ್ತದೆ? ಇಲ್ಲ, ಅವನು ದೇವರ ಹೆಸರನ್ನು ಹೇಳಿಕೊಂಡು ಅವನು ಹಾಗೆ ಕೊರಗುತ್ತಾ ಸಾಯಬೇಕು, ಇಲ್ಲದಿದ್ದರೆ ಇನ್ನೊಂದು ಮಟ್ಟಕ್ಕೆ ಹೋಗುವಂತಹ ಪರಿಸ್ಥಿತಿಗೆ ಹೋಗಬೇಕಾಗುತ್ತದೆ. ಆದರೆ ರೈತನು ಆ ಮಟ್ಟಕ್ಕೆ ಹೋಗಿಲ್ಲ. ಅವನು ಎಷ್ಟೇ ಕಷ್ಟವಾದರೂ ಕೂಡ ಯಾವುದಾದರೂ ದೇವರ ಮೇಲೆ ಜವಾಬ್ದಾರಿ ಹಾಕಿ ಜೀವನವನ್ನು ನಡೆಸಿಕೊಂಡು ಹೋಗುತ್ತಾರೆಯೇ ವಿನಃ ಅವರು ಎಂದೂ ಸೋಲನ್ನು ಒಪ್ಪಿಕೊಳ್ಳಲಿಲ್ಲವೆನ್ನುವ ಒಂದೇ ಕಾರಣದಿಂದ ನಾವು ಅದನ್ನು ಬಂಡವಾಳವನ್ನಾಗಿ ಮಾಡಿಕೊಂಡಿದ್ದು. ಆದುದರಿಂದ ನಾನು ಇವತ್ತು ಹೇಳುವಂಥಾದ್ದು ಏನೆಂದರೆ ಇವತ್ತು ರಾಗಿ, ಭತ್ತ, ಇತರ ಬೆಳೆಗಳ ಬೆಲೆ ಏನು ಇರಬೇಕು, ಆಲೂಗಡ್ಡೆ, ಟೊಮೊಟೊ, ಬೆಲೆ ಏನು ಇರಬೇಕೆಂಬುದು ಮತ್ತು ಪ್ರಮುಖ ಬೆಳೆಗಳಾದ ಹತ್ತಿ, ಕಬ್ಬು, ತೊಗರಿ ಬೆಳೆಗೆ ಏನು ಬೆಲೆ ಇರಬೇಕೆಂಬ ಬಗ್ಗೆ ಭಿತ್ತನೆ ಮಾಡುವುದಕ್ಕಿಂತ ಮುಂಚಿತವಾಗಿ ಮುಂದಿನ ವರ್ಷದ ಬೆಲೆ ಏನು ಇರಬೇಕೆಂಬ ಬಗ್ಗೆ ಸರ್ಕಾರದ ಮಟ್ಟದಲ್ಲಿ ನೋಡಬೇಕಾಗುತ್ತದೆ. ನಾವು ಇದನ್ನು ಬಹಳ ವೈಜ್ಞಾನಿಕವಾಗಿ ಮಾಡಬೇಕೆಂದರೆ ಕಷ್ಟವಿದೆ, ನಾನು ಅದನ್ನು ಒಪ್ಪುತ್ತೇನೆ. ಆ ರೀತಿಯಾಗಿ ಯಾರು ಇದ್ದರೂ ಮಾಡುವುದಕ್ಕಾಗುವುದಿಲ್ಲ. ಆದರೆ ನಾವು ಇವತ್ತು ಒಂದು ಹಂತಕ್ಕೆ ಬಂದಿದ್ದೇವೆ. ಇಲ್ಲಿ ನಿರ್ಧಾರ ಮಾಡುವಂಥಾದ್ದು ಅನಿವಾರ್ಯವಾಗಿದೆ. ಆದುದರಿಂದ ಸರ್ಕಾರದ ಮಟ್ಟದಲ್ಲಿ ಯಾವ ವಸ್ತುವಿಗೆ ಯಾವ ಬೆಲೆ ಇರಬೇಕೆಂಬ ನಿರ್ಧಾರವನ್ನು ಮಾಡಿಕೊಳ್ಳಬೇಕು ಮತ್ತು ಅದನ್ನು ಪ್ರಕಟ ಮಾಡಬೇಕಾಗುತ್ತದೆ. ಒಂದು ವೇಳೆ ಸರ್ಕಾರ ನಿರ್ಧಾರ ಮಾಡಿದಂತಹ ಬೆಲೆಗಿಂತ ಕಡಿಮೆ ಬೆಲೆಗೆ ಹೋದರೆ ತತ್‌ಕ್ಷಣ ಸರ್ಕಾರ ಮಾರುಕಟ್ಟೆಯ ಪ್ರವೇಶ ಮಾಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಬಹಳ ಅನುಭವಿ ಸದಸ್ಯರು ಮತ್ತು ರೈತರ ಹೋರಾಟದಿಂದ ಇಲ್ಲಿ ಬಂದು ಕುಳಿತಿರತಕ್ಕಂಥವರು. ರಾಷ್ಟ್ರಮಟ್ಟದಲ್ಲಿ, ಅಗ್ರಿಕಲ್ಚರಲ್ ಕಾಸ್ಟ್ ಅಂಡ್ ಪ್ರೈಸಸ್ ಕಮೀಷನ್ ಎಂದು ಒಂದು ಸಂಸ್ಥೆ ಇದೆ. ಅವರು ಪ್ರಮುಖವಾದಂಥ ಆಹಾರ ಧಾನ್ಯಗಳ ಬೆಲೆಗಳನ್ನು ಮತ್ತು ಇನ್ನೂ ಕೆಲವು ಬೆಳೆಗಳ ಬೆಂಬಲ ಬೆಲೆಗಳನ್ನು ರಾಷ್ಟ್ರ ಮಟ್ಟದಲ್ಲಿ ನಿಗದಿಪಡಿಸುತ್ತಾರೆ. ಅದಕ್ಕೆ ದೇಶದಲ್ಲಿರತಕ್ಕಂಥ ಎಲ್ಲಾ ರಾಜ್ಯಗಳಿಂದ ಸಲಹೆಗಳನ್ನೂ ಕೂಡ ಕೇಳುತ್ತಾರೆ. ನೀವು ಯಾವ್ಯಾವುದಕ್ಕೆ ಎಷ್ಟೆಷ್ಟು ಬೆಲೆಯನ್ನು ಸೂಚನೆ ಮಾಡುತ್ತೀರಿ ಎನ್ನುವ ಸಲಹೆಯನ್ನು ಕೇಳುತ್ತಾರೆ. ರಾಷ್ಟ್ರಮಟ್ಟದಲ್ಲಿ ಅಂಥ ಒಂದು ವ್ಯವಸ್ಥೆ ಇದೆ. ಆದರೆ ಅದು ಪೂರ್ತಿಯಾಗಿ ವಾಸ್ತವಿಕವಾಗಿದೆ ಎನ್ನುವುದನ್ನು ನಾನು ಒಬ್ಬ ರೈತನಾಗಿ ಒಪ್ಪುವುದಿಲ್ಲ. ಸರ್ಕಾರದ ವ್ಯವಸ್ಥೆಯಲ್ಲಿ ಮಂತ್ರಿಯಾಗಿ ಅದನ್ನು ಒಪ್ಪಬೇಕಾಗಿ ಬಂದರೂ ಸಹ ಒಬ್ಬ ಬೆಳೆಗಾರನಾಗಿ, ರೈತನಾಗಿ ನಾನು ಅದನ್ನು ಪೂರ್ತಿಯಾಗಿ ಒಪ್ಪಲು ತಯಾರಿಲ್ಲ. ಆದರೆ ಅಂಥ ಒಂದು ವ್ಯವಸ್ಥೆ ಇದೆ ಎನ್ನುವುದನ್ನು ಮಾತ್ರ ಈ ಸಂದರ್ಭದಲ್ಲಿ ನಾನು ಗಮನಕ್ಕೆ ತರಲು ಇಷ್ಟಪಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಉಪಾಧ್ಯಕ್ಷರೇ, ಬೈರೇಗೌಡರು ಮಂತ್ರಿಯಾಗಿ ಆ ವ್ಯವಸ್ಥೆಯನ್ನು ನಾನು ಒಪ್ಪಬಹುದು, ಆದರೆ ರೈತನಾಗಿ ಒಪ್ಪಲು ಆಗುವುದಿಲ್ಲ ಎಂದು ಹೇಳಿದರು. ಈ ದ್ವಂದ್ವತೆ ಏಕೆ? ನೀವು ಮೊದಲು ರೈತರು, ಆಮೇಲೆ ರೈತರ ಪ್ರತಿನಿಧಿಯಾಗಿ ನೀವು ಮಂತ್ರಿಗಳು. ರೈತರಾಗಿ ರೈತರ ಹಿತರಕ್ಷಣೆ ಮಾಡಲು ಆಗಲಿಲ್ಲ ಎಂದರೆ ಅವರ ಹೋರಾಟವನ್ನಾದರೂ ಪ್ರಾರಂಭ ಮಾಡಬೇಕು, ಇಲ್ಲವೆಂದರೆ ಅವರ ಹಿತರಕ್ಷಣೆ ಮಾಡುವವರ ಕಿವಿಯನ್ನಾದರೂ ಹಿಡಿಯಬೇಕು. ಏನೂ ಆಗಲಿಲ್ಲ ಎಂದರೆ ರಾಜೀನಾಮೆ ಕೊಟ್ಟು ತಾವು ಈ ಕಡೆ ಬನ್ನಿ. ದಯವಿಟ್ಟು ಈ ದ್ವಂದ್ವತೆ ಬೇಡ. ಹೀಗಾಗಿಯೇ ನಾವು ರೈತರೆಲ್ಲಾ ಇಷ್ಟು ಕೆಳಮಟ್ಟಕ್ಕೆ ಬಂದಿದ್ದೇವೆ. ಇಲ್ಲಿರುವ 224 ಜನರಲ್ಲಿ ರೈತರ ಪ್ರತಿನಿಧಿಗಳೇ ಹೆಚ್ಚು ಇದ್ದೇವೆ. ಆದರೂ ಈ ವ್ಯವಸ್ಥೆಯಲ್ಲಿ ರೈತರ ಶೋಷಣೆ ನಿರಂತರವಾಗಿ ಆಗುವುದನ್ನು ನಾವು ಸುಮ್ಮನೆ ಕುಳಿತು ನೋಡುವಂತಾಗಿದೆ. ಈ ನಪುಂಸಕತ್ವವನ್ನು ನಾವು ಬಿಡಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಡಿ.ಆರ್. ಪಾಟೀಲರಿಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರು ಮತ್ತು ಕೆಲವು ಸದಸ್ಯರು ರೈತ ಶಾಸಕರ ವೇದಿಕೆಯನ್ನು ರಚನೆ ಮಾಡಬೇಕು ಎನ್ನುವುದಕ್ಕೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ಬಹಳ ಜವಾಬ್ದಾರಿಯಾದಂಥ ಕೆಲಸವನ್ನು ಮಾನ್ಯ ಡಿ.ಆರ್. ಪಾಟೀಲರು ನಿರ್ವಹಿಸುತ್ತಿದ್ದಾರೆ. ಅದನ್ನು ನೋಂದಾಯಿಸತಕ್ಕಂಥ ಹಂತಕ್ಕೆ ಬಂದಿದ್ದೇವೆ. ಈ ಸದನದ ಸದಸ್ಯರು ಮತ್ತು ಮೇಲ್ಮನೆಯ ಸದಸ್ಯರು, ಮತ್ತು ಮಾಜಿ ಸದಸ್ಯರೂ ಸಹ ಅದರಲ್ಲಿ ಸದಸ್ಯರಾಗಿ ಪಕ್ಷಭೇದವನ್ನು ಮರೆತು ಕಲಸ ಮಾಡಬೇಕು. ಈ ಸಂಸ್ಥೆಯಲ್ಲಿ ಭಾಗವಹಿಸತಕ್ಕಂಥವರು ಶ್ರದ್ಧೆ ಇರತಕ್ಕಂಥವರು ಮತ್ತು ರೈತ ವರ್ಗದಿಂದ ಬಂದಿರತಕ್ಕಂಥವರು. ಇವರೆಲ್ಲರೂ ಒಂದು ಕಡೆ ಸೇರಿ ರೈತರ ಹಿತವನ್ನು ಕಾಪಾಡಲು ರಾಜಕಾರಣವನ್ನು ಹೊರಗಡೆ ಇಟ್ಟು ಇದರ ಬಗ್ಗೆ ಚಿಂತನೆಯಾಗಬೇಕು ಎನ್ನುವ ಒಂದು ಪ್ರಯತ್ನವನ್ನು ನಡೆಸುತ್ತಿರತಕ್ಕಂಥಾದ್ದು ತಮಗೂ ಸಹ ಗೊತ್ತಿದೆ. ತಾವು ಅದರಲ್ಲಿ ಪ್ರಮುಖವಾದಂಥ ಪಾತ್ರವನ್ನು ವಹಿಸಿದ್ದೀರಿ. ನಾವೆಲ್ಲರೂ ಸೇರಿ ಚರ್ಚೆ ಮಾಡೋಣ. ಅದನ್ನು ಆದಷ್ಟು ಜಾಗ್ರತೆ ನೋಂದಾಯಿಸತಕ್ಕಂಥ ಜವಾಬ್ದಾರಿಯನ್ನು ತಾವೇ ತೆಗೆದುಕೊಂಡಿದ್ದೀರಿ. ದಯವಿಟ್ಟು ಬೇಗನೆ ಆ ಕೆಲಸವನ್ನು ಮಾಡಿಸಿ.

ಶ್ರೀ ಡಿ.ಆರ್. ಪಾಟೀಲ್ : ಈಗಾಗಲೇ ಅದು ನೋಂದಣಿಯಾಗಿದೆ.

ಶ್ರೀ ಸಿ. ಬೈರೇಗೌಡ : ಸಂತೋಷ. ದಯವಿಟ್ಟು ಅದರ ಮೊದಲನೇ ಸಭೆಯನ್ನು ಈ ವಾರದಲ್ಲಿ ಅಥವಾ ಮುಂದಿನ ವಾರದಲ್ಲಿ ಕರೆದರೆ ಅಲ್ಲಿ ಇವೆಲ್ಲವನ್ನೂ ಚರ್ಚೆ ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳಿದ ರೀತಿಯಲ್ಲಿ ರಾಷ್ಟ್ರಮಟ್ಟದಲ್ಲಿ ಬೆಂಬಲ ಬೆಲೆ ಕೆಲವು ಪದಾರ್ಥಗಳಿಗೆ ಮಾತ್ರ ಇದೆ. ಕೆಲವಕ್ಕೆ ಅದು ಆಗಲಿಲ್ಲ. ಇನ್ನೂ ಆಗಬೇಕಾಗಿದೆ. ನಾನು ಏನು ಕೇಳುತ್ತೇನೆ ಎಂದರೆ ಆಲೂಗಡ್ಡೆ ಬೆಲೆ ಒಂದು ಕೆಜಿಗೆ 50 ಪೈಸೆಗೆ ಇಳಿದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಒಂದು ದಿವಸ ನಾನೇ ಯಶವಂತಪುರದ ಮಾರುಕಟ್ಟೆಗೆ ಹೋಗಿದ್ದೆ. 50 ಪೈಸೆಗೆ ಅಲ್ಲ, ಒಂದು ಕೆಜಿ ಆಲೂಗಡ್ಡೆಯನ್ನು ತಂದು ಪೈಸಕ್ಕೂ ಕೂಡ ಕೇಳುವಂಥ ಪರಿಸ್ಥಿತಿ ನಾನು

ಹೋಗಿದ್ದ ದಿವಸ ಇರಲಿಲ್ಲ. ಅವತ್ತು ರಾಶಿರಾಶಿ ಆಲೂಗಡ್ಡೆಯನ್ನು ತಂದು ಸುರಿದಿದ್ದರು ಅದನ್ನು ಕೇಳುವಂಥವರೇ ಇಲ್ಲ. ಅಂಥ ಪರಿಸ್ಥಿತಿಯನ್ನು ಕೂಡ ನಾನೇ ಕಣ್ಣಾರೆ ಕಂಡಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಇದು ನಿಮಗೂ ಅನುಭವಕ್ಕೆ ಬಂದಿದೆ. ಕೋಲಾರವೆಂದರೆ ರೇಷ್ಮೆಗೆ ಅಲೂಗಡ್ಡೆಗೆ, ಈರುಳ್ಳಿಗೆ, ತರಕಾರಿಗಳಿಗೆ, ತೋಟಗಾರಿಕೆಗೆ ಹೆಸರುವಾಸಿಯಾದಂಥ ಪ್ರದೇಶ. ಇನ್ನೊಂದು ದಿವಸ ಇಂಥ ಸಮಸ್ಯೆ ಬರಬಾರದು. ಏಕೆಂದರೆ ನಿಮಗಿರತಕ್ಕಂಥ ಇಚ್ಛೆ ನಿಮಗಿರತಕ್ಕಂಥ ಮನೋಬಲ ನಮ್ಮ ಅನೇಕ ಅಧಿಕಾರಿ ಮಿತ್ರರುಗಳಿಗೆ ಇಲ್ಲ. ನೀವು ಹಾಪ್‌ಕಾಮ್ಸ್‌ಗಳನ್ನು ಮಾಡಿದ್ದೀರಿ. ಪ್ರಾರಂಭದಲ್ಲಿ ಹಾಪ್‌ಕಾಮ್ಸ್‌ಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದವು. ಆಗ ನಾನು ಲಾಲ್‌ಬಾಗಿನ ಹಾಪ್‌ಕಾಮ್ಸ್‌ನಿಂದ ತರಕಾರಿ ತೆಗೆದುಕೊಂಡು ಹೋಗುತ್ತಿದ್ದೆ. ಹಾಪ್‌ಕಾಮ್ಸ್‌ನಲ್ಲಿ ತರಕಾರಿ ಬೆಲೆ 3 ರೂಪಾಯಿ ಇದ್ದರೆ, ಜಯನಗರದಲ್ಲಿ 5 ರೂಪಾಯಿ ಇರುತ್ತಿತ್ತು. ಅಷ್ಟರಲ್ಲೇ 2 ರೂಪಾಯಿ ವ್ಯತ್ಯಾಸ ಇರುತ್ತಿತ್ತು. ಅಷ್ಟು ಚೆನ್ನಾಗಿ ಅವು ನಡೆಯುತ್ತಿದ್ದವು. ಇವತ್ತು ಅದರ ವ್ಯವಹಾರ ಅಷ್ಟೊಂದು ಹೇಳಿಕೊಳ್ಳುವ ಮಟ್ಟದಲ್ಲಿ ಇಲ್ಲ. ಅವು ಇನ್ನೂ ಚೆನ್ನಾಗಿ ಬೆಳೆಯಬೇಕು. ಅಧಿಕಾರಿಗಳಲ್ಲಿ ಮನೋಬಲ ಇಲ್ಲ ಎಂದು ಏಕೆ ಹೇಳುತ್ತಿದ್ದೇನೆಂದರೆ ಹಿಂದೆ ಟೊಮೊಟೋ ಬೆಲೆ ಬಿದ್ದಂಥ ಸಂದರ್ಭದಲ್ಲಿ ಒಂದು ಕೇಜಿ ಟೊಮೊಟೋವನ್ನು 50 ಪೈಸೆಗೆ ಕೇಳತಕ್ಕಂಥವರು ಇಲ್ಲದೇ ಇದ್ದ ಸಂದರ್ಭದಲ್ಲಿ ಮುಂಬೈಯಲ್ಲಿ 3 ರೂಪಾಯಿ ಇತ್ತು. ಅದರ 10 ಲೋಡನ್ನು ಮುಂಬೈಗೆ ಕಳುಹಿಸಲು ಏನು ತೊಂದರೆ? ಇಲ್ಲಿಂದ 24 ಗಂಟೆಗಳೂ ಮುಂಬೈಗೆ ಲಾರಿಗಳು ಹೋಗುತ್ತವೆ. ದಿವಸಕ್ಕೆ 100 ಲಾರಿಗಳು ಬರುತ್ತವೆ, 100 ಲಾರಿ ಹೋಗುತ್ತವೆ. ಅಂಥ ಸಂದರ್ಭದಲ್ಲಿ ನಿಮ್ಮ ಒಬ್ಬ ಅಧಿಕಾರಿ ಇಲ್ಲಿರತಕ್ಕಂಥ 10 ಲೋಡ್ ಟೊಮೊಟೋವನ್ನು ಅಲ್ಲಿಗೆ ಕಳುಹಿಸಿದರೆ ಇಲ್ಲಿ 50 ಪೈಸೆಗೆ ಮಾರುವುದಕ್ಕಿಂತ, ಒಂದು ರೂಪಾಯಿ ಲಾರಿ ಬಾಡಿಗೆ ಹೋದರೂ ಅಲ್ಲಿ 3 ರೂಪಾಯಿಗೆ ಕೊಡುವ ಬದಲು 2 ರೂಪಾಯಿಗೆ ಕೊಟ್ಟರೆ ತೆಗೆದುಕೊಳ್ಳುತ್ತಾರೆ. ಎಲ್ಲಿ ಡಿಮ್ಯಾಂಡ್ ಅಂಡ್ ಸಪ್ಲೈ ಇರಬೇಕು, ಎಲ್ಲಿ ಕಡಿಮೆ ಇದೆ, ಎಲ್ಲಿ ಬೇಡಿಕೆ ಇದೆ ಎನ್ನುವುದನ್ನು ತಿಳಿದುಕೊಳ್ಳಲು ಅವರು ತಲೆಯನ್ನು ಕೆಡಿಸಿಕೊಳ್ಳುವುದೇ ಇಲ್ಲ. ಜನ ಕೂಗಬೇಕು, ಮಂತ್ರಿಗಳು ಕರೆಯಬೇಕು, ಹೆದರಿಸಬೇಕು ವಿನಃ ಇದು ನನ್ನ ಜವಾಬ್ದಾರಿ, ನಾನೇ ಪ್ರಥಮ ಹಂತದಲ್ಲಿ ರೈತರ ರಕ್ಷಣೆಗೆ ಹೋಗಬೇಕು, ಸರ್ಕಾರದ ಮುಂದೆ ನನ್ನ ಪ್ರಸ್ತಾವನೆಗಳನ್ನು ಇಡಬೇಕು, ಈ ರೀತಿ ಮಾಡಿದರೆ ಅವರಿಗೆ ರಕ್ಷಣೆ ಕೊಡುವುದಕ್ಕಾಗುತ್ತದೆ ಎನ್ನುವಂಥ ಮನೋಸ್ಥಿತಿ ಇಲ್ಲ, ಧೈರ್ಯ ಇಲ್ಲ ಮತ್ತು ಅದಕ್ಕೆ ತಕ್ಕಂಥ ಕಮಿಟ್‌ಮೆಂಟ್ ಇಲ್ಲ. ಅಂಥ ಪರಿಸ್ಥಿತಿ ಇವತ್ತು ಬಂದಿದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಕಳೆದ ವರ್ಷ ನಿಮಗೆ ಆಗಿರುವ ಅನುಭವದ ಹಿನ್ನೆಲೆಯಲ್ಲಿ ನೀವು ಇವತ್ತಿನಿಂದ ಪ್ರಾರಂಭ ಮಾಡಬೇಕು. ನಿಮ್ಮ ಮನಸ್ಸು ಇಡೀ ಜಿಲ್ಲೆಯ, ಇಡೀ ರಾಜ್ಯದ ಎಲ್ಲಾ ತಾಲ್ಲೂಕುಗಳ ಕಡೆ ಗಮನ ಕೊಟ್ಟು, ಯಾವ ಯಾವ ತಾಲ್ಲೂಕಿನಲ್ಲಿ ಏನೇನು ಬೆಳೆಯುತ್ತಾರೆ, ಯಾವ ಯಾವ ಬೆಳೆಯನ್ನು ಬೆಳೆಯುತ್ತಾರೆ, ಯಾವ ಯಾವ ಪದಾರ್ಥಗಳನ್ನು ಬೆಳೆಯುತ್ತಾರೆ ಎನ್ನುವ ಮಾಹಿತಿಯನ್ನೆಲ್ಲಾ ಕಂಪ್ಯೂಟರ್‌ನಲ್ಲಿ ಶೇಖರಿಸಿ ಇಟ್ಟು ಪ್ರತಿವಾರ ಅಲ್ಲಿನ ಬೆಲೆಯ ಪ್ರತಿಯೊಂದು ಸಂದೇಶ ಬರಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಕಾಗೋಡು ತಿಮ್ಮಪ್ಪನವರು ಪ್ರತಿ ವಾರದ ಬೆಲೆ ಎಂದು ಹೇಳುತ್ತಿದ್ದಾರೆ. ಈಗ ನಮ್ಮ ಕೃಷಿ ಮಾರುಕಟ್ಟೆ ವ್ಯವಸ್ಥೆ ಸಂಪೂರ್ಣವಾಗಿ ಗಣಕೀಕರಣವಾಗಿದ್ದು, ಅಲ್ಲಿ

ಪ್ರಮುಖವಾದಂಥ ಮಾರುಕಟ್ಟೆಗಳ ಪ್ರತಿದಿವಸದ ಬೆಲೆಯನ್ನು ತರಿಸತಕ್ಕಂಥ ಮತ್ತು ಮಾರುಕಟ್ಟೆಗಳಲ್ಲಿ ಅದನ್ನು ತೋರಿಸತಕ್ಕಂಥ ವ್ಯವಸ್ಥೆಯನ್ನು ಈಗ ಕೃಷಿ ಮಾರುಕಟ್ಟೆ ಇಲಾಖೆಯಿಂದ ಜಾರಿಗೆ ತಂದಿದ್ದಾರೆ. ಕೆಲವು ಪ್ರಮುಖ ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆ ಈಗಾಗಲೇ ನಡೆಯುತ್ತಿದೆ. ತಾವು ಹೇಳುತ್ತಿರತಕ್ಕಂಥಾದ್ದು ಬಹಳ ಅವಶ್ಯಕವಾಗಿ ಆಗಲೇ ಬೇಕಾಗಿರತಕ್ಕಂಥಾದ್ದು ಆಗಿದೆ. ಆ ಕೆಲಸವನ್ನು ಸರ್ಕಾರ ಈಗಾಗಲೇ ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾಡಿದ್ದರೆ ಒಳ್ಳೆಯದು. ಇದನ್ನು ನೀವು ಮಾನಿಟರ್ ಮಾಡಬೇಕು. ಯಾರಿಗಾದರೂ ಜವಾಬ್ದಾರಿ ಕೊಡಬೇಕು. ಏಕೆಂದರೆ ರೈತ ಈಗ ಹಿಂದಿನಂತೆ ಇಲ್ಲ. ತುಂಬಾ ಕಷ್ಟ ಪಡುತ್ತಾನೆ. ದುಡ್ಡು ಹಾಕುತ್ತಾನೆ, ಏನಾದರೂ ವ್ಯತ್ಯಾಸವಾದರೆ ತುಂಬಾ ಕಷ್ಟ ಅನುಭವಿಸುತ್ತಾನೆ. ಆ ಪಾಪದ ಹೊರೆಯನ್ನು ನಾವು ಯಾರೂ ಹೊತ್ತುಕೊಳ್ಳಬಾರದು. ಎಷ್ಟೇ ಕಷ್ಟವಾಗಲಿ, ಎಷ್ಟೇ ತೊಂದರೆಯಾಗಲಿ, ಅವನ ರಕ್ಷಣೆಗೆ ನಾವು ಮುಂದಾಗಬೇಕು. ನಾನು ಇದನ್ನು ಏಕೆ ಹೇಳುತ್ತೇನೆ ಎಂದರೆ, you should remain as a spokesman of this class. ಬೇರೆಯವರು ಮಾಡುವುದು ಬೇಡ. ನೀವೇ ಮಾಡಬೇಕು ಎಂದು ನಾನು ಹೇಳುತ್ತೇನೆ. ರೈತರ ಪರವಾಗಿ ಹೋರಾಟ ಮಾಡಬೇಕು. ಅದಕ್ಕಾಗಿ you should remain as the spokesman of this entire farming community. That should be the attitude, that should be the commitment, that should be the action programme of the Ministry concerned. ಇನ್ನು ನಿಮ್ಮ ಕೃಷಿ ನೀತಿಯಲ್ಲಿ ಒಣ ಬೇಸಾಯದ ವಿಚಾರದಲ್ಲಿ ಪ್ರತ್ಯೇಕವಾಗಿ ಹೇಳಿದ್ದೀರಿ. ಅದರಲ್ಲಿ ಒಣ ಬೇಸಾಯವನ್ನು ಅಭಿವೃದ್ಧಿ ಪಡಿಸಬೇಕಾದರೆ ಏನೇನು ಸ್ಟ್ರಾಟೆಜೀಸನ್ನು ಮಾಡಬೇಕು ಎಂದು ಹೇಳಿದ್ದೀರಿ. ನಮ್ಮ ರಾಜ್ಯವನ್ನು ಮಣ್ಣಿನ ಆಧಾರದ ಮೇಲೆ 10 ವಲಯಗಳನ್ನಾಗಿ ಮಾಡಿದ್ದಾರೆ. ಹೆಚ್ಚು ಮಳೆ ಬೀಳತಕ್ಕಂಥಾದ್ದು, ಕಡಿಮೆ ಮಳೆ ಬೀಳತಕ್ಕಂಥಾದ್ದು, ಇನ್ನೂ ಕಡಿಮೆ ಮಳೆ ಬೀಳತಕ್ಕಂಥಾದ್ದು, ಹೀಗೆ ಮಾಡಿದ್ದಾರೆ. ಯಾವ ರೀತಿ ಭೂಸಾರವನ್ನು ರಕ್ಷಣೆ ಮಾಡಬೇಕು, ತೇವವನ್ನು ಉಳಿಸಬೇಕು, ಯಾವ ರೀತಿ ಫಲವತ್ತಾಗಿ ಮಾಡಬೇಕು ಎಂದು ಒಣ ಭೂಮಿಯ ಕೃಷಿಯ ಬಗ್ಗೆ ಹೇಳಿದ್ದೀರಿ. ಅದಕ್ಕೆ ಸ್ಟ್ರಾಟೆಜಿಗಳೇನು ಎಂದು ಹೇಳಿದ್ದೀರಿ. ಈ ಒಣ ಬೇಸಾಯದಲ್ಲಿ ಕೃಷಿ, ಪಶುಸಂಗೋಪನೆ ಇವುಗಳೆಲ್ಲಾ ವಿಸ್ತಾರವಾಗಿ ಬೆಳೆಯತಕ್ಕಂಥಾದ್ದಕ್ಕೆ ಅವಕಾಶವಿದೆ. ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ ಇಂಥ ಕಡೆಗಳಲ್ಲಿ ಪಶುಸಂಗೋಪನೆ ಮತ್ತು ತೋಟಗಾರಿಕೆ ಏಕೆ ವಿಸ್ತಾರವಾಗಿ ಬೆಳೆದಿದೆ ಎಂದರೆ ಅಲ್ಲಿ ಭತ್ತ ಬೆಳೆಯಲು ಆಗುವುದಿಲ್ಲ, ರಾಗಿ ಬೆಳೆದರೆ ಹೆಚ್ಚು ಪ್ರಯೋಜನ ಆಗುವುದಿಲ್ಲ. ಇವತ್ತು ಅನೇಕ ಸುಧಾರಣೆಯ ಬೀಜಗಳು ಬಂದಿರುವುದರಿಂದ ಹೆಚ್ಚು ಹೆಚ್ಚು ತೋಟಗಾರಿಕೆ ಕಡೆ, ರೇಷ್ಮೆ ಬೆಳೆ ಕಡೆ ಮತ್ತು ಪಶುಸಂಗೋಪನೆ ಕಡೆ ತಿರುಗಿದ್ದಾರೆ. ಆದ್ದರಿಂದ ಈ ಒಣ ಬೇಸಾಯವೇ ನಮ್ಮ ಅತ್ಯಂತ ಪ್ರಮುಖವಾದಂಥ ಕ್ಷೇತ್ರ. ನಿಮ್ಮ ಎಲ್ಲಾ ಪ್ರಯೋಗ, ಪ್ರಯತ್ನಗಳೆಲ್ಲವೂ ಈ ಒಣ ಬೇಸಾಯವನ್ನು ಲಾಭದಾಯಕವನ್ನಾಗಿ ಮಾಡತಕ್ಕಂಥಾದ್ದೇ ಆಗಿದೆ. ಹೀಗೆ ಲಾಭದಾಯಕವಾಗಿ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲೆಲ್ಲಿ ಯಾವ ಯಾವ ಫಸಲುಗಳನ್ನು, ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಯಾವ ಯಾವ ರೀತಿಯ ಪಶುಸಂಗೋಪನೆಯನ್ನು, ಅದು ಕುರಿ ಆಗಬಹುದು, ಕೋಳಿ ಆಗಬಹುದು,

ಹಂದಿ ಆಗಬಹುದು, ಹಸು ಆಗಬಹುದು, ಇವುಗಳನ್ನು ಎಲ್ಲೆಲ್ಲಿ ಏನೇನು ಮಾಡಬೇಕು ಎನ್ನುವುದನ್ನು ಮಾಡಬೇಕಾದ ಸ್ಟ್ರಾಟೆಜಿಯೇ ಬಹಳ ಮುಖ್ಯವಾದುದು. ನಾನು ಮೊದಲೇ ಹೇಳಿದ್ದೇನೆ. ಇನ್ನೂ ಹೆಚ್ಚು ಭೂಮಿ ವ್ಯವಸಾಯಕ್ಕೆ ಸಿಗುವುದಿಲ್ಲ. ಇರುವಂಥ ಭೂಮಿಯನ್ನೇ ನಾವು ವಿಸ್ತರಣೆ ಮಾಡಬೇಕು. ಎಕ್ಸ್‌ಟೆನ್ಸೀವ್ ಸರ್ವೀಸ್ ಮಾಡಬೇಕು. ವರ್ಟಿಕಲ್ ಆಗಿ ಹಾಕಬೇಕು. ಅದು ಬಿಟ್ಟು ನಮಗೆ ಬೇರೆ ಮಾರ್ಗವೇ ಇಲ್ಲ. ಅದಕ್ಕೆ ಇವತ್ತು ಒಣ ಬೇಸಾಯದ ಅಭಿವೃದ್ಧಿಗೋಸ್ಕರ ತಾವು ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಪೂರಕವಾಗಿ ಏನು ಹೇಳಿಕೊಂಡಿದ್ದೀರೆಂದರೆ, ಕೃಷಿ ಯೋಗ್ಯ ಹವಾಮಾನ ವಲಯಗಳನ್ನು ಚಿತ್ರಿಸಲು ಮತ್ತು ಅನುಕ್ರಮವಾಗಿ ವಲಯಗಳಲ್ಲಿ ಉತ್ತಮ ಇಳುವರಿ ಸಾಮರ್ಥ್ಯ ಹೊಂದಿರುವ ವಿವಿಧ ಬೆಳೆಗಳನ್ನು ಗುರುತಿಸಲು ಕೂಡಲೇ ಒಂದು ಅಧ್ಯಯನ ಕಾರ್ಯಕ್ರಮವನ್ನು ಪ್ರಯೋಜಿಸತಕ್ಕದ್ದು. 3 ವರ್ಷಗಳಾಗಿವೆ. ಏನಾಗಿದೆ? ಎಲ್ಲಿಗೆ ಬಂತು?

ಉಪಾಧ್ಯಕ್ಷರು : ನನ್ನ ಸಲಹೆ ಏನೆಂದರೆ, ರೈತ ಬೆಳೆದ ಮಾಲಿಗೆ ಮತ್ತು ಕೊಳ್ಳುವಂಥದ್ದು 5 ವರ್ಷಗಳ ತನಕ ಎಲ್ಲಾ ಒಂದೇ ಇದೆ. ಇದಕ್ಕೇನಾದರೂ ಮಾಡಿದರೆ ರೈತನ ಉದ್ಧಾರ ಸಾಧ್ಯವೇ ಹೊರತು ಇಲ್ಲವೆಂದರೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರವೇ ಮಾಡಲಿ, ರಾಜ್ಯ ಸರ್ಕಾರವೇ ಮಾಡಲಿ, ಅವರು ಕೊಳ್ಳುವ ಮಾಲು ಮತ್ತು ಮಾರುವ ಮಾಲಿಗೆ ದರ ಫಿಕ್ಸ್ ಮಾಡಿ ಅವರಿಗೆ ಉಳಿತಾಯವಾಗುವ ಯೋಜನೆ ಮಾಡಿ, ಏನಾದರೂ ಮಾಡಿದರೆ ಉಪಯೋಗವಾಗಬಹುದು.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಅಧ್ಯಯನ ಕೆಲಸವನ್ನು ಇಷ್ಟರೊಳಗಾಗಿ ಪೂರೈಸಬೇಕು. ಈ ಅಧ್ಯಯನ ಆಗಿದ್ದರೆ, ನಮಗೆ ಎಷ್ಟು ಪ್ರಾಥಮಿಕ ಪಶುಸಂಗೋಪನೆ ಚಿಕಿತ್ಸೆ, ಗ್ರಾಮಾಂತರ ಚಿಕಿತ್ಸಾಲಯ ಬೇಕಿತ್ತೋ, ಆಸ್ಪತ್ರೆಗಳು ಬೇಕಿತ್ತೋ, ಯಾವ್ಯಾವ ಜಾನುವಾರುಗಳನ್ನು ಎಲ್ಲೆಲ್ಲಿ ಹಾಕಬೇಕೆನ್ನುವ ವರದಿ ಕೊಡುವ ಕೆಲಸ ಮಾಡುತ್ತಿದ್ದರು. 200 ಜನರನ್ನು ನೇಮಕ ಮಾಡಿದ್ದೇವೆ, 6 ತಿಂಗಳಾದರೂ ಅವರನ್ನು ನೇಮಕ ಮಾಡಲಿಲ್ಲ, ಅದಕ್ಕೆ ಕಾನೂನಿನ ತೊಡಕಿದೆ ಎನ್ನುತ್ತೀರಿ. ಇದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಇವೇ ತೊಡಕಾದರೆ, ನಮ್ಮ ಅಭಿವೃದ್ಧಿ ಯಾವಾಗ? 200 ಜನ ಹೋದರೆ, 200 ಗ್ರಾಮಗಳಲ್ಲಿ ಪಶು ಚಿಕಿತ್ಸಾಲಯ ನಡೆಸುತ್ತಿದ್ದರಲ್ಲವೇ, 10 ಜಾನುವಾರುಗಳ ರಕ್ಷಣೆ ಮಾಡುತ್ತಿದ್ದರಲ್ಲವೇ, 10 ಕುಟುಂಬಗಳು ಉದ್ಧಾರವಾಗುತ್ತಿರಲಿಲ್ಲವೇ? ಇವತ್ತು ಈ ತಾಂತ್ರಿಕ ಕೊರತೆಯಿಂದಾಗಿ ನೀವು 200 ಜನ ಡಾಕ್ಟರುಗಳನ್ನು ಪಶು ಚಿಕಿತ್ಸೆಗೆ ನೇಮಕ ಮಾಡಲಿಲ್ಲವೆಂದರೆ ಅದರಿಂದ ತೊಂದರೆ ಯಾರಿಗೆ?

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ಸಚಿವರು) : ಬೆಳಿಗ್ಗೆ ಕೂಡ ಈ ವಿಚಾರ ಪ್ರಸ್ತಾಪವಾಗಿದೆ. ಈಗಾಗಲೇ ಸರ್ಕಾರದ ಕಡೆಯಿಂದ ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಲಾಗಿದೆ. ಇನ್ನು 15 ದಿನಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ತಾವು ಹೇಳುವ ವ್ಯವಸ್ಥೆ ಬಗ್ಗೆ ನಿಮ್ಮ ಸಲಹೆಯನ್ನು ಪರಿಗಣಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಕಷ್ಟ ನಮಗೆ ಗೊತ್ತಾಗಿದೆ. ನಿಮಗೇನು ಕಷ್ಟ ಬಂದಿದೆಯೋ, ಅದೇ ನಮಗೂ ಬಂದಿದ್ದು. ಶ್ರೀ ರಾಜಶೇಖರ ಮೂರ್ತಿಯವರು ಹಣಕಾಸಿನ ಸಚಿವರಾಗಿದ್ದರು. 800 ಜನ ಡಾಕ್ಟರ್‌ಗಳನ್ನು ನೇಮಿಸಿದ್ದೇವೆ. ವೆರಿಫಿಕೇಷನ್ ಬರಲಿಲ್ಲವೆನ್ನುವ ಕಾರಣಕ್ಕಾಗಿ ನೇಮಕಾತಿ

ಕೊಟ್ಟಿರಲಿಲ್ಲ. ಕೊನೆಗೆ, ಸಚಿವಸಂಪುಟದಲ್ಲಿ ಚರ್ಚೆಯಾಗಿ ನಮ್ಮ ಅಧಿಕಾರಿಗಳು ಹೇಳುವುದನ್ನೇ ಹೇಳುತ್ತಾರೆ. ಬೇರೆ ಕೊಡುವುದೇ ಇಲ್ಲ. ಇದೆಲ್ಲಾ ರಾಜಕೀಯ ತೀರ್ಮಾನಗಳು, ಬೇರೆ ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಅವತ್ತು ಓವರ್‌ರೂಲ್ ಮಾಡಿ, ಸಬ್ಜೆಕ್ಟ್‌ಟು ವೆರಿಫಿಕೇಶನ್, ಆದಾಯ ಹೆಚ್ಚುಕಡಿಮೆ ಇದ್ದರೆ, ಜಾತಿ ಹೆಚ್ಚು ಕಡಿಮೆ ಇದ್ದರೆ ಇವರೆಡೇ ಬಾಕಿ ಇದ್ದದ್ದು. ಪೋಲೀಸ್ ರಿಪೋರ್ಟ್‌ಗೆ ಎಸ್‌ಐ ಬರುವುದಿಲ್ಲ. ಇವನ್ನು ಬಿಟ್ಟು ಅವರಿಂದ ಅಡ್ವರ್ಸ್ ರಿಪೋರ್ಟ್ ಬಂದರೆ ಕೆಲಸದಿಂದ ತೆಗೆದು ಹಾಕುವುದಕ್ಕೆ ಅನುಕೂಲ ಮಾಡಿಕೊಟ್ಟು, ಒಂದು ನಿಯಮವನ್ನು ಹೊರಡಿಸಿದ ಮೇಲೆ ತಕ್ಷಣ ಮಾಡಿದೆವು. ಆ ತರಹ ಮಾಡಿ. ಇಲ್ಲವೆಂದರೆ, ಇದೇ ಹೇಳುವುದು, ಅವರಿಗೇನು ಸಂಕಟ? 1ನೇ ತಾರೀಖು ಸಂಬಳ ಕೊಡುವುದಿಲ್ಲವೇ?

ಉಪಾಧ್ಯಕ್ಷರು : 200 ಜನರಲ್ಲಿ 3 ಜನ ಬರಲಿಲ್ಲವೆಂದರೆ ಎಷ್ಟೊಂದು ತೊಂದರೆ?

ಶ್ರೀ ಬಿ.ಬಿ. ನಿಂಗಯ್ಯ : ಈ ತಿಂಗಳ ಕೊನೆಯಲ್ಲಿ ವೈದ್ಯರನ್ನು ನೇಮಿಸುತ್ತೇವೆ. ಕ್ರಮ ಕೈಗೊಂಡಿದ್ದೇವೆ.

SRI KAGODU THIMMAPPA : If the chief Minister minds, within no minute it can be done.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ಮಂತ್ರಿಗಳಾಗಿ ಮೂರೂವರೆ ವರ್ಷಗಳಾಯಿತು. ಈ ಅವಧಿಯಲ್ಲಿ ವೈದ್ಯರನ್ನು ಪೋಸ್ಟ್ ಮಾಡಲು ಸಾಧ್ಯವಾಗಲಿಲ್ಲವೆಂದರೆ ಇನ್ನು ಒಂದೂವರೆ ವರ್ಷಗಳ ಅವಧಿ ಇದೆ. ಹಾಗಾದರೆ ಸಾಧನೆ ಏನು? ವೈದ್ಯರನ್ನು ನೇಮಿಸಲು ಇವರ ಕಾಲದಲ್ಲಿ ಸಾಧ್ಯವಾಗಲಿಲ್ಲವೆಂದರೆ ಹೇಗೆ? ನನಗೆ ಅವರ ಬಗ್ಗೆ ಗೌರವ ಭಾವನೆ ಇದೆ. ಅವರು ಬಹಳ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಕಾನೂನಿನ ಹೆಸರಿನಲ್ಲಿ ಯಾವ ರೀತಿಯಾಗಿ ಜನರಿಗೆ ಅನ್ಯಾಯವಾಗುತ್ತದೆ ಎಂಬುದನ್ನು ನೋಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಒಣ ಬೇಸಾಯದ ಕ್ಷೇತ್ರದಲ್ಲಿ ನಾವು ತರಿ ಬೆಳೆಯುವುದಕ್ಕಾಗುವುದಿಲ್ಲ. ಬೇರೆ ಬೇರೆ ಹೋಗಬೇಕಲ್ಲವೇ? ಒಣ ಬೇಸಾಯ, ಪಶುಸಂಗೋಪನೆ ಇವುಗಳನ್ನೇ ಮಾಡಬೇಕಲ್ಲವೇ? ನೀವೆಲ್ಲಾ, ಒಣ ಬೇಸಾಯ ಕ್ಷೇತ್ರದಲ್ಲಿ ಯಾವ್ಯಾವ ಬೆಳೆಗಳಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿಕೊಂಡಿದ್ದೀರಿ. ವಿಜಾಪುರದಂತಹ ಕಡೆಗಳಲ್ಲಿ ಇವತ್ತು ಹೇರಳವಾಗಿ ತೋಟಗಾರಿಕೆ ಬರುತ್ತಿದೆ. ಮೊನ್ನೆ ಟಿವಿಯಲ್ಲಿ ನೋಡಿದೆ. ಅವರು ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ದ್ರಾಕ್ಷಿಯನ್ನು ಚೆನ್ನಾಗಿ ಬೆಳೆಯುತ್ತಿದ್ದಾರೆ, ದಾಳಿಂಬೆಯನ್ನು ಹೊಸ ಹೊಸ ನಿಂಬೆಗಳನ್ನು ಬೆಳೆಯುತ್ತಿದ್ದಾರೆ. ಎಂದೆಂದೂ ಬೆಳೆಯದ ಕಡೆಗಳಲ್ಲಿ ಅಷ್ಟೊಂದು ಬೆಳೆಗಳನ್ನು ಬೆಳೆಯುತ್ತಿದ್ದಾರೆಂದರೆ, ಅಲ್ಲಿರುವ ರೈತರಿಗೆ ಎಷ್ಟು ಉತ್ಸಾಹ ಬಂದಿರಬಹುದು. ಅವರಿಗೆ ನೀವು ಪ್ರೋತ್ಸಾಹ ಕೊಡಬೇಕಲ್ಲವೇ? ಈ ಪ್ರೋತ್ಸಾಹ ಕೊಡಬೇಕೆಂದರೆ, ಈ ಅಧ್ಯಯನ ತಂಡ ಹೋಗಿ ಒಂದು ಕಾರ್ಯಕ್ರಮವನ್ನು ರೂಪಿಸಿದರೆ, ಆಗ ಇನ್ನಷ್ಟು ಕ್ಷೇತ್ರಗಳನ್ನು ಬಲಪಡಿಸಬಹುದೆಂಬುದು ಗೊತ್ತಾಗುತ್ತದೆ. ಮೊನ್ನೆ ಗುಲ್ಬರ್ಗಾಕ್ಕೆ ಹೋಗಿದ್ದಾಗ

ಅಲ್ಲಿನ ಎಂಎಲ್‌ಎ ರವರು ನನ್ನನ್ನು ಕರೆದುಕೊಂಡು ಹೋಗಿ 300 ಎಮ್ಮೆಗಳನ್ನು ಇಟ್ಟು ಡೇರಿ ಮಾಡಿರುವುದನ್ನು ತೋರಿಸಿದರು. ನನಗೆ ಬಹಳ ಖುಷಿಯಾಯಿತು. ಅವರಿಗೆ ಭೂಮಿ ಕೊಡುವುದಕ್ಕೆ ಎಷ್ಟು ಸಾರಿ ಕ್ಯಾಬಿನೆಟ್‌ಗೆ ಬರಬೇಕು? ಏಕೆ ಆಗಿಲ್ಲ? ಅರ್ಧ ಭಾಗ ಖಾಸಗಿಯವರಿಗೆ ಪ್ರೋತ್ಸಾಹ ಕೊಡುತ್ತೇವೆ, ಅದಕ್ಕೆ ಇದಕ್ಕೆ ಕೊಡುತ್ತೇವೆ ಎಂದು ಪುಂಗಿ ಊದಿಸಿ, ಒಬ್ಬ ಖರ್ಚು ಮಾಡಿಕೊಂಡು ಅಷ್ಟು ಚೆನ್ನಾಗಿ ಮಾಡಿದರೂ, ಇವತ್ತು ದುಡ್ಡು ಕೊಡುತ್ತೇನೆ ಭೂಮಿ ಕೊಡಿ ಎಂದು ಕೇಳಿದರೆ, 2-2 ಸಾರಿ ಕ್ಯಾಬಿನೆಟ್‌ಗೆ ಬಂದರೂ ನಾಟಕ ಮಾಡಿಕೊಂಡು ಹಿಂದಕ್ಕೆ ತರುತ್ತೀರಾ? ಏಕೆ ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ತರಬೇಕಿತ್ತು? ಯಾರಿಗೋಸ್ಕರ? ಯಾವ ಪ್ರಯೋಜನಕ್ಕೋಸ್ಕರ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ತಪ್ಪು ತಿಳಿದುಕೊಳ್ಳಬೇಡಿ. ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ಮಾಡಿದ ಸಂದರ್ಭದಲ್ಲಿ ನಿಮ್ಮ ಪಕ್ಷವೂ ಸೇರಿದಂತೆ ಯಾರೂ ಪ್ರತಿಭಟನೆ ಮಾಡಲಿಲ್ಲ. ನಾನೊಬ್ಬನೇ ಪ್ರತಿಭತನೆ ಮಾಡಿದ್ದು. ಆಗ ಏಕೆ ಸುಮ್ಮನಿದ್ದಿರಿ? ದಾಖಲೆಯಲ್ಲಿದೆ. ಶ್ರೀ ಜಾಲಪ್ಪನವರು ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ಮಾಡಿದ ಸಂದರ್ಭದಲ್ಲಿ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡಿದ್ದು ನಾನೊಬ್ಬನೇ.

ಶ್ರೀ ಕಾಗೋಡು ತಿಮ್ಮಪ್ಪ : ನಾನು ಹೇಳಿದ್ದು, ಇವತ್ತು ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು, ಡೇರಿ ಮಾಡುವುದಕ್ಕೆ, ಹೂವು ಬೆಳೆಸುವುದಕ್ಕೆ, ತರಕಾರಿ ಬೆಳೆಸುವುದಕ್ಕೆ ಕೈಗಾರಿಕೆ ಸ್ಥಾಪಿಸುವುದಕ್ಕೆ ನಮ್ಮ ಹಿಂದಿನ ಕಾನೂನಿನ ಎಲ್ಲಾ ನಿಬಂಧನೆಗಳನ್ನು ತಿದ್ದುಪಡಿ ಮಾಡಿ ಭೂಮಿ ಕೊಡುತ್ತೇವೆ ಎಂದು ನೀವು ಹೇಳಿ, ಊರು ತುಂಬಾ ಜಾಹೀರು ಹೊಡೆಸಿ, ಡಂಗೂರ ಹೊಡೆಸಿ, ಇವತ್ತೊಬ್ಬ ಡೇರಿ ಮಾಡುತ್ತೇನೆ ಭೂಮಿ ಕೊಡಿ ಎಂದು ಕೇಳಿದರೆ ಅದಕ್ಕೆ ನಾಟಕ ಮಾಡುತ್ತೀರಾ? What is that transparency? ಇದಕ್ಕೇನು ಹೇಳಬೇಕು?

ಶ್ರೀ ಸಿ. ಬೈರೇಗೌಡ : ನಾನೂ ನಿಮ್ಮ ಅಭಿಪ್ರಾಯವನ್ನೇ ಹೊಂದಿರುವವನು. ಸಚಿವಸಂಪುಟದ ಸಭೆಯಲ್ಲೂ ಸಹ ನೀವೇನು ವಾದ ಮಂಡಿಸಿದಿರಿ ಅದಕ್ಕಿಂತಲೂ ಪ್ರಬಲವಾದ ವಾದವನ್ನು ಮಂಡಿಸಿದ್ದೆ. ಒಟ್ಟಾರೆ ಸಚಿವಸಂಪುಟದ ತೀರ್ಮಾನ ಮಾಡಿದಾಗ ನಾವು ಅದರ ಪ್ರಕಾರ ಹೋಗಬೇಕಾಗುತ್ತದೆ. ಏಕೆ ಅಂದರೆ, ಅದಕ್ಕೆ ಬೇರೆ ಕಾರಣವಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಾರಣ ಏನೇ ಇರಬಹುದು. ಈ ರೀತಿ ಹೇಳಿದರೆ ಹಲವಾರು ಸಮಸ್ಯೆಗಳು ಉದ್ಭವವಾಗುತ್ತವೆ.

ಶ್ರೀ ಶಿವಾನಂದ ಪಾಟೀಲ್ : ಬೈರೇಗೌಡರು ಈ ತರಹ ಪುನಃ ಪ್ಲೀಡ್ ಮಾಡುತ್ತಿರುವುದು ದುರ್ದೈವೆನಿಸುತ್ತದೆ. ಅವರೂ ಕೂಡ ಪರ್ಸನಲ್ ಆಗಿ ಗುಲ್ಬರ್ಗಾ ಬಗ್ಗೆ ವಿಶೇಷವಾಗಿ ತನಿಖೆ ಮಾಡಿಸಲಿ, ಅಲ್ಲಿ ಇನ್ನೂ 60 ಸಾವಿರ ಲೀಟರ್‌ನಷ್ಟು ಹಾಲಿನ ಬೇಡಿಕೆ ಇದೆ. ಮಹಾರಾಷ್ಟ್ರದಿಂದ ಅವರು ಇವತ್ತು ತರಿಸಿದರೂ ಕೂಡ ಡಿಮ್ಯಾಂಡ್ ಮೀಟ್-ಔಟ್ ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ, ನಿಮ್ಮ ಜಿಲ್ಲಾ ಕೆಎಂಎಫ್‌ಗಳಲ್ಲಿ ಎಷ್ಟು ಲಾಸ್ ಇವೆ, ಅಂಥವನ್ನು ಕ್ಲೋಸ್

ಮಾಡುವುದು ಬಿಟ್ಟು 5-6 ವರ್ಷಕ್ಕೆ ಕೋಟಿ ರೂಪಾಯಿಗಳ ಸಹಾಯಧನವನ್ನು ಕೊಡುತ್ತೀರಿ. ಕ್ಯಾಬಿನೆಟ್‌ನಲ್ಲಿಟ್ಟು ಅಥವಾ ಎನ್‌ಡಿಡಿಬಿಯಿಂದ ಮ್ಯಾಚಿಂಗ್ ಗ್ರಾಂಟ್ ತರಿಸಿ ಕೊಡುತ್ತೀರಿ. ಆದರೆ, ಯಾರೊಬ್ಬ ಪ್ರೈವೇಟ್‌ನವರು ಇಷ್ಟು ಮಾಡಿದ್ದೇವೆ, ಲ್ಯಾಂಡ್ ಎಗ್ಜೆಂಪ್‌ಷನ್ ಕೊಡಿ ಎಂದರೆ ಕಾಯಿದೆ ತಂದ ಮೇಲೂ ಮೂರು ಸಾರಿ ನಿಮ್ಮ ಕ್ಯಾಬಿನೆಟ್‌ಗೆ ಹೋಗಿ, ಅದು ಮೊನ್ನೆ ರಿಜೆಕ್ಟ್ ಆಯಿತು. ಮತ್ತೆ, ನೀವು ಏನು ಮಾಡುತ್ತೀರೆಂದರೆ, ಯಾರು ಲಾಸ್ ಮಾಡುತ್ತಾರೆ ಅವರಿಗೆ ಪ್ರೊಮೋಟ್ ಮಾಡಬೇಕೆಂಬ ದುರುದ್ದೇಶವಿಟ್ಟುಕೊಂಡರೆ ಹೇಗೆ? ಬಿಜಾಪುರ ಕೆಎಂಎಫ್ 5 ಕೋಟಿ ರೂಪಾಯಿ ಲಾಸ್‌ನಲ್ಲಿದೆ. ಕಳೆದ 6 ವರ್ಷಗಳಿಂದ ನಿಮ್ಮ ಸರ್ಕಾರಿ ಮಂತ್ರಿಗಳು ಚುನಾವಣೆ ಮಾಡಲಿಲ್ಲ. ಸರ್ಕಾರ ಮಾಡುವ ಪ್ರಕ್ರಿಯೆ ಏನು?

ಶ್ರೀ ಚಂದ್ರಕಾಂತ ಬೆಲ್ಲದ್ : ಧಾರವಾಡದಲ್ಲೂ ಅದೇ ಪರಿಸ್ಥಿತಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಬಹಳ ಕಡಿಮೆ ಬಂಡವಾಳದಲ್ಲಿ ಹೇಗೆ ಮಾಡಬೇಕೆಂಬುದು ನಮಗೂ ಗೊತ್ತಾಯಿತು.

ಶ್ರೀ ಸಿ. ಬೈರೇಗೌಡ : ರಾಷ್ಟ್ರಮಟ್ಟದಲ್ಲಿ ಎನ್‌ಡಿಡಿಬಿ ಎನ್ನುವ ಸಂಸ್ಥೆ ಇದೆ. ಅದು ಮೂಲ ಸಂಸ್ಥೆ. ಕೇಂದ್ರ ಸರ್ಕಾರವೂ ಸಹ 10 ಸಾವಿರ ಲೀಟರ್‌ಗಳಿಗಿಂತ ಹೆಚ್ಚಿಗೆ ಉತ್ಪಾದನೆ ಮಾಡುವ ಡೇರಿಗಳಿಗೆ ಅದಕ್ಕೆ ಅವಕಾಶವಿರಬಾರದೆನ್ನುವುದನ್ನು ಮಾಡಿದೆ.

ಶ್ರೀ ಶಿವಾನಂದ ಪಾಟೀಲ್ : ಅದರಲ್ಲೂ ಎಗ್ಜೆಂಪ್‌ಷನ್ ಇದೆ. ಎನ್‌ಡಿಡಿಬಿಯಿಂದ ಕ್ಲಿಯರೆನ್ಸ್ ತೆಗೆದುಕೊಂಡೇ ಮಾಡಿದ್ದು.

ಶ್ರೀ ಸಿ. ಬೈರೇಗೌಡ : ಕುರಿಯನ್‌ರವರಿಂದ ಪತ್ರನೂ ಬಂದಿದೆ.

ಶ್ರೀ ಶಿವಾನಂದ ಪಾಟೀಲ್ : ಕುರಿಯನ್‌ರವರಿಂದ ನೀವು ಆಮೇಲೆ ಬರೆಸಿಕೊಂಡು ಬಂದಿರಬಹುದು. ಅವರಿಗೆ ಮೊದಲು ಎಗ್ಜೆಂಪ್‌ಶನ್ ಕೊಟ್ಟಿದ್ದಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರೆ, ಇತ್ತೀಚೆಗೆ ಮಾನ್ಯ ಕಾಗೋಡು ತಿಮ್ಮಪ್ಪನವರ ಸಲಹೆಯನ್ನು ತಾವು ಕೇಳುವುದಿಲ್ಲವೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮೊದಲನೆ ಸಲಹೆ ಮಾನ್ಯ ವಾಟಾಳ್ ನಾಗರಾಜ್‌ರವರದ್ದು ನಂತರ ಮಾನ್ಯ ಕಾಗೋಡು ತಿಮ್ಮಪ್ಪನವರ ಸಲಹೆ ಕೇಳುವುದು ಅಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸದಸ್ಯರುಗಳಾದ ವಾಟಾಳ್ ನಾಗರಾಜ್, ಕಾಗೋಡು ತಿಮ್ಮಪ್ಪ, ಹಾಗೂ ಮಾನ್ಯ ಬೈರೇಗೌಡರ ಸಲಹೆ ಕೂಡ ಅಮೂಲ್ಯವಾಗಿರುತ್ತವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಪಂಚಭೂತಗಳಲ್ಲಿ ಈ ಮೂರು ಭೂತುಗಳು, ಇನ್ನು ಎರಡು ಭೂತುಗಳು ಎಲ್ಲಿ ಹೋಗಿವೆ?

ಶ್ರೀ ಎಸ್. ಸುರೇಶ್ ಕುಮಾರ್ : ಹಾಗಾದರೆ ಶ್ಯಾಡೋ ಕ್ಯಾಬಿನೆಟ್‌ನಲ್ಲಿ ಶ್ಯಾಡೋ ಭೂತಗಳು ಎನ್ನುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ : ಅವರು ಕೃಷಿ ನೀತಿಯಲ್ಲಿ ಒಣ ಕೃಷಿ ಬೇಸಾಯ ವಿಚಾರದಲ್ಲಿ ಪ್ರಸ್ತಾಪ ಮಾಡುತ್ತಾ ಈ ಎಲ್ಲಾ ಅಂಶಗಳನ್ನು ಸೇರಿಸಿಕೊಂಡಿದ್ದಾರೆ. ಈ ಅಂಶಗಳ ಭಾಗವಾದ್ದರಿಂದ ನೀವು ಹೇಳಿದಂಥ ಕಾರ್ಯ ನೀತಿಯನ್ನೇ ಅನುಷ್ಠಾನಕ್ಕೆ ತರುವಂತಹ ಸಂದರ್ಭದಲ್ಲಿ ನೀವೇ ಹೇಗೆ ಎಡುವುತ್ತೀರಿ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನಾನು ಹೇಳಬೇಕಾಯಿತು. ಕೃಷಿ ಕ್ಷೇತ್ರಕ್ಕೆ ಮಾರುಕಟ್ಟೆಯ ವಿಚಾರವಾಗಿ ಮೂಲ ಸೌಲಭ್ಯಗಳನ್ನು ಒದಗಿಸುವುದರ ಬಗ್ಗೆ ಈಗ ತಾನೇ ತಾವು ಹೇಳಿದಿರಿ, ಮಾರುಕಟ್ಟೆ ಅಭಿವೃದ್ಧಿ ಮಾಡಬೇಕಾದರೆ ರಸ್ತೆ, ವಗೈರೆ ಬೇಕಾಗುತ್ತವೆ. ಇದಕ್ಕಾಗಿ ತಾವು ಎರಡು ವರ್ಷ ದುಡ್ಡು ಕೊಟ್ಟಿದ್ದೀರಿ. ಮೂರನೇ ವರ್ಷದಿಂದ ದುಡ್ಡು ಕೊಡುವುದಕ್ಕೆ ಏನಾಯಿತು?

ಉಪಾಧ್ಯಕ್ಷರು : ಅವರು ಉತ್ತರ ಕೊಡುವಾಗ ಹೇಳುತ್ತಾರೆ, ಮತ್ತೇನೂ ಈಗ ಕ್ಲಾರಿಫಿಕೇಷನ್ ಬೇಡ, ನೀವು ಮುಂದುವರಿಸಿ.

ಶ್ರೀ ಕಾಗೋಡು ತಿಮ್ಮಪ್ಪ : ಇನ್ನು ವಿಶೇಷವಾಗಿ ಹೇಳುವುದಾದರೆ, ತಮ್ಮ ಇಡೀ ಕೃಷಿ ಕ್ಷೇತ್ರದಲ್ಲಿ ವಿಸ್ತೀರ್ಣದ ಕೆಲಸ ಏನಿದೆ ಅದಕ್ಕೆ ತಾವು ಹೆಚ್ಚು ಆಸಕ್ತಿ ವಹಿಸಲಿಲ್ಲ ಎಂದು ನನಗನ್ನಿಸುತ್ತದೆ. ಏಕೆಂದರೆ ಹಿಂದೆ ಗ್ರಾಮ ಸೇವಕರು ಎಂದಿದ್ದರು. ಈಗ ತಾವು ಪ್ರತಿಗ್ರಾಮಪಂಚಾಯಿತಿಗೊಬ್ಬ ಕೃಷಿ ಸಹಾಯಕ ಎಂದು ಮಾಡಿ, ಅವರಲ್ಲಿ ನಾಲ್ಕು-ಐದು ಜನ ವಲಯ ಮಾಡಿ ಅವರ ಮೇಲೆ ಒಬ್ಬ ಅಗ್ರಿಕಲ್ಚರ್ ಅಸಿಸ್ಟೆಂಟ್ ಆಫೀಸರ್ ಎಂದು ಮಾಡಿದ್ದೀರಿ. ನಂತರ ಇವರ ಮೇಲೆ ಅಸಿಸ್ಟೆಂಟ್ ಡೈರೆಕ್ಟರ್, ನಂತರ ಡೆಪ್ಯೂಟಿ ಡೈರೆಕ್ಟರ್, ನಂತರ ಜಾಯಿಂಟ್ ಡೈರೆಕ್ಟರ್ ನಂತರ ಡೈರೆಕ್ಟರ್ ಎಂದು ಮಾಡಿದ್ದೀರಿ. ಈಗ ನಾನು ತಮ್ಮಲ್ಲಿ ಕೇಳುವುದೇನೆಂದರೆ ನೀವೇನು ಪ್ರತಿ ಗ್ರಾಮ ಪಂಚಾಯಿತಿಗೊಬ್ಬ ಕೃಷಿ ಸಹಾಯಕ ಎಂದೇನು ಮಾಡಿದ್ದೀರಲ್ಲಾ, ಅವರಲ್ಲಿ ಎಷ್ಟು ಜನ ಕೃಷಿ ಸಹಾಯಕರು ಗ್ರಾಮ ಪಂಚಾಯಿತಿಯಲ್ಲಿಯೇ ವಾಸವಾಗಿದ್ದಾರೆ?

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ತಿಮ್ಮಪ್ಪನವರೇ, ನಮ್ಮ ಮಲನಾಡಿನಲ್ಲಂತೂ ಇಲ್ಲವೇ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಹಸಿ ಹಸಿ ಸುಳ್ಳಾಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಿದ್ಧರಾಮಯ್ಯನವರೇ, ತಾವು ತಪ್ಪು ತಿಳಿದುಕೊಳ್ಳಬೇಡಿ, ಯಾವ ಊರಿನಲ್ಲೂ ಇವರು ವಾಸ ಮಾಡುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಬೈರೇಗೌಡರ ವಿಚಾರದಲ್ಲಿ ತಾವು ಈ ರೀತಿ ಸುಳ್ಳು ಹೇಳಿದರೆ ಹೇಗೆ?

ಶ್ರೀ ಸಿ. ಬೈರೇಗೌಡ : ಬಹಳ ವರ್ಷಗಳಿಂದ ಈ ಇಲಾಖೆ ಎಷ್ಟೊಂದು ಕುಲಗೆಟ್ಟಿತ್ತು ಎಂದರೆ, ರಾಗಿ, ಭತ್ತ ಮುಂತಾದ ಬೆಳೆಗಳನ್ನು ಭೂಮಿಯಿಂದ ಬೆಳೆಯುತ್ತಾರೆ ಎನ್ನುವುದೂ ಕೂಡ ಮರೆತು

ಬಿಟ್ಟಿದ್ದರು. ಈಗ ನಾವು ಇಂಥ ಹಳ್ಳಿಗಳಲ್ಲಿ ಇಂಥ ಮಣ್ಣಿನಲ್ಲಿ ಇಂಥ ಬೆಳೆ ಬೆಳೆಯುತ್ತಾರೆ ಎಂದು ಸ್ವಲ್ಪ ಅರ್ಥ ಮಾಡಿಸುವ ಪ್ರಯತ್ನ ನಡೆದಿದೆ. ಏಕೆಂದರೆ, ಅಧಿಕಾರಿಗಳ ವೃಂದವನ್ನು ಯಾವ ಯಾವ ಉಪಯೋಗಕ್ಕೆ ಬಳಸಬೇಕಾಗಿತ್ತೋ ಆ ಕಾರ್ಯಕ್ಕೆ ಬಳಸದೇ ಅವರನ್ನು ದುರುಪಯೋಗ ಮಾಡಿಕೊಂಡಿರುವುದು ಸುಮಾರು ನೂರಕ್ಕೆ ಸಾವಿರಷ್ಟು ಇತ್ತು. ಇದು ಎಲ್ಲವನ್ನೂ ನಾವು ಬಂದ ಮೇಲೆ ಕಡಿಮೆ ಮಾಡಿ, ಕೊನೇಪಕ್ಷ ಅಧಿಕಾರಿಗಳ ವೃಂದವು ಹಳ್ಳಿಗಳಿಗೆ ಹೋಗತಕ್ಕಂಥ ಸ್ಥಿತಿಯನ್ನು ಇವತ್ತು ನಾವು ಕಾಣಬಹುದಾಗಿದೆ. ಉದಾಹರಣೆಗೆ ಹೇಳುವುದಾದರೆ ನೇರವಾದ ದರ್ಶನ ತಮಗೂ ಕೂಡ ಆಗಿದೆ. ಅವತ್ತು ತಾವು ವೀಡಿಯೋದಲ್ಲಿ ಕಾಣಲಿಲ್ಲ. ಏಕೆಂದರೆ ನೀವು ಬೇರೆ ಕಡೆ ನಿಂತುಕೊಂಡಿದ್ದಿರಿ. ನಿಮ್ಮ ತಾಲ್ಲೂಕಿನಲ್ಲಿ ನಿಮ್ಮ ಕಣ್ಣೆದುರಿಗೆ ನಡೆದಿತ್ತು. ಆದರೆ ತಾವು ವೀಡಿಯೋದಲ್ಲಿ ಕಾಣಲಿಲ್ಲ. ಅದರ ಪ್ರತ್ಯಕದರ್ಶನ ತಮಗೂ ಕೂಡ ಆಗಿರುವುದರಿಂದ, ಬಹುಶಃ ನಿಮಗೂ ಗೊತ್ತಿರುತ್ತದೆ. ಅವರನ್ನು ಹಳ್ಳಿಗಳಿಗೆ ಕಳುಹಿಸತಕ್ಕಂಥ ಪ್ರಯತ್ನ ನಡೆದಿದೆ, ಆದರೆ ಅವರು ಹೋಗಿದ್ದಾರೆಂದು ನಾನು ಹೇಳುತ್ತಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಈ ಭೂಸಾರ ಇಲಾಖೆ, ಕೃಷಿ ಇಲಾಖೆ ಎರಡು ಒಟ್ಟಿಗೆ ಸೇರಿಸಿ, ಭೂಸಾರವೆನ್ನೆಲ್ಲಾ ತೊಳೆದು ಈ ಕೃಷಿ ಇಲಾಖೆಗೆ ಸೇರಿಸಿರುವುದು ಬಹಳ ಒಳ್ಳೆಯ ಕೆಲಸ. ಹಿಂದೆ ಗ್ರಾಮಸೇವಕರು ಎಂದಿದ್ದರಲ್ಲಾ ಅವರು ಬಹಳ ಒಳ್ಳೆಯ ಕೆಲಸ ಮಾಡುತ್ತಿದ್ದರು. ಹೆಚ್ಚು ಫಲವತ್ತತೆ ಭೂಮಿ ಇರುವುದನ್ನು ಯಾರಾದರೂ ತಿಳಿಸಿದರೆ ಅವರಿಗೆ ರಾಸಾಯನಿಕ ಗೊಬ್ಬರ ಹೇಗೆ ಬಳಸುವುದು ಎಂದು ಹೇಳಿಕೊಡುತ್ತಿದ್ದರು. ಹಾಗೂ ಗ್ರಾಮೀಣ ಪ್ರದೇಶದಲ್ಲಿ, ಜಾನಪದ ಸಾಹಿತ್ಯಕ್ಕೆ, ಜಾನಪದ ಕಲೆಗೆ ಬಹಳ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಹೀಗೆ ಎಲ್ಲಾ ರೀತಿಯಿಂದಲೂ ಸರ್ವಾಂಗೀಣ ಅಭಿವೃದ್ಧಿ ಕೆಲಸಗಳನ್ನು ಈ ಗ್ರಾಮ ಸೇವಕರು ಮಾಡುತ್ತಿದ್ದರು. ಇದರ ಜೊತೆಗೆ ಇವರು ಜನರ ವಿಶ್ವಾಸವನ್ನು ಗಳಿಸುತ್ತಿದ್ದರು. ಆದರೆ ಈಗ ಏನಾಗಿದೆಂದರೆ, ಕೃಷಿ ಸಹಾಯಕರೆಂದೇನೂ ಇದ್ದಾರೋ ಅವರು ಯಾರು ಗ್ರಾಮಗಳಲ್ಲಿ ವಾಸ ಮಾಡುತ್ತಿಲ್ಲ. ನಾವೇನಾದರೂ ಜಾಸ್ತಿ ಮಾಡುವುದಕ್ಕೆ ಹೋದರೆ ಚುನಾವಣೆಯಲ್ಲಿ ನಮ್ಮ ಮೇಲೆ ತಿರುಗಿ ಬೀಳುತ್ತಾರೆ. ಇತ್ತೀಚಿನ ದಿನಗಳಲ್ಲಿನ ರೈತರು ಹಿಂದಿನ ರೈತರಷ್ಟು ದಡ್ಡರೇನಲ್ಲ, ಯಾವ ಬೀಜ ಹಾಕಬೇಕು, ಯಾವ ಗೊಬ್ಬರಗಳನ್ನು ಹಾಕಬೇಕೆಂದು ಚೆನ್ನಾಗಿ ತಿಳಿದು ಕೊಂಡಿದ್ದಾರೆ. ಇಂತಹ ರೈತರಿಗೆ ನಿಮ್ಮ ಅಧಿಕಾರಿಗಳು ಸಹಾಯ ಬೇಕಾಗಿಲ್ಲ. ಆದ್ದರಿಂದ, ನಾನೀಗಾಗಲೇ ಹೇಳಿದಂತೆ ಈ ಗಾಮ್ರಗಳಲ್ಲಿ ಇಂಥ ಅಧಿಕಾರಿಗಳು ಇರುವುದಕ್ಕಿಂತ, ಯಾರು ಕೃಷಿ ತಜ್ಞ ಇರುತ್ತಾನೋ ನೀವು ಅವನಿಗೆ ಒಂದು ಯಾವುದಾದರೂ ಒಂದು ಟೈಟಲ್ ಕೊಟ್ಟು ಬಿಡಿ. ಉದಾಹರಣೆಗೆ ಹೇಳುವುದಾದರೆ, ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಗೌರವ ಡಾಕ್ಟರ್‌ಗಳೆಂದು ಇರುತ್ತಾರಲ್ಲಾ, ವಿಸಿಟಿಂಗ್ ಡಾಕ್ಟರ್‌ಗಳೆಂದು ಇರುತ್ತಾರಲ್ಲಾ, ಅದೇ ಮಾದರಿಯಲ್ಲಿ ಗ್ರಾಮಪಂಚಾಯಿತಿಗೊಬ್ಬ ಉತ್ತಮ ರೀತಿಯಲ್ಲಿ ಕೃಷಿ, ತೋಟಗಾರಿಕೆಯಲ್ಲಿ, ಪರಿಣಿತ ಹೊಂದಿದ ಒಬ್ಬ ಕೃಷಿಕನನ್ನು ನೀವು ದಯವಿಟ್ಟು ಅವರು ಸಹಾಯವನ್ನು ಸರ್ಕಾರಿ ಆಜ್ಞೆಯ ಪ್ರಕಾರ ಅಥಾರಿಟೇಟೀವ್ ಆಗಿ ನೇಮಕ ಮಾಡಿಕೊಂಡರೆ ನಿಮಗೆ ಎಷ್ಟೋ ಸಹಾಯವಾಗುತ್ತದೆ. ಏಕೆಂದರೆ, ನಮ್ಮ ಊರಿನಲ್ಲಿ ಒಬ್ಬನು ಕಾಫಿ ಬೆಳೆ ಬೆಳೆಯುವುದನ್ನು ಎಷ್ಟು ತಿಳಿದುಕೊಂಡಿದ್ದಾನೆಂದರೆ, ಎಲ್ಲಲ್ಲಿ ಕಾಫಿ ಬೆಳೆಯಬಹುದು, ಏನೇನು ಹಾಕಬೇಕು ಎಂದು ಎಲ್ಲಾ ವಿವರವನ್ನು ಚೆನ್ನಾಗಿ ತಿಳಿದುಕೊಂಡಿದ್ದಾನೆ. ಆದ್ದರಿಂದ ನೀವು ಇವತ್ತು

ಗ್ರಾಮದಲ್ಲಿರುವ ಈ ಕೃಷಿ ಸಹಾಯಕರನ್ನು ಕಡ್ಡಾಯವಾಗಿ ಗ್ರಾಮದಲ್ಲಿ ವಾಸಮಾಡಬೇಕೆಂದು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಸಿಟಿಯಲ್ಲಿರುವಂತಹ ಸಿನಿಮಾಮಂದಿರಗಳು, ಹೋಟೆಲ್‌ಗಳು ಹಳ್ಳಿಗಳಲ್ಲಿರುವುದಿಲ್ಲ, ಇವತ್ತು ಗರುಡನಪಾಳ್ಯದಲ್ಲಿರುವ ಪರಿಸ್ಥಿತಿ ಬಹುಶಃ ನಿಮಗೆ ಗೊತ್ತಿರಬಹುದು. ಈ ದೃಷ್ಟಿಯಿಂದ ಅಧಿಕಾರಿಗಳನ್ನು ಗ್ರಾಮದಲ್ಲಿ ಉಳಿಯುವಂತೆ ಮಾಡದೇ ಹೋದರೆ, ಎಕ್ಸ್‌ಟೆನ್ಸ್‌ನ್ ಸರ್ವೀಸ್ ಏನಿದೆ ಅದು ಕೇವಲ ಕಾಗದದಲ್ಲಿ ಉಳಿಯುತ್ತದೆಯೇ ಹೊರತು ಜನಗಳಿಗೆ ಉಪಯೋಗವಾಗುವುದಿಲ್ಲ. ಆದ್ದರಿಂದ ದಯಮಾಡಿ ಈ ಕೆಲಸ ಮಾಡಿ. ಸಾಧ್ಯವಾದರೆ ನಿಮ್ಮ ಜಾಯಿಂಟ್ ಡೈರೆಕ್ಟರ್ ರವರನ್ನು ತೆಗೆದು ಹಾಕಿ ಬಿಡಿ. ಇವರು ಸುಮ್ಮನೆ ಅನಾವಶ್ಯಕ ಏಕೆಂದರೆ ಇವರು ಕೇವಲ ಕೊಕ್ಕೆ ಹಾಕುವ ಕೆಲಸವನ್ನು ಮಾತ್ರ ಮಾಡುತ್ತಾರೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್, ಜಿಲ್ಲಾ ಮಟ್ಟದಲ್ಲಿ ಒಬ್ಬ ಡೆಪ್ಯೂಟಿ ಡೈರೆಕ್ಟರ್, ಹಾಗೂ ರಾಜ್ಯ ಮಟ್ಟದಲ್ಲಿ ಡೈರೆಕ್ಟರ್ ಇದ್ದರೆ ಸಾಕು. ಈ ಜಾಯಿಂಟ್‌ಗಳನ್ನು ತೆಗೆದು ಹಾಕಿಬಿಡಿ. ಇವೇನೂ ಕೆಲಸ ಮಾಡುವುದಿಲ್ಲ. ಇದರಿಂದ ಹೆಚ್ಚು ಜನರಿಗೆ ಹುದ್ದೆಗಳನ್ನು ಕೊಡುವುದಕ್ಕಾಗುತ್ತದೆಯೇ ವಿನಹ ಹೆಚ್ಚು ಜವಾಬ್ದಾರಿಯನ್ನು ಹಂಚುವುದಕ್ಕಾಗುವುದಿಲ್ಲ. ಸಾಧ್ಯವಾದರೆ ಈಗಿರುವ ಕೃಷಿ ಸಹಾಯಕರೊಬ್ಬರೇ ಸಾಕು. ಅವರ ಮೇಲಿರುವ ನಾಲ್ಕು-ಐದು ಜನಕೊಬ್ಬರಂತೆ ಮಾಡಿಕೊಂಡಿರುವ ನಿಮ್ಮ ಎಎಒ ಅವರನ್ನು ದಯಮಾಡಿ ತೆಗೆದು ಬಿಡಿ. ಅವರು ಹಳ್ಳಿಗಳಿಗೆ ಹೋಗುವುದಿಲ್ಲ, ಕೆಲಸವನ್ನೂ ಮಾಡುವುದಿಲ್ಲ. ನಮಗೇನೆಂದರೆ, ಕೃಷಿ ಸಹಾಯಕ, ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರು, ನಿರ್ದೇಶಕರು ಇಷ್ಟು ಇದ್ದರೆ ಸಾಕು. ದಯಮಾಡಿ ನಮಗೆ ಈ ಸಹಾಯವನ್ನು ಮಾಡಿ ಕೊಡಿ. ಇದರಿಂದಾಗಿ ಅವರಿಗೆ ಸಂಬಳ ಕೊಡುವುದು ಉಳಿಯುವುದಲ್ಲದೆ ಅವರ ಹೊರೆಯೂ ಕೂಡ ತಪ್ಪುತ್ತದೆ. ಜೊತೆಗೆ ಅವರ ಕಾಟವೂ ಕೂಡ ನಮಗೆ ತಪ್ಪುತ್ತದೆ. ಆದ್ದರಿಂದ ದಯಮಾಡಿ ನಮಗೆ ಈ ಕೆಲಸ ಮಾಡಿ ಕೊಡಿ.

ಶ್ರೀ ಸಿ. ಬೈರೇಗೌಡ : ಕೃಷಿ ಇಲಾಖೆಗೆ ಯಾರಾದರೂ ಪ್ರವೇಶ ಮಾಡಬೇಕಾಗಿದ್ದರೆ, ಕೃಷಿಯಲ್ಲಿ ಪದವಿ ಪಡೆದಿರುವವರನ್ನು ಮಾತ್ರ ಪ್ರವೇಶ ಮಾಡಬೇಕೆಂದು ಕಳೆದ ಮೂರು ವರ್ಷಗಳಿಂದ ನಾವು ಜಾರಿಗೆ ತಂದಿದ್ದೇವೆ. ಆಗಿನಿಂದ ಎಸ್‌ಎಸ್‌ಎಲ್‌ಸಿ ಮುಗಿಸಿಕೊಂಡು ಹತ್ತು-ಹನ್ನೆರಡು ತಿಂಗಳು ತರಬೇತಿ ಮುಗಿಸಿಕೊಂಡು ಬರುವಂಥವರಿಗೆ ಇವತ್ತು ಪ್ರವೇಶವಿಲ್ಲ. ತಾಲ್ಲೂಕು ಮಟ್ಟದಲ್ಲಿ ನಾಲ್ಕು ಹಂತದಲ್ಲಿದೆ, ಇವರಲ್ಲಿ ಕೊನೆಯ ಹಂತವನ್ನು ನಾವು ಕಡಿಮೆ ಮಾಡಿದ್ದೇವೆ. ಉಳಿದಿರುವ ಮೂರು ಹಂತಗಳನ್ನು ಕೂಡ ಕಡಿಮೆ ಮಾಡುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಎಸ್‌ಎಸ್‌ಎಲ್‌ಸಿ ಪಾಸಾದವರನ್ನು ಪ್ರಮೋಷನ್ ಮಾಡಿ ಎಎಓ ಎಂದು ಮಾಡಿದ್ದಿರಲ್ಲಾ ಇದು ಯಾವ ನ್ಯಾಯ? ಕೊನೇಪಕ್ಷ ಇವರು ಪಿಯುಸಿ ಅಥವಾ ಕೃಷಿ ಪದವಿಯನ್ನು ಪಡೆದಿರುವುದಿಲ್ಲ. ಇಂಥವರಿಗೆ ನೀವು ಪ್ರಮೋಷನ್ ಕೊಟ್ಟು ಎಎಓ ಮಾಡಿದ್ದೀರಿ. ನೀವು ಎಎ ಗಳಿಗೆ ಕೃಷಿ ಪದವೀಧರರನ್ನು ಮಾತ್ರ ನೇಮಕ ಮಾಡಿಕೊಳ್ಳುತ್ತೇವೆಂದು ಹೇಳುತ್ತೀರಿ, ಆದರೆ ಎಎಓಗಳಿಗೆ ಎಸ್‌ಎಸ್‌ಎಲ್‌ಸಿ ಆದವರನ್ನು ಇಟ್ಟಿದ್ದೀರಿ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ, ಎಎಓ ಗಳಾಗಿ ಪ್ರಮೋಟ್ ಆಗಿ ಬಂದಿರುವವರನ್ನು ತೆಗೆದು ಹಾಕಿ ಬಿಡಿ.

ಶ್ರೀ ಸಿ. ಬೈರೇಗೌಡ : ನಿಯಮಾವಳಿಗಳ ಪ್ರಕಾರ ನಾವು ಅವರಿಗೆ ಬಡ್ತಿ ಕೊಡಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಿಯಮಾವಳಿಗಳನ್ನು ನೀವು ಮಾಡಬೇಕು. ಅದು ಮಾಡದೇ ಅವರಿಗೆ ಪ್ರಮೋಷನ್ ಕೊಟ್ಟರೆ ಹೇಗೆ?

ಉಪಾಧ್ಯಕ್ಷರು : ಅವರು ಮಾತನಾಡಲಿ ನಂತರ ನೀವು ಚರ್ಚೆ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ : ಇದರಲ್ಲಿ ತಾವೇನು ಕೃಷಿ ಪೌಂಡೇಷನ್ ಎಂದು ಹೇಳಿಕೊಂಡಿದ್ದೀರಿ ಅದನ್ನು ಮಾಡಿದ್ದೀರಾ?

ಶ್ರೀ ಸಿ. ಬೈರೇಗೌಡ : ಇದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ, ಈಗಾಗಲೇ ಕೆಲಸವನ್ನೂ ಕೂಡ ಪ್ರಾರಂಭಿಸಿದ್ದೇವೆ. ಕೃಷಿ ಫೌಂಡೇಷನ್ ಮಾಡುವ ಉದ್ದೇಶವೇನೆಂದರೆ, ಕೃಷಿಯಲ್ಲಿ ಯಾರಾದರೂ ವಿಶೇಷವಾದಂಥ ಸಾಧನೆಯನ್ನು ಮಾಡಿರುವ ಅಧಿಕಾರಿ ಇರಬಹುದು, ವಿಜ್ಞಾನಿ ಇರಬಹುದು, ರೈತ ಇರಬಹುದು, ಇಂಥವರಿಗೆ ಸನ್ಮಾನ ಮಾಡುವುದಕ್ಕಾಗಿ ಆ ಒಂದು ಕೆಲಸವನ್ನು ಮಾಡುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ ವಿಶ್ವಮಟ್ಟದಲ್ಲಿ ನೋಬೆಲ್ ಪ್ರೈಜ್ ಎಂದೇನು ಇಟ್ಟಿದ್ದಾರೋ, ಅದೇ ರೀತಿಯಲ್ಲಿ ಔಟ್ ಸ್ಟ್ಯಾಂಡಿಂಗ್ ಕಾಂಟ್ರಿಬ್ಯೂಷನ್ ಅನ್ನು ವಿಜ್ಞಾನಿಗಳು, ರೈತರು, ಅಧಿಕಾರಿಗಳು, ಕೃಷಿ ಕ್ಷೇತ್ರದಲ್ಲಿ ನೀಡಿದಂಥವರಿಗೆ ಸನ್ಮಾನ ಮಾಡುವುದಕ್ಕಾಗಿಯೇ ಆ ಫೌಂಡೇಷನ್ ಇರುವುದು. ನಾನೀಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ. ಆ ಕೆಲಸ ಇವತ್ತು ನಡೆಯುತ್ತಿದೆ.

ಶ್ರೀ ಕಾಗೋಡು ತಿಮ್ಮಪ್ಪ : ಒಂದು ಫೌಂಡೇಷನ್ ಸ್ಥಾಪನೆ ಮಾಡಿ. ಅಲ್ಲಿ ಯಾರು ಪರಿಣಿತರಾದ ರೈತರು ಇರುತ್ತಾರೆ ಅವರಿಗೆ ಪ್ರಶಸ್ತಿ ಪ್ರಧಾನ ಮಾಡುತ್ತೀರೆಂದು ಹೇಳಿದ್ದೀರಿ. ಈಗಾಗಲೇ ಅದನ್ನು ಪ್ರಾರಂಭ ಮಾಡಿದ್ದೀರಿ. ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕಾ ಮಟ್ಟದಲ್ಲಿ ಅದಕ್ಕೆ ವಿಶೇಷವಾದ ಪ್ರಾಶಸ್ತ್ಯವನ್ನು ಕೊಡಿ. ಕರ್ನಾಟಕ ರಾಜ್ಯದಲ್ಲಿ ಪ್ರಶಸ್ತಿಯನ್ನು ಮಾಡುತ್ತೀರೆಂದು ಹೇಳಿದಿರಿ, ಅದು ಏನಾಯಿತು ಎಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಆ ಕೆಲಸ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಇವತ್ತು ನಮ್ಮಲ್ಲಿ ಕೃಷಿಕರು ಒಂದೊಂದು ಭಾಗದಲ್ಲಿ ಅಷ್ಟೇ ಸಮೃದ್ಧವಾದ ಬೆಳೆಯನ್ನು ಬೆಳೆಯುತ್ತಾರೆ. ಒಂದೊಂದು ಭಾಗದಲ್ಲಿ ಅಷ್ಟೇ ಪರಿಣಿತರಾದ ರೈತರು ಇದ್ದಾರೆ. ತಾಲ್ಲೂಕಾ ಮಟ್ಟದಲ್ಲಿ ಯಾರು ರೇಷ್ಮೆ ಬೆಳೆಗಾರರಿದ್ದಾರೆ, ಅವರಿಗೆ ಒಂದು ಪ್ರಶಸ್ತಿಯನ್ನು ಕೊಡಿ. ರಾಗಿ ಬೆಳೆಗಾರರು ಯಾರು ಇದ್ದಾರೆ, ಅವರಿಗೆ ಒಂದು ಪ್ರಶಸ್ತಿಯನ್ನು ಕೊಡಿ. ಹತ್ತಿ ಬೆಳೆಗಾರರು, ಅಡಿಕೆ ಬೆಳೆಗಾರರು, ದ್ರಾಕ್ಷಿ ಬೆಳೆಗಾರರು ಯಾರು ಇದ್ದಾರೆ ಅವರಿಗೂ ಒಂದು ಪ್ರಶಸ್ತಿಯನ್ನು ಕೊಡಿ. ಪಶು ಸಂಗೋಪನೆಯನ್ನು ತಾಲ್ಲೂಕಾ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಮಾಡಿದರೆ ಅವರಿಗೂ ಒಂದು ಪ್ರಶಸ್ತಿಯನ್ನು ಕೊಡಿ, ಅಂದರೆ ಎಲ್ಲಾ ವರ್ಗದ ಜನರಿಗೂ ಇದು ಸಿಗಬೇಕು. ಭತ್ತ, ಹತ್ತಿ ಬೆಳೆಯುವರಿಗೆ ಇದು ಆಗಕೂಡದು. ಪಂಚಾಯಿತಿ ಮಟ್ಟದಲ್ಲಿ ತೋಟಗಾರಿಕೆ, ಪಶು ಸಂಗೋಪನೆ, ಕೃಷಿ ಇಲಾಖೆ ಈ ಮೂರು ಪಂಚಭೂತಗಳು ಏನು ಇವೆ, ಸಾಮಾನ್ಯ ಹಂತದಲ್ಲಿ

ಆಗಬೇಕೆಂದು ನಾನು ಹೇಳುತ್ತೇನೆ. ಪ್ರಾಶಸ್ತ್ಯ ಎಲ್ಲಾ ಜನರಿಗೂ ಸಿಗಲಿ ಎನ್ನುವ ಕಾರಣಕ್ಕಾಗಿ ಪಂಚಾಯಿತಿ ಮಟ್ಟದಿಂದ, ತಾಲ್ಲೂಕಾ ಮಟ್ಟಕ್ಕೆ ಮತ್ತು ರಾಜ್ಯಮಟ್ಟದವರಗೆ ಮಾಡಬೇಕು. ಇದಕ್ಕೆ ಹೆಚ್ಚು ಹಣ ಖರ್ಚಾಗುವುದಿಲ್ಲ. ಅವರು ಲಕ್ಷ್ಯಾಂತರ ರೂಪಾಯಿಗಳ ಹಣವನ್ನು ಅಪೇಕ್ಷೆ ಪಡುವುದಿಲ್ಲ. ಒಂದು ತೊಲ ಬಂಗಾರ ಕೊಟ್ಟರೆ ಅವರಿಗೆ ಸಂತೋಷವಾಗುತ್ತದೆ. ಅದನ್ನು ಇಟ್ಟುಕೊಂಡು ನಮ್ಮನ್ನು ಗುರುತಿಸಿದ್ದಾರೆ ಎಂದು ಅವರಿಗೆ ಆತ್ಮವಿಶ್ವಾಸ ಬರುತ್ತದೆ. ಆ ದೃಷ್ಟಿಯಿಂದ ಈ ಕೆಲಸವನ್ನು ಮಾಡಿ ಎಂದು ನಾನು ಹೇಳುತ್ತೇನೆ. ಎಷ್ಟು ದಿವಸದಲ್ಲಿ ಫೌಂಡೇಷನ್ ಮಾಡುತ್ತೀರಿ ಎಂದು ದಯಮಾಡಿ ಹೇಳಿ. ಇವತ್ತು ಮಾಡುತ್ತೇವೆ. ನಾಳೆ ಮಾಡುತ್ತೇವೆ ಎನ್ನುವುದನ್ನು ನೀವು ಬಹಳ ಹೇಳುತ್ತೀರಿ, ಆ ರೀತಿ ಹೇಳಿದರೆ ಇದು ಪ್ರಯೋಜನವಾಗುವುದಿಲ್ಲ. ದಯಮಾಡಿ ತಾವು ಮಾಡಿದ ಮೇಲೆ ಅದನ್ನು ಶಾಶ್ವತವಾಗಿ ಮಾಡಿ ಅದಕ್ಕೆ ಹಣವನ್ನು ಸಂಗ್ರಹ ಮಾಡಿ ಇಡಬೇಕು. ಪಂಚಾಯಿತಿ ಮಟ್ಟದಿಂದ ಎಲ್ಲಾ ಪ್ರಮುಖವಾದ ಬೆಳೆಗಳಿಗೆ ಈ ಪ್ರಶಸ್ತಿಯನ್ನು ಇವತ್ತು ಕೊಡುವ ಕೆಲಸವನ್ನು ತಮ್ಮ ಕೈಯಿಂದ ಮಾಡಿದರೆ ಒಳ್ಳೆಯದು. ಮಾನ್ಯ ಉಪಾಧ್ಯಕ್ಷರೆ, ಮೀನುಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ ಆ ಇಲಾಖೆಯ ಬಗ್ಗೆ ಎರಡು ನಿಮಿಷ ಮಾತನಾಡುತ್ತೇನೆ. ಮೀನುಗಾರಿಕೆ ಎಂದರೆ ಉಡುಪಿ ಮಂಗಳೂರು ಎಂದು ತಿಳಿದುಕೊಂಡಿದ್ದೀರಾ ಅಥವಾ ಕರ್ನಾಟಕ ರಾಜ್ಯದಲ್ಲಿಯೂ ಇವೆ ಎಂದು ತಿಳಿದುಕೊಂಡಿದ್ದೀರಾ. ಇದು ಬದುಕು ಅಲ್ಲ. ಇವತ್ತು ಸಮುದ್ರ ಬಹಳಷ್ಟು ಇದೆ. ಒಳನಾಡು ಮೀನುಗಾರಿಕೆಗೆ ಹೆಚ್ಚು ಕಸರತ್ತು ನೀವು ಇವತ್ತು ಮಾಡಬೇಕಾಗಿದೆ. ನೀವು ಒಬ್ಬ ಮಂತ್ರಿಯಾಗಿ ಮೂರು ವರ್ಷದ ಅವಧಿಯಲ್ಲಿ ಪ್ರತಿ ಜಿಲ್ಲೆಗೆ ಹೋಗಿ ಅಲ್ಲಿಯ ವಸ್ತುಸ್ಥಿತಿಯನ್ನು ತಿಳಿದುಕೊಂಡು, ಅಣೆಕಟ್ಟುಗಳು ಇವೆ, ಕೆರೆಗಳು ಇವೆ, ಹೊಂಡಗಳು ಇವೆ. ಎಲ್ಲಾ ಪ್ರಮಾಣದ ಮೀನುಗಾರಿಕೆ ಜಾಸ್ತಿ ಮಾಡೋಣ. ಇದನ್ನು ನೀವು ಮಾಡದೇ ಹೋದರೆ, ಚರ್ಚೆಯನ್ನು ಇದರ ಬಗ್ಗೆ ಮಾಡದೇಹೋದರೆ, ರೈತರ ಜೊತೆ ನೀವು ಸಂಪರ್ಕ ಮಾಡದೆ ನೀವು ಮೀನುಗಾರಿಕೆ ಹೇಗೆ ಬೆಳೆಸುವುದನ್ನು ಮಾಡುತ್ತೀರಿ ಸ್ವಾಮಿ? ಇವತ್ತು ನೀವು ತಿಳಿದುಕೊಂಡಿದ್ದೀರಾ? ಒಳಗಿರುವ ಮೀನುಗಳಿಗೆ ರೋಗ ಬಂದಿದೆ. ನಾನು 15 ದಿವಸದಿಂದ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೇನೆ ಇನ್ನು ಅದಕ್ಕೆ ಉತ್ತರ ಬಂದಿಲ್ಲ. ನಾವು ಕೆರೆಯಲ್ಲಿ, ಗದ್ದೆಯಲ್ಲಿ ಇರುವ ಮೀನುಗಳನ್ನು ಮುಟ್ಟುವಂತಿಲ್ಲ. ಯಾರಾದರೂ ನೀವು ಆ ಕಡೆ ಗಮನ ಹರಿಸಿದ್ದೀರಾ? ಯಾರು ಗಮನ ಹರಿಸಿಲ್ಲ. ನೀವು ಹೀಗೆ ಬಿಟ್ಟರೆ ಯಾವ ಕೆರೆಯಲ್ಲಿ, ಯಾವ ಹೊಳೆಯಲ್ಲಿ ಮೀನುಗಳೂ ಉಳಿಯುವುದಿಲ್ಲ. ಒಳನಾಡು ಬಂಜರಾಗಿ ಹೋಗುತ್ತದೆ, ಅದು ಮರಳು ಭೂಮಿಯಾಗಿ ಆಗುತ್ತದೆ. ಆದ್ದರಿಂದ ನಿಮ್ಮ ಶ್ರಮ ಮೀನುಗಾರಿಕೆ ದೃಷ್ಟಿಯಿಂದ ತೃಪ್ತಿಕರವಾಗಿ ಆಗಿಲ್ಲವೆಂದು ನಾನು ಹೇಳುತ್ತೇನೆ. ದಯಮಾಡಿ ಈಗಲಾದರೂ ಇರುವ ಅವಕಾಶವನ್ನು ಸಮುಪಯೋಗಪಡಿಸಿಕೊಂಡು ಪ್ರತಿ ಜಿಲ್ಲೆಗೆ ಭೇಟಿಕೊಡಿ. ಕೆಲವು ತಾಲ್ಲೂಕುಗಳಲ್ಲಿ ನೋಡಿ ಇವತ್ತು ಕೋಲಾರದಲ್ಲಿ ಜಾಸ್ತಿ ಕೆರೆಗಳು ಇರಬಹುದು. ಶಿಕಾರಿಪುರದಲ್ಲಿ ಹೆಚ್ಚು ಕೆರೆಗಳು ಇವೆ. ಅಲ್ಲಿ ಎಷ್ಟು ಸಂಪತ್ತು ಇದೆ ಗೊತ್ತಾ? ಅಧಿಕಾರಿಗಳು ಮಾಡಿದ್ದೇ ಮಾಡಿದ್ದು, ಅವರು ಬಿಟ್ಟಿದ್ದೇ ಬಿಟ್ಟಿದ್ದು ಅದು ಹಾಗೆಯೇ ನಡೆದುಕೊಂಡು ಹೋಗುತ್ತಿದೆ ಅದು ಆ ರೀತಿ ಅಲ್ಲ. You must give a new dynamism, a new approach. ಇವತ್ತು ಜನರಿಗೆ ಮೀನು ತಿನ್ನುವುದಕ್ಕೆ ಬೇಕಾಗಿದೆ. ಅಕ್ಕಿ ತಿಂದರೆ

ಆಗುವುದಿಲ್ಲ. ಬೇಳೆ ಬೇಕು, ತೊಗರಿ ಬೇಕು, ಮೀನೂ ಕೂಡ ಬೇಕು. ಆದ್ದರಿಂದ ಮೀನುಗಾರಿಕೆ ಒಂದು ಪ್ರಮುಖವಾದುದು. ಇವತ್ತು ನಮ್ಮಲ್ಲಿ ಎಷ್ಟು ಅಣೆಕಟ್ಟುಗಳು ಇವೆ, ಘಟಪ್ರಭಾ, ಮಲಪ್ರಭಾ ಹಾಗೂ ಇತರ ಅಣೆಕಟ್ಟುಗಳು ಇದ್ದು ಅಲ್ಲಿ ಎಷ್ಟು ಮೀನುಗಳನ್ನು ಬೆಳೆಸಬಹುದು, ಅದನ್ನು ಮಾಡಲಿಲ್ಲ. ಮೀನುಗಾರರಿಗೆ ಮನೆ ಕಟ್ಟಿಕೊಡುತ್ತೇವೆಂದು ಹೇಳಿದಿರಿ ಅದು ಏನಾಯಿತೋ ಏನೋ? ಇನ್ನೂ ಮನೆ ಆಗಲಿಲ್ಲ. ನಮ್ಮ ಪುಣ್ಯಕ್ಕೆ ಕರ್ನಾಟಕದಲ್ಲಿ 300 ಕಿ.ಮೀ ಕರಾವಳಿ ಇದೆ, ಅಲ್ಲಿ ವ್ಯಾಪಕವಾಗಿ ಮೀನುಗಾರಿಕೆ ಮಾಡುತ್ತಾರೆ. ಅಲ್ಲಿ ಮೀನುಗಳು ಸಿಗುತ್ತವೆ, ಅವರು ಬದುಕುತ್ತಿದ್ದಾರೆ. ಸೀಗಡಿ ಮೀನುಗಾರರ ಕಥೆ ಏನಾಯಿತು? ನಿಮ್ಮ ಪ್ರಯತ್ನದಿಂದಲೇ ಗೇಣಿ ಜಮೀನನ್ನು 15 ವರ್ಷಗಳವರೆಗೆ ಮಾರಾಟ ಮಾಡಬಾರದು ಎಂದು ಒಂದು ಶರತ್ತು ಇತ್ತು. ನೀವು ಅದಕ್ಕೆ ತಿದ್ದುಪಡಿಯನ್ನು ದೇವೇಗೌಡರು ಇದ್ದಾಗ ಮಾಡಿದಿರಿ. ಅಂತಹ ಶರತ್ತನ್ನು ಹೊರತು ಪಡಿಸಿ ಮಾರಾಟ ಮಾಡುವುದು ಸೀಗಡಿ ಮೀನು ಮಾಡುವುದಾದರೆ ಮಾತ್ರ. ಈವತ್ತು ಸೀಗಡಿ ಮೀನಿಗೆ ರೋಗ ಬಂದು ಏನಾಗಿದೆ, ಎಲ್ಲಾ ಪ್ರಾಜೆಕ್ಟ್‌ಗಳು ನಿಂತು ಹೋಗಿವೆ.

ಡಾ|| ಎಂ.ಪಿ. ಕರ್ಕಿ : ಅವುಗಳು ಸುಪ್ರೀಂ ಕೋರ್ಟಿನ ಆದೇಶ ಮೂಲಕವಾಗಿ ನಿಂತು ಹೋಗಿವೆ.

ಶ್ರೀ ಕಾಗೋಡು ತಿಮ್ಮಪ್ಪ : ಅಲ್ಲಾ ಪರಿಸರ ಮಾಲಿನ್ಯದ ಮೇಲೆ ನಿಂತಿವೆ. ನೀವು ಅವರಿಗೆ ಆಶೆ ತೋರಿಸಿದಿರಿ. ಭೂಸುಧಾರಣೆ ಕಾನೂನು ತಿದ್ದುಪಡಿ ಮಾಡುತ್ತೀರಿ. ಅನೇಕ ಜನ ಹೇರಳವಾಗಿ ಬಂಡವಾಳವನ್ನು ಹಾಕಿ ಸಮುದ್ರದ ಬದಿಯಲ್ಲಿ ಪಾಂಡ್‌ಗಳನ್ನು ಮಾಡಿರುವುದರಿಂದ ಮೀನುಗಳು ಇವತ್ತು ಅಲ್ಲಿ ನಿಂತಿವೆ. ಸುಪ್ರೀಂ ಕೋರ್ಟಿನಿಂದ ಇವತ್ತು ಇವರಿಗೆ ಈ ಸ್ಥಿತಿ ಆದರೆ, ಇವರಿಗೆ ರಕ್ಷಣೆ ಕೊಡುವವರು ಯಾರು? ಅದನ್ನು ನಿಲ್ಲಿಸುವುದಕ್ಕೆ ಏನು ಕಾರಣ, ಅವರಿಗೆ ನೀವು ಸಧ್ಯದ ವಿದ್ಯಮಾನ ಹೇಳಿದ್ದೀರಾ? ಏನು ಕಾರಣ ಎನ್ನುವುದು ನಮಗೆ ಗೊತ್ತಿಲ್ಲ. ಅವರು ನಿಮ್ಮನ್ನೂ ನಂಬಿಕೊಂಡು ಹಾಳಾಗಿ ಹೋದರು. ಅಂದರೆ ನಮ್ಮ ಎಂ.ಪಿ. ಕರ್ಕಿಯವರ ಜಿಲ್ಲೆಯ ಕರಾವಳಿಯಲ್ಲಿ ಸೀಗಡಿ ಮೀನು ಬೆಳೆಯುತ್ತಿದ್ದರು. ಇವತ್ತು ಎಲ್ಲಾ ನಿಂತು ಹೋಗಿದೆ ಇದಕ್ಕೆ ಕಾರಣ ಏನು? ಜೊತೆಗೆ ಅನೇಕ ಜನ ಪರಿಸರದ ಕಲ್ಮಷದಿಂದ ಹಾಳಾಗುತ್ತಿದೆ ಎಂದು ಕೂಗಾಡುತ್ತಿದ್ದಾರೆ. ನೀವು ಮೀನುಗಾರರ ಪರವಾಗಿ ಇರುವವರೇ ಅಥವಾ ಮಾರುಕಟ್ಟೆಯವರ ಪರವಾಗಿ ಇರುವವರೆ? ಮೀನುಗಾರಿಕೆ ಇಲಾಖೆಯ ಮಂತ್ರಿಗಳಾದ ನೀವು ಮೀನುಗಾರರ ವಸ್ತುಸ್ಥಿತಿ ನೋಡಿಕೊಂಡು ಅವರಿಗೆ ತೊಂದರೆಯಾಗಿದ್ದರೆ ತೊಂದರೆಯಾಗಿದೆ ಎಂದು ಹೇಳುವುದಕ್ಕೆ ನಿಮಗೆ ಏನು ತೊಂದರೆಯಾಗುತ್ತದೆ? ಅವರಿಗೆ ತೊಂದರೆಯಾಗುವುದಿಲ್ಲವೆಂದರೆ ಅವರಿಗೆ ಏನೂ ತೊಂದರೆ ಇಲ್ಲ, ಯಾರು ಇದನ್ನು ಮಾಡುತ್ತಿದ್ದಾರೆಂದು ನೀವು ಹೇಳಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಾವು ರಾಜ್ಯ ಸರ್ಕಾರದಿಂದ ಹಾಕಿದ್ದೇವೆ. ನಾವು ಮೀನುಗಾರರ ಪರವಾಗಿ ಇರುವವರು.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಾದರೆ ಏಕೆ ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಚಳುವಳಿ ನಡೆಯುತ್ತಿದೆ. ವಿಷಪೂರಿತವಾದ ನೀರನ್ನು ಸಮುದ್ರಕ್ಕೆ ಬಿಡುತ್ತಿದ್ದಾರೆ, ಇದರಿಂದ ಮೀನುಗಳು ಸಾಯುತ್ತಿವೆ. ಇದರಿಂದ ಮೀನುಗಾರರಿಗೆ ಹೊಡೆತ ಬೀಳುತ್ತದೆ, ಎನ್ನುವ ವಾದ ನಡೆಯುತ್ತಿದೆ. ಅದರ ಬಗ್ಗೆ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ಇದು ನಡೆಯುತ್ತಿದೆ, ಅದು ನಿಜವಾಗಿದ್ದರೆ ಮೀನುಗಾರರ ಪರವಾಗಿ ಇರಬಹುದೆಂದು ಹೇಳಬಹುದು, ಇಲ್ಲವೆಂದರೆ ಮಂತ್ರಿಗಳಾದ ನೀವು ಇವತ್ತು ಮೀನುಗಾರರ ಪರವಾಗಿ ನಾಯಕತ್ವ ವಹಿಸಬೇಕಾಗುತ್ತದೆ. ಈ ವಾದದಲ್ಲಿ ಹುರುಳಿಲ್ಲವೆಂದರೆ ತಾವು ಹುರುಳಿಲ್ಲವೆಂದು ಹೇಳಬೇಕು. ನೀವು ರಾಜ್ಯದ ಜನತೆಗೆ ವಿಷಯವನ್ನು ತಿಳಿಸಬೇಕು. ಮೀನುಗಾರಿಕೆ ಸಚಿವರಾದ ನೀವು ಅದೇ ಜಿಲ್ಲೆಯವರಾದ ನೀವು ಮೀನುಗಾರರಿಗೆ ಹೆಚ್ಚಿನ ಬೆಂಬಲ ಕೊಡಬೇಕು. ನಿಮಗೆ ಇವತ್ತು ಅದರ ಬಗ್ಗೆ ಸಂಪೂರ್ಣ ಅನುಭವ ಇದ್ದು ನಿಮ್ಮನ್ನು ನಾವು ಹೆಚ್ಚು ನಿರೀಕ್ಷೆ ಮಾಡುತ್ತಿದ್ದೇವೆ. ಅದರಲ್ಲಿ ಬೆಳವಣಿಗೆ ಆಗಬೇಕು. ಆದ್ದರಿಂದ ಇವತ್ತು ಆ ಎರಡು ಜಿಲ್ಲೆಯ ಮೀನುಗಾರರ ಕ್ಷೇತ್ರದ ದೃಷ್ಟಿಯಿಂದಲೂ ಕೂಡ ನಿರೀಕ್ಷೆ ಮಟ್ಟದಲ್ಲಿ ಕೆಲಸ ಮಾಡದೇ ಹೋದರೆ ಇನ್ನು ನೀವು ಒಳನಾಡು ಮೀನುಗಾರಿಕೆ ಬಗ್ಗೆ ಏನು ಕೆಲಸ ಮಾಡುತ್ತಿದ್ದೀರಿ ಎಂದು ನನಗೆ ಅನುಮಾನ ಬರುತ್ತಿದೆ. ಇವತ್ತು ಕಬಿನಿಯಲ್ಲಿ ಹೋಗಿ ನೋಡಿಕೊಂಡು ಬನ್ನಿ ಅಲ್ಲಿ ಎಷ್ಟು ಚೆನ್ನಾಗಿ ಮೀನು ಬೆಳೆಯುತ್ತಿದ್ದಾರೆ. ಆದ್ದರಿಂದ ಒಳನಾಡು ಮೀನುಗಾರಿಕೆ ಬಗ್ಗೆ ನೀವು ಶ್ರದ್ಧೆವಹಿಸಬೇಕಾಗುತ್ತದೆ. ಇವತ್ತು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿದೆ. ಇದರ ಬಗ್ಗೆ ತರಬೇತಿ ಕೊಟ್ಟರೆ, ಸಣ್ಣಪುಟ್ಟ ಜನರು ಮೀನುಗಳನ್ನು ಹಿಡಿದುಕೊಂಡು ಬದುಕುತ್ತಾರೆ. ಆದ್ದರಿಂದ ಪಂಚಾಯಿತಿಗೆ ಕೆರೆಗಳನ್ನು ಕೊಡಿ, ಪಂಚಾಯಿತಿಯವರು ಮಾಡಿಕೊಳ್ಳುತ್ತಾರೆ, ತರಬೇತಿ ಪಡೆದಿದ್ದರೆ ಅಂತಹವರಿಗೆ ಕೊಡಿ, ಯಾರೋ ಗುತ್ತಿಗೆದಾರರಿಗೆ ಕೊಟ್ಟು ಹಾಳು ಮಾಡುವುದಕ್ಕೆ ಹೋದರೆ ತೊಂದರೆಯಾಗುತ್ತದೆ. ಮೀನುಗಾರಿಕೆ ಕ್ಷೇತ್ರವನ್ನು ವಿಸ್ತರಿಸಬೇಕು ಮತ್ತು ಆದಷ್ಟು ಸಮೃದ್ಧಪಡಿಸಬೇಕು. ಆ ಬಗ್ಗೆ ತಾವು ಕಳಕಳಿಯ ಪ್ರಯತ್ನ ಮಾಡಬೇಕೆನ್ನುವ ಮಾತನ್ನು ಹೇಳುತ್ತೇನೆ.

5.00 ಪಿ.ಎಂ

ಇನ್ನು ಈ ತಾಂತ್ರಿಕತೆಯ ಬಗ್ಗೆ ಈಗಾಗಲೇ ಚಂದ್ರಕಾಂತ ಬೆಲ್ಲದ್‌ರವರು ಚೆನ್ನಾಗಿ ಹೇಳಿದ್ದಾರೆ. ಈಗ ಏನಾಗಿದೆ ಎಂದರೆ ಬೀಜಗಳನ್ನು ಸರಿಯಾಗಿ ಕೊಡತಕ್ಕಂತಹ ಕೆಲಸ ಮಾಡಬೇಕು. ಬಹಳ ಜನ ಖಾಸಗಿಯವರು ಬೀಜಗಳನ್ನು ಕೊಡುವುದರಿಂದ ಬಹಳ ಜನ ರೈತರು ತೊಂದರೆಗೆ ಒಳಗಾಗಿದ್ದಾರೆ. ಏಕೆಂದರೆ ಆ ಸಮಯದಲ್ಲಿ ಬೀಜಗಳು ಸಿಗುವುದಿಲ್ಲ, ಯಾರೋ ಕೊಡುತ್ತಾರೆ. ಅವರು ತೆಗೆದುಕೊಂಡು ಹಂಚಿಬಿಡುತ್ತಾರೆ. ಬೀಜಗಳ ನಿಯಂತ್ರಣ ಮಾಡತಕ್ಕಂತಹ ಕೆಲಸವನ್ನ ಇಂದು ನೀವು ಮಾಡಬೇಕಾಗಿದೆ. ನಿಮ್ಮ ಅಧಿಕಾರಿಗಳು ಸಾಕಷ್ಟು ಶ್ರಮವನ್ನು ವಹಿಸಲಿಲ್ಲ. ಇವತ್ತು ನಾವು ಬೀದರ್, ಗುಲ್ಬರ್ಗಕ್ಕೆ ನಾವು ಓಡಾಡಿ ಬಂದಿದ್ದೇವೆ. ಮೊನ್ನೆ ತೊಗರಿಬೆಳೆಗೆ ಹೇರಳವಾಗಿ ಹುಳ ಬಿದ್ದು ಹಾಳಾಗಿ ನಮ್ಮ ಅಧಿಕಾರಿಗಳು ಲಕ್ಷ್ಯ ವಹಿಸಿ ಸಕಾಲದಲ್ಲಿ ಕೆಲಸ ಮಾಡಿದ್ದರೆ ಅರ್ಧ ಬೆಳೆಯನ್ನು ನಾವು ಉಳಿಸಿಕೊಳ್ಳಬಹುದಿತ್ತು. ಅವರಿಗೆ ಮುನ್ಸೂಚನೆ ಗೊತ್ತಾಗಿತ್ತು. ಒಂದು ಸಣ್ಣ ಪ್ರಕಟಣೆಯನ್ನು ನಾನು ಹೇಳುತ್ತೇನೆ. ಅವರು

ಒಂದು ಹ್ಯಾಂಡ್‌ಬಿಲ್ಲನ್ನು ಡಿಸೆಂಬರ್ ತಿಂಗಳಲ್ಲಿ ಹಂಚಿದ್ದಾರೆ. ಒಂದು ತಿಂಗಳಿಗೆ ಆಗುವಷ್ಟು ಹ್ಯಾಂಡ್‌ಬಿಲ್ಲನ್ನು ಒಂದೇ ದಿವಸದಲ್ಲಿ ಅಚ್ಚು ಮಾಡಿಸಿದ್ದಾರೆ. ಅದು ಈವಾರದ್ದು, ಮುಂದಿನ ವಾರದ್ದು ಎಂದು ಅವರು ಎಷ್ಟರಮಟ್ಟಿಗೆ ಶ್ರದ್ಧೆ ವಹಿಸಿ ಮಾಡಿದ್ದಾರೆ. ಇದೆಲ್ಲಾ ಆದ ಮೇಲೆ ಬಚಾವಣೆ ಆಗುವುದಕ್ಕೆ ಅದನ್ನು ಮಾಡಿರಬೇಕು. ನಾನು ಈಗಾಗಲೇ ಮಂತ್ರಿಗಳಿಗೆ ಹೇಳಿದೆ, ರೋಗ ಬಂದಾಗ ನಿಮ್ಮ ಕೃಷಿ ಸಹಾಯಕರು ಗ್ರಾಮದಲ್ಲಿ ಇದ್ದಿದ್ದರೆ ತಕ್ಷಣ ರೋಗ ತಡೆಯುವುದಕ್ಕೆ ಏನು ಕ್ರಮ ತೆಗೆದೆಕೊಳ್ಳಬೇಕೆಂಬುದನ್ನು ಹೇಳುತ್ತಿದ್ದರು. ಇವರು ಇಲ್ಲದೆ ಇದ್ದರಿಂದ ರೈತರಿಗೆ ರೋಗದ ಬಗ್ಗೆ ಸರಿಯಾದ ತಿಳುವಳಿಕೆ ಬರಲಿಲ್ಲ. ಈ ಮಧ್ಯೆ ಕಾಲ ಮಿಂಚಿಹೋಯಿತು, ರೋಗ ಹೆಚ್ಚಾಯಿತು ಇದನ್ನು ನಿಯಂತ್ರಿಸಲು ಏನೂ ಮಾಡುವುದಕ್ಕೆ ಆಗಲಿಲ್ಲ. ಇದರ ಜೊತೆಗೆ ಇತ್ತೀಚೆಗೆ ಕಲಬೆರೆಕೆ ಔಷಧಿಗಳು ಬಂದು ಅವನ್ನು ಉಪಯೋಗಿಸಿದ್ದರಿಂದ ಬೆಳೆ ಸರ್ವನಾಶವೇ ಆಗಿದೆ. ಇವೆಲ್ಲವೂ ಆ ಗ್ರಾಮಗಳಲ್ಲಿ ಕೃಷಿ ಸಹಾಯಕರು ಇಲ್ಲದೇ ಇರುವುದರಿಂದ ಇಂತಹ ಘಟನೆಗಳು ನಡೆದಿವೆ. ನಾವು ಹೋದ ಕಡೆಯಲೆಲ್ಲಾ ರೈತರುಗಳು ಕೃಷಿ ಸಹಾಯಕರು ಇಲ್ಲದೇ ಇರುವ ಬಗ್ಗೆ, ಸರಿಯಾದ ಮಾಹಿತಿಗಳು ಸಿಗದೆ ಇರುವ ಬಗ್ಗೆ ಹೇಳಿದರು. ಆದ್ದರಿಂದಲೇ ನಾನು ಹೇಳುವುದೇನೆಂದರೆ, ವಿಸ್ತರಣೆಯ ಕೆಲಸ ಸರಿಯಾಗಿ ಆಗಬೇಕು. ತಾಂತ್ರಿಕತೆ ಸರಿಯಾದ ರೀತಿಯಲ್ಲಿ ಇರಬೇಕು, ಅದರಲ್ಲೂ ಬೀಜ ಒಳ್ಳೆಯದಾಗಿರಬೇಕು. ಏಕೆಂದರೆ ಒಳ್ಳೆಯ ಬೀಜ ಹಾಕಿದರೆ ಶೇಕಡ 5 ರಿಂದ 10 ರಷ್ಟು ಹೆಚ್ಚು ಉತ್ಪಾದನೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದಲೇ ನಾವು ರೈತರಿಗೆ ಒಳ್ಳೆಯ ಬೀಜವನ್ನು ಹಾಕಿ ಎಂದು ತಿಳಿ ಹೇಳಬೇಕು. ಅದರಂತೆ ಹಾಕಿಸಬೇಕು. ಆ ಮೇಲೆ ಏನಾಗುತ್ತದೆ ಎಂದರೆ ಮಂಡ್ಯದಲ್ಲಿ ಮಾಡಿರುವ ಫೌಂಡೇಷನ್ ಸೀಡ್ಸ್ ಮೇಲೆ, ನಮ್ಮ ಮಲೆನಾಡಿನ ಶಿವಮೊಗ್ಗದ್ದು ಹಾಕುವುದು, ಅಥವಾ ಕಾರವಾರಕ್ಕೂ, ಮಂಗಳೂರಿಗೂ ಹಾಕುವುದು. ಈ ರೀತಿ ಹಾಕಿದರೆ ಸರಿಯಾಗುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ ಅದೇ ಫೌಂಡೇಷನ್‌ನಲ್ಲಿ ತಯಾರಿಸಿದ ಬೀಜವನ್ನೇ ಉಪಯೋಗಿಸಬೇಕು. ಆ ಬೀಜವನ್ನು ಅಲ್ಲಿಯ ರೈತರಿಗೆ ಕೊಡಬೇಕು. ಮಲೆನಾಡಿನ ಪ್ರದೇಶಕ್ಕೆ ಬೇಕಾಗಿರುವಂತಹ ಬೀಜವನ್ನು ಅಲ್ಲಿಯೇ ಮಾಡಬೇಕು. ಏಕೆಂದರೆ ಮಣ್ಣು ಎಲ್ಲಾ ಕಡೆ ಒಂದೇ ಗುಣಮಟ್ಟದ್ದು ಇರುವುದಿಲ್ಲ. ಆಯಾಯ ಮಣ್ಣಿಗೆ ಹೊಂದಿಕೊಳ್ಳುವಂತೆ ಬೀಜವನ್ನ ಸಂಶೋಧನೆ ಮಾಡಿ ಕಂಡು ಹಿಡಿಯಬೇಕು. ಈ ಕೆಲಸ ಮಾಡಿ ಆ ಪ್ರದೇಶಕ್ಕೆ ಬೇಕಾದಂತಹ ಬೀಜವನ್ನು ಕೊಡಬೇಕು. ನಮ್ಮ ತೋಟಗಾರಿಕಾ ಸಚಿವರಿಗೂ ಕೂಡ ಇದನ್ನೇ ನಾನು ಹೇಳುವುದು. ಇಂದು ಮಾವಿನ ಗಿಡ ನಮಗೆ ಬೇಕೆಂದರೆ ಅದನ್ನ ಕೋಲಾರದಿಂದಲೇ ತೆಗದುಕೊಂಡು ಹೋಗಬೇಕಾದ ಸ್ಥಿತಿ ಇದೆ. ಏಕೆಂದರೆ ಬೆಂಗಳೂರಿನಿಂದ ತೆಗೆದುಕೊಂಡು ಹೋದಂತಹ ಮಾವಿನಗಿಡ ಹಣ್ಣನ್ನು ಅಲ್ಲಿ ಕೊಡುವುದಿಲ್ಲ. ಆದುದರಿಂದ ಮಕ್ಕಳಿಗೆ ಬೇಕಾದಂತಹ ಹಣ್ಣು ಪಡೆಯಲು ಅದನ್ನು ಪಡೆಯಲು ಬೇಕಾದಂತಹ ಗಿಡವನ್ನು ಅಲ್ಲಿಯೇ ತಯಾರು ಮಾಡಿಕೊಡಬೇಕು. ಅದೇ ರೀತಿ ಅಲ್ಲೇ ತೆಂಗಿನಗಿಡಗಳನ್ನು ಬೆಳೆಸಿ ಅಲ್ಲಿಯೇ ಕೊಡಿ. ನಮಗೆ ಬೆಂಗಳೂರಿನಿಂದ ಇಂತಹ ಗಿಡಗಳನ್ನು ಕೊಡಿಸಬೇಡಿ. ಆದುದರಿಂದ ಪ್ರತಿ ಜಿಲ್ಲೆಯಲ್ಲಿ ಅಲ್ಲಿಯ ಮಣ್ಣಿಗೆ ಹೊಂದಿಕೊಳ್ಳತಕ್ಕಂತಹ, ಹವಾಗುಣಕ್ಕೆ ಹೊಂದಿಕೊಳ್ಳತಕ್ಕಂತಹ ಗಿಡಗಳನ್ನು ಅಲ್ಲಿಯೇ ಬೆಳೆಸಿ ಆ ಗಿಡಗಳನ್ನು ಮತ್ತು ಬೀಜಗಳನ್ನು ಅಲ್ಲಿಯ ರೈತರಿಗೆ ಕೊಡತಕ್ಕಂತಹ ಕೆಲಸವನ್ನು ನೀವು ಮಾಡಿದ್ದೇ ಆದರೇ ಕೃಷಿ ಕ್ಷೇತ್ರದಲ್ಲಿ ಶೇಕಡ 5 ರಿಂದ

10ರಷ್ಟು ಹೆಚ್ಚಿನ ಉತ್ಪಾದನೆ ಆಗಲು ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಈ ವಿಸ್ತರಣೆಯ ಕೆಲಸವನ್ನು ಅವಶ್ಯಕವಾಗಿ ಮಾಡಿ. ಇನ್ನು ಈಗಾಗಲೇ ಚಂದ್ರಕಾಂತ್ ಬೆಲ್ಲದ್‌ರವರು ಹೇಳಿದ ಹಾಗೆ ಸಂಶೋಧನೆಯ ಕೆಲಸಕ್ಕೆ ಬಹಳ ಕಡಿಮೆ ಪ್ರಮಾಣದ ಹಣವನ್ನು ಕೊಟ್ಟಿದ್ದಾರೆ. ಈ ಸಂಶೋಧನೆ ಕಾರ್ಯಕ್ಕೆ ನಮ್ಮ ಸಿದ್ದರಾಮಯ್ಯನವರು ಪ್ರತಿ ವರ್ಷ ಹಣವನ್ನು ಕಡಿಮೆ ಮಾಡುತ್ತಿದ್ದಾರೆಯೇ ವಿನಃ ಜಾಸ್ತಿ ಮಾಡುತ್ತಿಲ್ಲ. ಇಂದು ನಾವು ಸಾಯಿಲ್ ಟೆಸ್ಟಿಂಗ್ ಮಾಡಿಸಬೇಕಾದರೆ ನಾವು ಎಲ್ಲಿಗೆ ಹೋಗಬೇಕು. ಕಡೆಯ ಪಕ್ಷ ಒಂದು ತಾಲ್ಲೂಕಿಗೆ ಒಂದು ಮಣ್ಣಿನ ಪರೀಕ್ಷಾ ಕೇಂದ್ರ ಮಾಡುವುದಕ್ಕೆ ನಿಮಗೆ ಏನು ತೊಂದರೆ?

ಶ್ರೀ ಸಿ. ಬೈರೇಗೌಡ : ತಾಲ್ಲೂಕಿಗೆ ಒಂದು ಮಣ್ಣಿನ ಪರೀಕ್ಷಾ ಕೇಂದ್ರವನ್ನು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಹಾಗೆ ಮಾಡುವುದಕ್ಕೆ ಆಗದಿದ್ದರೆ, ಜಿಲ್ಲೆಗೆ ಒಂದಾದರೂ ಮಣ್ಣಿನ ಪರೀಕ್ಷಾ ಕೇಂದ್ರವನ್ನು ಮಾಡಿ. ಆದರೆ ಇಂದು ಜಿಲ್ಲೆಗೆ ಒಂದರಂತೆ ಕೂಡ ಮಾಡಿಲ್ಲ. ಆದರೆ ಇಂದು ಸಂಶೋಧನೆಗಾಗಿ ಆ ಹಣವನ್ನು ತುಂಬಾ ಕಡಿಮೆ ಕೊಡುತ್ತಿದ್ದಾರೆ. ಅದಕ್ಕೆ ಕಾರಣ ಅವರ ಪ್ರಕಾರ ಈ ಕ್ಷೇತ್ರ ಪ್ರಯಾರಿಟಿ ಸೆಕ್ಟರ್‌ನಲ್ಲಿ ಇಲ್ಲ ಎಂಬುದೇ ಆಗಿದೆ.

ಶ್ರೀ ಸಿ. ಬೈರೇಗೌಡ : ಕೇವಲ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ. ಇಡೀ ದೇಶದಲ್ಲಿಯೇ ಕೃಷಿ ಸಂಶೋಧನೆಗೆ ಕಡಿಮೆ ಹಣವನ್ನು ಕೊಡುತ್ತಿದ್ದಾರೆ. ಆದರೆ ಪ್ರಥಮ ಆದ್ಯತೆ ನಮ್ಮ ದೇಶದಲ್ಲಿ ಕೃಷಿ ಕ್ಷೇತ್ರಕ್ಕೆ ಇರಬೇಕಾಗಿತ್ತು. ಇದರ ಬಗ್ಗೆ ನಾನು ಉತ್ತರ ಕೊಡುವಾಗ ವಿವರವಾಗಿ ಹೇಳುತ್ತೇನೆ. ಹಣವನ್ನು ಕೊಡುತ್ತಿರುವುದರಲ್ಲಿ ಕೃಷಿ ಕ್ಷೇತ್ರ ಸಂಶೋಧನೆ ಇಡೀ ರಾಷ್ಟ್ರ ಮಟ್ಟದಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಇದು ರಾಜ್ಯದಲ್ಲೇ ಅಲ್ಲ ಇಡೀ ರಾಷ್ಟ್ರದಲ್ಲಿ ಈ ಪರಿಸ್ಥಿತಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಕೃಷಿ ನೀತಿಯನ್ನು ಹೊರಡಿಸಿದ ಮೇಲೆ ಇದನ್ನು ಸಿದ್ದರಾಮಯ್ಯನವರ ತಲೆಯ ಮೇಲೆ ಹಾಕಿ ನನಗೆ 25 ಕೋಟಿ ರೂಗಳನ್ನು ಜಾಸ್ತಿ ಕೊಡಬೇಕೆಂದು ಹೇಳಿ. ಅವರ ತಲೆಗೆ ಈಗ ಮದ್ದನ್ನು ಅರಿಯಬೇಕು. ನೀವು 25 ಕೋಟಿ ರೂಗಳನ್ನು ಹೊಂದಿಸಿಕೊಡಿ ನಮಗೆ ಆಗುವುದಿಲ್ಲ. ಕೃಷಿ ನೀತಿಯನ್ನು ನೀವು ಒಪ್ಪಿಕೊಂಡಿದ್ದೀರಿ. ಇದರ ಪ್ರಕಾರ ಪ್ರತಿ ವರ್ಷ ಕನಿಷ್ಠ 10 ಕೋಟಿ ರೂಗಳನ್ನು ಜಾಸ್ತಿ ಕೊಡಬೇಕಾಗುತ್ತದೆ ಎಂದು ಕೇಳಿ. ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ಕೇವಲ ಎರಡು ಕೃಷಿ ವಿಶ್ವವಿದ್ಯಾನಿಲಯಗಳು ಮಾತ್ರ ಇದೆ. ಆದರೆ ಬೇರೆ ರೀತಿಯ ವಿಶ್ವವಿದ್ಯಾಲಯಗಳು ಹೆಚ್ಚಾಗಿ ಕೇವಲ ನಿರುದ್ಯೋಗಿಗಳ ಕಾರ್ಖಾನೆಯನ್ನು ಮಾಡುತ್ತಿವೆ. ಹೀಗಿರುವಾಗ ಇದರ ಬದಲು ನಮ್ಮ ಕೃಷಿ ವಿಶ್ವವಿದ್ಯಾನಿಲಯವನ್ನೇ ಗುಲ್ಬರ್ಗಾ, ಧಾರವಾಡ, ಮೈಸೂರು ಮತ್ತು ಪ್ರತಿ ಜಿಲ್ಲೆಯಲ್ಲೂ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ನೀವು ಬೇಕಾದರೆ ತೋಟಗಾರಿಕೆಗೆ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿ, ಪಶುಸಂಗೋಪನೆಗೆ ಒಂದು ವಿಶ್ವವಿದ್ಯಾನಿಲಯವನ್ನು ಮಾಡಿ. ಏಕೆಂದರೆ ಈ ಕೃಷಿ ಕ್ಷೇತ್ರವೇ ನಮಗೆ ಫಲಕೊಡತಕ್ಕಂಥದ್ದು. ಆದದುರಿಂದ ಇದಕ್ಕೆ ಸಂಬಂಧಪಟ್ಟಂತೆ ಪದವಿಯನ್ನು ಪಡೆದು ಹೆಚ್ಚಿನ ಜ್ಞಾನ ಪಡೆದು ಇವರುಗಳು ಕೃಷಿ ಕ್ಷೇತ್ರದಲ್ಲಿ ಚೆನ್ನಾಗಿ ಕೆಲಸ ಮಾಡಿದರೆ ಒಳ್ಳೆಯ ಬೆಳೆಯೂ ಬರುತ್ತದೆ ತನ್ಮೂಲಕ ಉದ್ಯೋಗವು

ದೊರೆತಂತಾಗುತ್ತದೆ. ಆದರೆ ಪ್ರಸ್ತುತ ಇರುವ ಕಾಲೇಜುಗಳ ಮುಖಾಂತರ ಇಂತಹ ತರಬೇತಿ ಜನರಿಗೆ ಸಿಕ್ಕುವುದಿಲ್ಲವಾದ ಕಾರಣ ಮಣ್ಣಿನ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಕೃಷಿ ಕ್ಷೇತ್ರವು ಅಭಿವೃದ್ಧಿಯಾಗುವುದಿಲ್ಲ. ಇಂತಹಃ ಸಾಮಾನ್ಯ ಪದವಿಯನ್ನು ಪಡೆದ ವಿದ್ಯಾರ್ಥಿಗಳು ಇನ್ನು ಮುಂದಕ್ಕೆ ಕೆಸರನ್ನು ಕಂಡರೆ ಮತ್ತು ಸಗಣಿಯನ್ನು ಕಂಡರೆ ಹೇಸಿಗೆಯನ್ನು ಪಟ್ಟುಕೊಂಡು ಓಡಿಹೋಗುವ ಪರಿಸ್ಥಿತಿ ಬರುತ್ತದೆ. ಈಗ ಏನು ಇವರು ಕೃಷಿ ಸಹಾಯಕರಿಗೆ ಪದವಿಯನ್ನು ಫಿಕ್ಸ್ ಮಾಡಿದ್ದಾರೆ, ಆ ಕೃಷಿ ಸಹಾಯಕರಿಗೆ ಈ ಸಗಣಿ ಮತ್ತು ಕೆಸರನ್ನು ಮುಟ್ಟಿರುವ ಅನುಭವವೇ ಇರುವುದಿಲ್ಲ. ಆದುದರಿಂದ ನೀವು ಕೃಷಿ ಕಾಲೇಜುಗಳನ್ನು ಹೆಚ್ಚು ಮಾಡಿ. ಶಿವಮೊಗ್ಗದ ಕೃಷಿ ಕಾಲೇಜನ್ನು ಇನ್ನೂ ಮಾಡಿಲ್ಲ. ಅದು ಹಾಗೆಯೇ ಅರ್ಧಕ್ಕೆ ನಿಂತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲೀ ಗಮನವೇ ಕೊಡುವುದಿಲ್ಲ. ತಾಳೆ ಬೆಳೆಯನ್ನು ಈಗ ರೈತರುಗಳು ಬೆಳೆದಿದ್ದಾರೆ. ನೀವು ಅವರಿಗೆ ಸರಿಯಾದ ಕೃಷಿ ಜ್ಞಾನವನ್ನು ಕೊಟ್ಟಿಲ್ಲ. ನೀವು ರೈತರುಗಳಿಗೆ ಒಂದಿಷ್ಟು ವಿಷವನ್ನು ಕೊಟ್ಟುಬಿಡಿ. ಬೆಳೆದ ತಾಳೆಯನ್ನೆ ಕಿತ್ತುತ್ತಿದ್ದಾರೆ. ಆ ರೈತರುಗಳಿಗೆ ಪರಿಹಾರವನ್ನಾದರೂ ಕೊಡಿ. ಭದ್ರಾವತಿಯಲ್ಲಿ ತಾಳೆ ಸಂಶೋಧನೆ ಮಾಡುವುದಕ್ಕೆ ಕೊಟ್ಟ ಭೂಮಿಯಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ಇದು ಯಾವ ರೀತಿಯ ಲೆಕ್ಕ? ಇದು ಸರಿಯಲ್ಲ. ಆದುದರಿಂದ ನಾನು ಉಪಾಧ್ಯಕ್ಷರ ಮುಖಾಂತರ ಪ್ರಾರ್ಥಿಸುವುದೇನೆಂದರೆ ಈ ರೈತರುಗಳನ್ನು ನರಕಯಾತನೆಯಿಂದ ರಕ್ಷಿಸಬೇಕು. ಇಷ್ಟು ಮಾತುಗಳನ್ನು ಹೇಳಿ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಬೇರೆ ವಿಷಯಗಳನ್ನೆಲ್ಲಾ ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದಾರೆ. ಚಂದ್ರಕಾಂತ ಬೆಲದ್‌ರವರೂ ಕೂಡ ಮಾತನಾಡಿದ್ದಾರೆ. ಇವತ್ತು ಕೃಷಿ ನೀತಿಯ ಬಗ್ಗೆ ಕಾಗೋಡು ತಿಮ್ಮಪ್ಪನವರು ಬಹಳಷ್ಟು ಪ್ರಸ್ತಾಪ ಮಾಡಿದ್ದಾರೆ. ಆದರೆ ಕೃಷಿ ನೀತಿ ಎನ್ನತಕ್ಕದ್ದು ಸ್ವಾತಂತ್ರ್ಯ ನಂತರ 50 ವರ್ಷಗಳಲ್ಲಿ ಭಾರತ ದೇಶದಲ್ಲಿ ಇದುವರೆಗೂ ರಾಷ್ಟ್ರಮಟ್ಟದಲ್ಲಿ ಕೃಷಿ ನೀತಿ ಬರಲೇ ಇಲ್ಲ. ಇಂತಹ ಸಂದರ್ಭದಲ್ಲಿ ರಾಜ್ಯ ಒಂದು ಕೃಷಿ ನೀತಿಯನ್ನು ತಂದರೆ ಅದನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕೆ ಖಂಡಿತಾ ಸಾಧ್ಯವಿಲ್ಲ. ಅದರದೇ ಆದಂತಹ ಇತಿಮಿತಿಗಳು ಇರುತ್ತವೆ. ಕೃಷಿ ಎನ್ನತಕ್ಕದ್ದು ದೇಶದ ಒಂದು ಅವಿಭಾಜ್ಯ ಅಂಗ ಅದು. ಹಾಗಾಗಿ ರಾಜ್ಯ ಪ್ರತ್ಯೇಕವಾಗಿ ಹೊಸ ಕೃಷಿ ನೀತಿಯನ್ನು ತರತಕ್ಕ ಪ್ರಯತ್ನ ಮಾಡಿ ತಂದರೂ ಕೂಡ ಅದು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಬೈರೇಗೌಡರಿಗೆ ಇಷ್ಟು ಹೊತ್ತಿಗೆ ಇದು ಅರ್ಥವಾಗಿರುತ್ತದೆ. ವರ್ಲ್ಡ್ ಟ್ರೇಡ್ ಆರ್ಗನೈಸೇಷನ್ ವಿಶ್ವ ವ್ಯಾಪಾರ ಒಪ್ಪಂದ ಆದ ಮೇಲೆ ಗ್ಯಾಟ್ ಅಗ್ರಿಮೆಂಟ್ ಆದಮೇಲೆ ಕೃಷಿ ಬರೀ ಕರ್ನಾಟಕ ರಾಜ್ಯದ ವಸ್ತುವಾಗಿ ಅದು ಉಳಿದಿಲ್ಲವೆನ್ನುವುದನ್ನು ದಯವಿಟ್ಟು ತಿಳಿದುಕೊಳ್ಳಬೇಕು. ಸರ್ಕಾರ ಇದನ್ನು ತಿಳಿಯಬೇಕಾಗಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ರೈತ ಏನು ಬೆಳೆಯಬೇಕು ಎನ್ನತಕ್ಕ ತೀರ್ಮಾನ ಮಾಡತಕ್ಕ ಹಕ್ಕು ಕರ್ನಾಟಕ ಸರ್ಕಾರಕ್ಕೆ ಇಲ್ಲ. ಈ ರಾಜ್ಯದಲ್ಲಿ ಅಥವಾ ಭಾರತ ದೇಶದಲ್ಲಿ ಯಾವ ಬೆಳೆ ಬೆಳಯಬೇಕು, ಯಾವ ಬೀಜ ಉಪಯೋಗಿಸಬೇಕು, ಯಾವ ಔಷಧಿ ಉಪಯೋಗಿಸಬೇಕು ಎನ್ನತಕ್ಕದ್ದನ್ನು ತೀರ್ಮಾನ ಮಾಡತಕ್ಕದ್ದು ವಿಶ್ವ ವಾಣಿಜ್ಯ ಸಂಸ್ಥೆ. ಅದನ್ನು ಮೀರಿ ಹೋಗಿಲಿಕ್ಕೆ ಸಾಧ್ಯವಿಲ್ಲ ಇವರ

ಕೈಯಲ್ಲಿ. ಭಾರತ ಸರ್ಕಾರ ಇದಕ್ಕೆ ಸಹಿ ಹಾಕಿದೆ. ಅದರ ಪರಿಣಾಮ ಏನಾಗಿದೆ ಇವತ್ತು ಅಂದರೆ ಕೃಷಿ ಕ್ಷೇತ್ರದಲ್ಲಿ ಬಹು ರಾಷ್ಟ್ರೀಯ ಸಂಸ್ಥೆಗಳು ಪ್ರವೇಶ ಮಾಡಿ ಇಡೀ ಕೃಷಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಮುಂದುವರಿದ ದೇಶಗಳ ಅವಶ್ಯಕತೆಗನುಗುಣವಾಗಿ ಭಾರತದೇಶ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದಕ್ಕೆ ಇವತ್ತು ನಿರಂತರವಾಗಿ ಪ್ರಯತ್ನ ನಡೆಯುತ್ತಿದೆ. ಇದು ಕಾನೂನು ಬದ್ಧವಾಗಿ ನಡೆಯುತ್ತಿದೆ. ಇದೇ ಬರತಕ್ಕ ಮೇ 18ನೇ ತಾರೀಖು ಮಾನ್ಯ ಬೈರೇಗೌಡರಿಗೆ ನೆನಪು ಮಾಡುತ್ತಿದ್ದೇನೆ, ಮೇ 18ನೇ ತಾರೀಖು ವಿಶ್ವ ವಾಣಿಜ್ಯ ಸಂಸ್ಥೆ ಪುನರ್ ಒಪ್ಪಂದಕ್ಕೆ ಜಗತ್ತಿನ ಎಲ್ಲಾ ದೇಶಗಳು ಸಹಿ ಹಾಕುತ್ತಿವೆ. ಇದರಲ್ಲಿ ಭಾರತದೇಶ ಕೂಡ ಒಂದು. ಅದರ ಪ್ರಕಾರ ನಮ್ಮ ದೇಶದಲ್ಲಿ ಯಾವ್ಯಾವ ಬೀಜಗಳನ್ನು ಉಪಯೋಗಿಸಬೇಕು ಎಲ್ಲೆಲ್ಲಿ ಉಪಯೋಗಿಸಬೇಕು ಎನ್ನುವ ತೀರ್ಮಾನ ಮಾಡತಕ್ಕ ಹಕ್ಕು ವಿಶ್ವ ವಾಣಿಜ್ಯ ಸಂಸ್ಥೆಗೆ ಇದೆ. ಅದರ ವಿರುದ್ಧ ಹೋಗಲಿಕ್ಕೆ ಭಾರತದೇಶಕ್ಕೆ ಸಾಧ್ಯವಿಲ್ಲ. ಮೇ 18ನೇ ತಾರೀಖು ಭಾರತದೇಶ ಸಹಿ ಮಾಡುತ್ತಿದೆ. ಅದರ ಪರಿಣಾಮ ಏನಾಗಿದೆ ಅಂದರೆ ನಿಮಗೆ ಗೊತ್ತಿರಬಹುದು, ಒಂದು ವಾರದ ಹಿಂದೆ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿತ್ತು. ಅದನ್ನು ಮಾನ್ಯ ಬೈರೇಗೌಡರು ಓದಿರುತ್ತಾರೆ. ಭಾರತದೇಶದಲ್ಲಿರತಕ್ಕ ಗಿಡಮೂಲಿಕೆಗಳು 280 ಗಿಡಮೂಲಿಕೆ ಅದರ ಸಾಮ್ಯವನ್ನೂ ಕೂಡ ವಿಶ್ವ ವಾಣಿಜ್ಯ ಒಪ್ಪಂದದ ಪ್ರಕಾರ ಆ ಸಂಸ್ಥೆ ಹೊಂದಿರುತ್ತದೆ ಎನ್ನುವುದನ್ನು ನೆನಪಿನಲ್ಲಿಡಬೇಕು. ಅದೇ ರೀತಿಯಲ್ಲಿ ವಿಶ್ವ ವಾಣಿಜ್ಯ ಸಂಸ್ಥೆಯು ನಮ್ಮ ದೇಶದಲ್ಲಿ ಬೆಳೆಯತಕ್ಕ ಭತ್ತ ಎಲ್ಲಾ ವಸ್ತುಗಳ ಮೇಲೆ ಪೇಟೆಂಟ್ ಅಧಿಕಾರವನ್ನು ಪಡೆಯುತ್ತಿದೆ. ಹೀಗಾಗಿ ರಾಜ್ಯಸರ್ಕಾರ ಏನಾದರೂ ಸ್ವತಂತ್ರ ಕೃಷಿನೀತಿಯನ್ನು ಇಲ್ಲಿ ಜಾರಿ ಮಾಡುತ್ತೇವೆಂದರೆ ಬಹುಶಃ ಅದು ಹಾಸ್ಯಾಸ್ಪದವಾಗುತ್ತದೆ, ಅದು ಸಾಧ್ಯವಿಲ್ಲ. ನಾನು ಬಹಳ ಮುಖ್ಯವಾದ ವಿಷಯ ಹೇಳುವುದೇನೆಂದರೆ ಕೃಷಿ ವ್ಯವಸ್ಥೆಗೆ ಸಂಬಂಧಪಟ್ಟಹಾಗೆ ಆಹಾರ ಉತ್ಪಾದನೆ ಬಗ್ಗೆ ಪ್ರಮುಖ ಪ್ರಸ್ತಾಪ ಮಾಡುತ್ತಿದೆ. ಕರ್ನಾಟಕ ರಾಜ್ಯ ಸರ್ಕಾರ ತನ್ನ ಬಜೆಟ್ ಭಾಷಣದಲ್ಲಿ ಹೇಳಿರತಕ್ಕ ಪ್ರಕಾರ ನಮ್ಮ ಕೃಷಿ ಉತ್ಪಾದನೆಯು 1998ನೇ ಇಸವಿಗೆ ಅವರು ಹೇಳಿರುವ ಪ್ರಕಾರ 87 ಲಕ್ಷ ಟನ್. ಆದರೆ ಇದೇ ಸರ್ಕಾರ ಯೋಜನಾ ಆಯೋಗದ ಮುಂದೆ ಅವರ ವರದಿ ಪ್ರಕಾರ 2000ನೇ ಇಸವಿ ದಾಟಿದ ಮೇಲೆ ಕರ್ನಾಟಕ ರಾಜ್ಯದ ಜನ ಸಂಖ್ಯೆಗೆ ಎರಡು ಹೊತ್ತು ಊಟವನ್ನು ಹಾಕಬೇಕಾದರೆ 148 ಲಕ್ಷ ಮಿಲಿಯನ್ ಟನ್ ಆಹಾರ ಉತ್ಪಾದನೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ಜನತೆಗೆ ನೀವು ಆಹಾರವನ್ನು ಕೊಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಸರ್ಕಾರ ಹೇಳಿದೆ. ಆದರೆ 148ಲಕ್ಷ ಟನ್ ಆಹಾರ ಉತ್ಪಾದನೆ ಮಾಡಲಿಕ್ಕೆ ಕೃಷಿ ಇಲಾಖೆ ಹಾಕಿಕೊಂಡಿರತಕ್ಕ ಯೋಜನೆಗಳೇನು? ನೀವು ಕೊಡತಕ್ಕ ಬೀಜಗಳು ಯಾವುವು? ಯಾವ ಕಾರ್ಯಕ್ರಮವನ್ನು ಹಾಕಿದ್ದೀರಿ? 148 ಲಕ್ಷ ಟನ್ ಆಹಾರ ಉತ್ಪಾದನೆ ಆಗಬೇಕಾಗಿದೆ 2000 ದ ಇಸವಿಗೆ. ನಾವು ಈಗ 1998ನೇ ಇಸವಿ ಮೇ ತಿಂಗಳಿನಲ್ಲಿದ್ದೇವೆ. ಇನ್ನು ಕೇವಲ ಒಂದೂವರೆ ವರ್ಷ ಮಾತ್ರ ಉಳಿದಿದೆ. 87 ಲಕ್ಷ ಟನ್‌ನಿಂದ 148ಲಕ್ಷ ಟನ್ ಆಹಾರ ಉತ್ಪಾದನೆಗೆ ನೀವು ಹೋಗಬೇಕು. ಇಲ್ಲದಿದ್ದರೆ ಕರ್ನಾಟಕ ರಾಜ್ಯದ ಜನತೆಗೆ ಆಹಾರ ಒದಗಿಸುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನೀವು ಏನು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೀರಿ? ಅದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕಾಗಿದೆ. ಆಹಾರ ಉತ್ಪಾದನೆಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಬೀಜ. ಬೀಜ, ಔಷಧಿ,

ಗೊಬ್ಬರ ಇವೆಲ್ಲಾ ಮುಖ್ಯ. ಬೀಜದ ಬಗ್ಗೆ ಹೇಳಬೇಕಾದರೆ ಉದಾಹರಣೆಗೆ ಭತ್ತ. ಭತ್ತದಲ್ಲಿ ಕರ್ನಾಟಕ ರಾಜ್ಯದಲ್ಲಿ 20 ವರೈಟಿಗಳು ಇವೆ. The area under paddy in our state is place around 10.69 lakh hectares. ಮಂಡ್ಯದಲ್ಲಿ ಬತ್ತದ ಹೈಬ್ರಿಡ್ ಉತ್ಪಾದನೆ ಮಾಡುತ್ತಿದ್ದೇವೆ. ನಮಗೆ ಎಷ್ಟುಬೇಕೆಂದರೆ 83 ಸಾವಿರ ಕ್ವಿಂಟಾಲ್ ಬೀಜ ಉತ್ಪಾದನೆ ಮಾಡಬೇಕಾಗುತ್ತದೆ. ಆದರೆ 1997-98ನೇ ಸಾಲಿನಲ್ಲಿ 83 ಸಾವಿರ ಕ್ವಿಂಟಾಲ್ ಬೇಕಾಗಿರತಕ್ಕ ನಾವು ಉತ್ಪಾದನೆ ಮಾಡಿರುವುದು 60 ಸಾವಿರ ಕ್ವಿಂಟಾಲ್. ಹಾಗಾಗಿ ಉಳಿದ ಬೀಜವನ್ನು ರೈತರಿಗೆ ಹೇಗೆ ಒದಗಿಸುತ್ತೀರಿ? ನಾವು ಉತ್ಪಾದನೆ ಮಾಡತಕ್ಕ ವರೈಟೀಸ್‌ನಲ್ಲಿ ಹಲವಾರು ದೋಷಗಳು ಇವೆಯೆಂದು ನೀವೇ ಒಪ್ಪಿಕೊಂಡಿದ್ದೀರಿ. ಮಾನ್ಯ ಕೃಷಿ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆದು ದೋಷಪೂರಿತ ಬೀಜಗಳನ್ನು ನೀವು ರೈತರಿಗೆ ಕೊಡುತ್ತಿದ್ದೀರಿ, ಇದನ್ನು ಸರಿಪಡಿಸಬೇಕು. ಇಲ್ಲದೇಹೋದರೆ, ಇದರಲ್ಲಿ ಖಾಸಗಿಯವರು ಪ್ರಧಾನಪಾತ್ರವಹಿಸುತ್ತಾರೆ. ಅವರು ಡಾಮಿನೇಟ್ ಮಾಡಿಕೊಳ್ಳುತ್ತಾರೆ ಎಂದು ಮಂತ್ರಿಗಳು ಸಭೆ ಮಾಡಿ ಹೇಳಿದ್ದಾರೆ. ರೈತರಿಗೆ ಸರಿಯಾದ ಬೀಜದ ವ್ಯವಸ್ಥೆಯಿಲ್ಲವೆಂದು ಹೇಳಿದರೂ ಕೂಡ ಮತ್ತೆ ಕರ್ನಾಟಕ ಸೀಡ್ ಕಾರ್ಪೊರೇಷನ್‌ಗೆ ಇವರು 12 ಲಕ್ಷ ರೂ.ಗಳು ಹಣ ಒದಗಿಸುವ ಮುಖಾಂತರ if I am wrong, the Agriculture Minister has to say 12 ಲಕ್ಷ ರೂ. ಹಣ ಕೊಟ್ಟು ನೀವು ಧಾರವಾಡ ಕೃಷಿ ವಿಶ್ವವಿದ್ಯಾನಿಲಯ ದವರ ಜೊತೆ ಒಪ್ಪಂದಮಾಡಿ ಉತ್ತಮವಾದ ಬೀಜಗಳನ್ನು ಉತ್ಪಾದನೆ ಮಾಡಲಿಕ್ಕೆ ಇವರು ಪ್ರಯತ್ನ ಮಾಡಿದ್ದಾರೆ. ಆದರೆ ಏನಾಗಿದೆ ಅಂದರೆ

``The Karnataka State seeds Corporation has considered the hybrid rice production as a serious task to pursue and in the last two years, has been training its man power and the seed growers at R.R.S. Mandya. Since hybrid rice production involves considerable technical input compared to paddy seed production of self polinated varieties ಆದರೆ ಇಲ್ಲಿ ಏನಾಗಿದೆ ಅಂದರೆ ಇದರಲ್ಲಿ.....

In pursuance of its programme to produce hybrid rice seeds, the Corporation has procured parental seeds from V.C.Farm, Mandya for 30 acres and issued seed production programme for 8 acres covering six farmers during the Khariff 1997. These farmers have represented to the Hon'ble Minister and also the Corporation about the field level problems in the seed production. 1) Female parent is flowering in advance by 30-33 days and thereby not achieving synchronisation with male parent flowering, thus leading to the non-secting of seeds. ಇದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಏನೂ ಕ್ರಮ ತೆಗೆದುಕೊಂಡಿಲ್ಲ. ಅದೇ ರೀತಿಯಲ್ಲಿ ಹಲವಾರು ಇವೆ. ನಾನು ವಿವರ ಹೇಳುವುದಕ್ಕೆ ಹೋದರೆ ಜಾಸ್ತಿ ಸಮಯ ತೆಗೆದುಕೊಳ್ಳುತ್ತೀರಿ ಎಂದು ಹೇಳುತ್ತೀರಿ. ಇದರಲ್ಲಿ ಬಹಳ ಮುಖ್ಯವಾದ ಅಂಶ This has been brought to the notice

of the University of Agricultural Sciences, Bangalore, by holding a meeting with the Director of Research, concerned breeders and other scientists on 19.11.97 and they have been requested to rectify the problems noticed in the seed production of KRHS 1 and also attention was focussed on the problems being experienced in the case of other varieties of seeds like Mandya, Vijaya".

Ultimately resulting in inconsistent supply of hybrid rice seeds in the public sector and the private sector would become dominant. The present problem of KRH 2 seed production failure and the compensation being claimed by the farmers is also being placed before the Board." ನಾನು ಏಕೆ ಈ ವಿಷಯ ಹೇಳುತ್ತಿದ್ದೇನೆಂದರೆ ಬೀಜ ಉತ್ಪಾದನೆ ಮಾಡುವುದರಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳು ಮತ್ತು ಕರ್ನಾಟಕ ಸೀಡ್ಸ್ ಕಾರ್ಪೊರೇಷನ್ ಇವತ್ತು ಉತ್ತಮ ಗುಣಮಟ್ಟದ ಬೀಜಗಳನ್ನು ಉತ್ಪಾದನೆ ಮಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಹೀಗಾಗಿ ಇವತ್ತು ಖಾಸಗಿಯವರು ಅದರ ಮೇಲೆ ಹಿಡಿತ ಸಾಧಿಸುವುದಕ್ಕೆ ಹೊರಟಿದ್ದಾರೆ. ಅದೂ ಅಲ್ಲದೆ ಯಾರು ಖಾಸಗಿಯವರು ಅವರ ಮೇಲೆ ಹಿಡಿತ ಸಾಧಿಸತಕ್ಕಂಥಾದ್ದು? ಇಲ್ಲಿ ಸನ್‌ಫ್ಲವರ್ ಉತ್ಪಾದನೆ ಇದೆ. ಮಲ್ಟಿ ನ್ಯಾಷನಲ್ಸ್ ಕಾರ್ಪೊರೇಷನ್‌ದ್ದು ಸನ್‌ಫ್ಲವರ್‌ನಲ್ಲಿ ಮಾನಾಪಲಿ ಇದೆ. ಬೇರೆ ಬೇರೆ ಬೀಜಗಳ ಉತ್ಪಾದನೆಯಲ್ಲಿ ಕೂಡ ಇವತ್ತು ಮಲ್ಟಿ ನ್ಯಾಷನಲ್ಸ್ ಕಾರ್ಪೊರೇಷನ್‌ನವರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಅವರು ಪೆಸ್ಟಿಸೈಡ್ಸ್‌ನಲ್ಲೂ ಹಸ್ತಕ್ಷೇಪ ಮಾಡುತ್ತಿದ್ದಾರೆ. ಹೀಗಾಗಿ ಇವತ್ತು ಬೀಜ ಉತ್ಪಾದನೆಯಲ್ಲೇ ದೋಷ ಇರುವಾಗ ನಾವು ಆಹಾರ ಸಾಮಗ್ರಿಗಳನ್ನು ಉತ್ಪಾದನೆ ಮಾಡುವುದಕ್ಕೆ ಹೇಗೆ ಸಾಧ್ಯವಾಗುತ್ತದೆ? ನಿಮ್ಮ ಗುರಿಯೇನು? ನಿಮ್ಮ ಕಾರ್ಯಕ್ರಮಗಳೇನು? 145 ಲಕ್ಷ ಟನ್ ಆಹಾರವನ್ನು ಕರ್ನಾಟಕ ರಾಜ್ಯದಲ್ಲಿ ಬೆಳೆಯಬೇಕಾದರೆ ಇರುವಂಥ ಕಾರ್ಯಕ್ರಮ ಯಾವುದು ಎಂದು ಇವತ್ತು ಸರ್ಕಾರ ಹೇಳಬೇಕಾಗಿದೆ.

ಸನ್ಮಾನ್ಯ ಅಧ್ಯಕ್ಷರೇ, ಇದೇ ರೀತಿಯಲ್ಲಿ ಈವತ್ತು ಕೃಷಿಯಲ್ಲಿ ಬಹಳ ಪ್ರಮುಖವಾಗಿರತಕ್ಕಂಥಾದ್ದು, ಈಗ ನೀರಾವರಿಗೆ ಸಂಬಂಧಪಟ್ಟಂತೆ ನಾನು ಹೇಳುವುದಿಲ್ಲ. ಬೇರೆಬೇರೆ ಜಿಲ್ಲೆಗಳಲ್ಲಿ ಇರತಕ್ಕಂಥ ಸಮಸ್ಯೆಗಳು ಬೇರೆ ಬೇರ ಇವೆ. ಆದರೆ ನೀವು ಆಹಾರ ಸಾಮಗ್ರಿಗಳನ್ನು ಉತ್ಪಾದನೆ ಮಾಡಬೇಕಾದರೆ ಬರೇ ಬೀಜ ಕೊಟ್ಟರ ಸಾಕಾಗುವುದಿಲ್ಲ. ಔಷಧಿ ಕೊಟ್ಟರೆ ಸಾಕಾಗುವುದಿಲ್ಲ. ಮುಖ್ಯವಾಗಿ ನೀರು ಇರಬೇಕು. ಇಲ್ಲಿ ಮಾತನಾಡಿದರೆ ಬರೇ ಕೃಷ್ಣಾ ಕಾವೇರಿ ಬಗ್ಗೆ ಚರ್ಚೆಯಾಗುತ್ತದೆ. ನಮ್ಮ ನಾಗೇಗೌಡರು ಇದ್ದಾರೆ. ಸಾವಿರ ಕೋಟಿಗಿಂತ ಕಡಿಮೆ ಅವರ ಬಾಯಿಯಲ್ಲಿ ಬರುವುದಿಲ್ಲ. ಆದರೆ ನಮ್ಮ ಗತಿ ಏನು ಸ್ವಾಮಿ? ಕೋಲಾರ, ತುಮಕೂರು, ಈ ಕಡೆಗಳಲ್ಲಿ ಪರಿಸ್ಥಿತಿ ಏನಾಗಬೇಕು? ನಾವು ಭತ್ತ ಬೆಳೆಯಬೇಕು, ನಾವು ಕಡಲೆಕಾಯಿ, ಆಲೂಗಡ್ಡೆ, ಟೊಮೇಟೊ ಬೆಳೆಯಬೇಕು. ನಮ್ಮ ಜೀವನವೇ

ಅದರಲ್ಲಿದೆ. ನಮ್ಮ ಜೀವನ ಮಂಡ್ಯದವರ ಹಾಗೆ ಇಲ್ಲ. ಆದರೆ ನಮಗೆ ಮೂರು ಕಾಸನ್ನೂ ನೀವು ಕೊಡುವುದಿಲ್ಲ. ಮತ್ತೆ ಹೇಗೆ ಕೃಷಿ ಉತ್ಪಾದನೆ ಹೆಚ್ಚು ಆಗಬೇಕು? ಇದು ಒಂದು ವಿಪರ್ಯಾಸ ಏನು ಎಂದರೆ, ಇವತ್ತು ಸದನದಲ್ಲಿ ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾತೆತ್ತಿದರೆ ಕೃಷ್ಣಾ ಕಾವೇರಿ, ಇದೇ ಚರ್ಚೆಯಾಗುತ್ತದೆ. ಸಣ್ಣ ನೀರಾವರಿ ಬಗ್ಗೆ ಯಾರೂ ಕೂಡ ಚರ್ಚೆ ಮಾಡುವುದಿಲ್ಲ. ಇವತ್ತು ಸಣ್ಣ ನೀರಾವರಿಯಲ್ಲಿ ಕೃಷಿ ಉತ್ಪಾದನೆಯಾಗತಕ್ಕಂಥಾದ್ದು ಶೇಕಡಾ 60ರಷ್ಟು ಎಂಬುದನ್ನು ನಾವೆಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಇಡೀ ಕೃಷಿ ಉತ್ಪಾದನೆಯಲ್ಲಿ ಶೇಕಡಾ 60 ಭಾಗ ಉತ್ಪಾದನೆ ಆಗತಕ್ಕಂಥಾದ್ದು ಸಣ್ಣ ನೀರಾವರಿಯಲ್ಲಿ ಕೃಷಿ ಎಂದರೆ ಬರೇ ಭತ್ತ ಕಬ್ಬು ಅಲ್ಲ. ಅದರಲ್ಲೂ ಆಲೂಗಡ್ಡೆ, ಟೊಮೆಟೋ, ಈರುಳ್ಳಿ ಎಲ್ಲವೂ ಸೇರುತ್ತದೆ. ಮಂಡ್ಯದ ಗೌಡರಿಗೆ ಯಾವಾಗಲೂ ಕಬ್ಬು ಮತ್ತು ಭತ್ತವೇ ತಲೆಯಲ್ಲಿ ಇರುವುದು. ಅವರಿಗೆ ಬೇರೆ ಏನೂ ತಲೆಯಲ್ಲಿ ಬರುವುದಿಲ್ಲ. ಹೀಗಾಗಿ ನಮಗೆ ಇಲ್ಲ ಇಲ್ಲ ಎಂದು ಅವರು ಹೇಳುತ್ತಾರೆ. ಇದೆಲ್ಲವೂ ಸೇರಿ, ಸಣ್ಣ ನೀರಾವರಿ, ಕೆರೆ, ಬಾವಿ ಬೋರ್‌ವೆಲ್, ಕಾಲುವೆ ಎಲ್ಲಾ ಸೇರಿಸಿದರೆ ನಮ್ಮ ಮೇಜರ್ ಇರಿಗೇಷನ್‌ಗಿಂತ ಕೊನೆ ಪಕ್ಷ 50 ಪರ್ಸೆಂಟ್ ಹೆಚ್ಚಿಗೆ ಇಲ್ಲಿ ಕೃಷಿ ಉತ್ಪಾದನೆಯಾಗುತ್ತದೆ. ಆದರೆ ಅದಕ್ಕೆ ನೀವು ಎಷ್ಟು ಹಣ ಕೊಡುತ್ತಿದ್ದೀರಿ? ಅದಕ್ಕೆ ಏನೂ ಹಣ ಕೊಡದೇನೇ ಕೃಷಿಯಲ್ಲಿ ಉತ್ಪಾದನೆ ಮಾಡಿ, ಕೃಷಿ ಅಭಿವೃದ್ಧಿ ಮಾಡಿ ಎಂದು ಹೇಳಿದರೆ ಅದು ಹೇಗೆ ಸಾಧ್ಯ? ಅದು ಸಾಧ್ಯವೇ ಇಲ್ಲ. ಬೈರೇಗೌಡರಿಗೆ ನಾನಂತೂ ಪ್ರಾಮಾಣಿಕವಾಗಿ ಹೇಳುತ್ತೇನೆ. ಅವರು ಹೇಳಿದ್ದು ಒಂದು ಅಂಶ ನಿಜ. ಹಿಂದೆ ಕೃಷಿ ಇಲಾಖೆ ಎಲ್ಲಿದೆ ಅಂತ ಆ ಬೋರ್ಡನ್ನು ಹುಡುಕಿಕೊಂಡು ಹೋಗಬೇಕಾಗಿತ್ತು. ಕನಿಷ್ಟ ಬೈರೇಗೌಡರು ಬಂದಮೇಲೆ ಇದು ಒಂದು ಇಲಾಖೆ ಇದೆಯೆಂದು ಕರ್ನಾಟಕದ ಜನತೆಗೆ ತೋರಿಸಿಕೊಟ್ಟಿದ್ದಾರೆ. ಇದರಲ್ಲಿ ಹಲವಾರು ಲೋಪದೋಷಗಳು ಇವೆ. ಆದರೆ ಕನಿಷ್ಟ ಇಲಾಖೆ ಎಂದು ಒಂದು ಇದೆ, ಕರ್ನಾಟಕ ರಾಜ್ಯದ ರೈತರಿಗೆ, ಕೃಷಿ ಕಾರ್ಮಿಕರಿಗೆ ಇವರಿಗೆ ಸೇವೆ ಮಾಡಲಿಕ್ಕೆ ಒಂದು ಕೃಷಿ ಇಲಾಖೆ ಎಂದು ಇದೆಯೆಂದು ಕನಿಷ್ಟ ಕರ್ನಾಟಕದ ಜನತೆಗೆ ಅವರು ತೋರಿಸಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ ಅಭಿನಂದನೆಯನ್ನು ಸಲ್ಲಿಸಬೇಕು. ಆದರೆ ಅಷ್ಟಕ್ಕೇ ಅದರ ಜವಾಬ್ದಾರಿ ಮುಗಿಯಲಿಲ್ಲ. ಇದು ಬಹಳ ಗಂಭೀರವಾದುದು. ಏಕೆಂದರೆ ಕೃಷಿ ಎನ್ನತಕ್ಕಂಥಾದ್ದು ಎಲ್ಲ ಬೆಳವಣಿಗೆಗಳಿಗೆ ಮೂಲಭೂತವಾದ ಒಂದು ವಿಶೇಷ ಅಂಶ. ನಿಮ್ಮ ಕೈಗಾರಿಕೆ ಬೆಳವಣಿಗೆಯಾಗಬೇಕಾದರೆ, ಕೈಗಾರಿಕೆಗಳಿಗೆ ಬಂಡವಾಳ ಹಾಕಬೇಕಾದರೆ, ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳು ಬರಬೇಕಾದರೆ ಇವೆಲ್ಲವೂ ಬರತಕ್ಕಂಥಾದ್ದು ಕೃಷಿಯಿಂದಲೇ. ಕೃಷಿ ಬಿಟ್ಟು ಕೈಗಾರಿಕೆಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಆದರೆ ಹಿರಿಯ ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ಹೇಳಿದರು. ಕೈಗಾರಿಕಾ ರಂಗಕ್ಕೆ ಈ ದೇಶದಲ್ಲಿ ಎಷ್ಟು ರಕ್ಷಣೆ ಇದೆ, ಎಷ್ಟು ಕಾನೂನುಗಳಿವೆ ಅವರಿಗೆ ರಕ್ಷಣೆ ಕೊಡುವುದಕ್ಕೆ? ಆದರೆ ಕೃಷಿ ರಂಗಕ್ಕೆ ರಕ್ಷಣೆ ಕೊಡತಕ್ಕಂಥ ಕಾನೂನುಗಳು ಎಷ್ಟು ಇವೆ? ನಾವೆಲ್ಲರೂ ಆತ್ಮವಿಮರ್ಶೆ ಮಾಡಿಕೊಳ್ಳೋಣ. ಇದರಲ್ಲಿ ಆ ಸರ್ಕಾರ ಈ ಸರ್ಕಾರ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಕೃಷಿ ರಂಗಕ್ಕೆ ರಕ್ಷಣೆ ಕೊಡತಕ್ಕಂಥ ಎಷ್ಟು ಕಾನೂನುಗಳನ್ನು ಈ ದೇಶದಲ್ಲಿ ನಾವು ತಂದಿದ್ದೇವೆ? ಸ್ವಾತಂತ್ರ್ಯ ನಂತರ ಈ ದೇಶದಲ್ಲಿ 83ಸಲ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದಾರೆ. ಆದರೆ ಕೃಷಿ ರಂಗಕ್ಕೆ ಸಂಬಂಧಪಟ್ಟಹಾಗೆ ಒಂದೇ ಒಂದು

ಸಲ ಕೂಡ ಸಂವಿಧಾನವನ್ನು ತಿದ್ದುಪಡಿ ಮಾಡಿಲ್ಲ. ಹಾಗಾದರೆ ನಾವು ನೂರಕ್ಕೆ ಎಂಬತ್ತು ಜನ ಈ ದೇಶದಲ್ಲಿ ಇದ್ದೇವೆ. ಕೃಷಿ ಆಧಾರದಮೇಲೆ ಇರತಕ್ಕಂಥವರು ನೂರಕ್ಕೆ ಎಂಬತ್ತರಷ್ಟು ಜನ ಇದ್ದಾಗ 83ಸಲ ನೀವು ಸಂವಿಧಾನ ತಿದ್ದುಪಡಿ ಮಾಡಿ, ಒಂದೇ ಒಂದು ಸಲವೂ ಕೂಡ ಕೃಷಿಗೆ ಸಂಬಂಧಪಟ್ಟ ರೀತಿಯಲ್ಲಿ ಸಂವಿಧಾನದ ತಿದ್ದುಪಡಿಯನ್ನು ಮಾಡಲಿಲ್ಲ. ಇವತ್ತು ರೈತ, ಕೃಷಿ ಕಾರ್ಮಿಕ ಇವರಿಬ್ಬರೂ ಕೃಷಿರಂಗಕ್ಕೆ ಜೀವಾಳವಾಗಿದ್ದಾರೆ. ರೈತರಿಗೆ ರಕ್ಷಣೆ ಕೊಡತಕ್ಕಂಥ ರೀತಿಯಲ್ಲಿ ಎಂದಾದರೂ ಒಂದೇ ಒಂದುಸಲ ಸಂವಿಧಾನವನ್ನು ತಿದ್ದುಪಡಿ ಮಾಡಿದ್ದೇವಾ? ಕೃಷಿ ಕಾರ್ಮಿಕನಿಗೆ ರಕ್ಷಣೆ ಕೊಡತಕ್ಕಂಥ ರೀತಿಯಲ್ಲಿ ಈ ದೇಶದಲ್ಲಿ ಎಂದಾದರೂ ಸಂವಿಧಾನ ತಿದ್ದುಪಡಿ ಮಾಡಿದ್ದೀರಾ? ಅವನ ರಕ್ಷಣೆಗೆ ಇವತ್ತು ಏನಾದರೂ ಕಾನೂನು ಮಾಡಿದ್ದೀರಾ? ರೈತನು ಇವತ್ತು ಮೇಲುಗಡೆ ನೋಡಬೇಕು, ಇಲ್ಲ, ಕೆಳಗಡೆ ನೋಡಬೇಕು. ಅವನಿಗೆ ಬೇರೆ ಏನೂ ದಾರಿ ಇಲ್ಲ. ಕೈಗಾರಿಕಾ ರಂಗದವರಿಗೆ ಎಷ್ಟು ರಕ್ಷಣೆ ಇದೆ? ಬಂಡವಾಳ ಹಾಕುವುದಕ್ಕೆ ರಕ್ಷಣೆ ಇದೆ, ಅವನು ನಷ್ಟ ಅನುಭವಿಸಿದರೆ ರಕ್ಷಣೆ ಇದೆ. ಅವನು ಕೈಗಾರಿಕಾ ಉತ್ಪಾದನೆ ಮಾಡಿದರೆ ಮಾರುಕಟ್ಟೆಯಲ್ಲಿ ರಕ್ಷಣೆ ಇದೆ. ನಷ್ಟವಾದರೆ ರಕ್ಷಣೆ ಇದೆ. ನಿಮ್ಮ ಎಂ.ಆರ್.ಟಿ.ಪಿ.ಎಸ್ ಆ್ಯಕ್ಟ್ ಅವನಿಗೆ ರಕ್ಷಣೆ ಮಾಡಲಿಕ್ಕೆ ಇದೆ. ಹಾಗೆ ಒಂದುವೇಳೆ ಕೈಗಾರಿಕೆಯಲ್ಲಿ ನಷ್ಟವಾದರೆ, ದಿವಾಳಿ ಆಗಿಬಿಟ್ಟರೆ ಸರ್ಕಾರ ಅವನಿಗೆ ಪರಿಹಾರ ಕೊಡುತ್ತದೆ. ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆ ಕುಸಿದರೆ ಅವನಿಗೆ ರಕ್ಷಣೆ ಇದೆ. ಆದರೆ ರೈತನಿಗೆ ಏನು ರಕ್ಷಣೆ ಇದೆ? ಅವನು ಕಷ್ಟಬಿದ್ದು ಬೆಳೆದರೆ ಯಾವುದೇ ರೀತಿಯ ರಕ್ಷಣೆ ಆತನಿಗೆ ಇಲ್ಲ. ಇವತ್ತು ಈ ಸದನದಲ್ಲಿ ಬೆಳೆ ನಾಶವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಚರ್ಚೆಯಾಯಿತು. ಆ ಪ್ರಕರಣ ಬೇರೆ, ಆ ಪ್ರಶ್ನೆ ಬೇರೆ. ಅಂದರೆ ಅವನಿಗೆ ಪರಿಹಾರ ಕೊಡಬೇಕಾದರೆ ಎಷ್ಟು ಕಾನೂನುಗಳು ಅಡ್ಡಬಂದವು ಎಂದು ನೀವೇ ಈ ಸದನದಲ್ಲಿ ಹೇಳಿದಿರಿ. ನ್ಯಾಚುರಲ್ ಕೆಲಾಮಿಟೀಸ್ ಆ್ಯಕ್ಟ್ ಅಡ್ಡ ಬರುತ್ತದೆ, ಅದರ ಇತಿಮಿತಿ ಇಷ್ಟು ಇದೆ. ಹೀಗಾಗಿ ರೈತರಿಗೆ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ಕೈಗಾರಿಕೆಗೆ ಬೆಂಕಿ ಬಿದ್ದುಬಿಟ್ಟರೆ ಎಷ್ಟು ಕಾನೂನುಗಳಿಗೆ ಅವನ ರಕ್ಷಣೆ ಮಾಡುವುದಕ್ಕೆ? ಅವನೇನಾದರೂ ಮನಸ್ಸು ಮಾಡಿಬಿಟ್ಟು ಅವನೇ ಸುಟ್ಟುಹಾಕಿಬಿಟ್ಟು, ಕೈಗಾರಿಕೆ ಸುಟ್ಟು ಹೋಗಿಬಿಟ್ಟಿದೆ ಎಂದು ಒಂದು ಸರ್ಟಿಫಿಕೇಟನ್ನು ತಂದುಕೊಟ್ಟರೆ ಲಕ್ಷ, ಕೋಟಿ ಪರಿಹಾರವನ್ನು ನೀವು ಅವನಿಗೆ ಕೊಡುತ್ತೀರಿ. ಆದರೆ ರೈತನಿಗೆ ಏನು ಪರಿಹಾರ ಇದೆ? ಆ ರೀತಿಯ ಕಾನೂನನ್ನು ತಂದಿದ್ದೀರಾ? ಅದನ್ನು ತರುವುದಕ್ಕೆ ಸಾದ್ಯವಾಗಿದೆಯೇ? ಅದು ಇನ್ನೂ ಕೂಡ ಆಗಿಲ್ಲ. ಇವತ್ತು ರೈತ ಬೆಳೆಯುತ್ತಾನೆ. ಅಂಗಡಿಗೆ ಹೋಗಿ ಒಂದು ಬೆಂಕಿಪೊಟ್ಟಣ ತೆಗೆದುಕೊಂಡರೆ ಅದರ ಮೇಲೆ 50 ಪೈಸೆ ಎಂದು ಮುದ್ರೆ ಹೊಡೆದಿರುತ್ತಾರೆ. ಅದಕ್ಕಿಂತ ಕಡಿಮೆ ಕೊಡುವುದಕ್ಕೆ ರೂಲ್ಸ್ ಇಲ್ಲ ಎಂದು ಅವನು ಹೇಳುತ್ತಾನೆ. ನಮ್ಮ ರೈತರಾಗಿ ಬೆಳೆದರೆ ಯಾರು ಸ್ವಾಮಿ ಅದಕ್ಕೆ ಮುದ್ರೆ ಹೊಡೆಯುವವರು? ರೈತನಿಗೆ ಏನಾದರೂ ಹಕ್ಕು ಉಂಟಾ, ಅವನು ಬೆಳೆದಿರತಕ್ಕಂಥ ಉತ್ಪನ್ನಗಳ ಮೇಲೆ ನಾನು ಇಷ್ಟಕ್ಕೇ ಮಾರಾಟ ಮಾಡುತ್ತೇನೆ, ಇಷ್ಟಕ್ಕಿಂತ ಕಡಿಮೆ ಮಾರಾಟ ಮಾಡುವುದಿಲ್ಲ ಎಂದು ಹೇಳಲಿಕ್ಕೆ? ರೈತನಿಗೆ ಏನಾದರೂ ಈ ದೇಶದಲ್ಲಿ ಹಕ್ಕು ಇದೆಯಾ? ಬೆಂಕಿಪೊಟ್ಟಣಕ್ಕೆ 50 ಪೈಸೆ ಎಂದು ಮುದ್ರೆಹಾಕಿ ಅಂಗಡಿಯಲ್ಲಿ ನೀವು ಇಡುತ್ತೀರಿ. ಅವನಿಗೆ ರಕ್ಷಣೆ ಇದೆ. ಆದರೆ ನಮ್ಮ ರೈತನಿಗೆ ಏನು ರಕ್ಷಣೆ ಇದೆ? ಟೊಮೆಟೋ ಬೆಳೆದರೆ ಬೀದಿಗೆ ಬಿಸಾಕು, ಆಲೂಗಡ್ಡೆ

ಬೆಳೆದರೆ ಬೀದಿಗೆ ಬಿಸಾಕು, ಈರುಳ್ಳಿ ಬೆಳೆದರೆ ಬೀದಿಗೆ ಬಿಸಾಕು, ಏನೂ ಆಗಿಲ್ಲವೆಂದರೆ ಆತ್ಮಹತ್ಯೆ ಮಾಡಿಕೋ. ಅವನಿಗೆ ಏನು ರಕ್ಷಣೆ ಇದೆ? ಮೂಲಭೂತವಾದ ಪ್ರಶ್ನೆ ಇರತಕ್ಕಂಥಾದ್ದು ಏನು ಎಂದರೆ, ಕೃಷಿ ಬಗ್ಗೆ ಯಾವುದೇ ಸರ್ಕಾರ 50 ವರ್ಷಗಳಲ್ಲಿ ಈ ದೇಶದಲ್ಲಿ ಒಂದು ಸರಿಯಾದಂಥ, ವೈಜ್ಞಾನಿಕವಾದಂಥ ಧೋರಣೆಯನ್ನು ತಳೆಯಲೇ ಇಲ್ಲ. ಅದನ್ನು ತಳೆದಿದ್ದರೆ, ಧೋರಣೆಯನ್ನು ಅನುಸರಿಸಿದ್ದರೆ ಹೀಗಿರುತ್ತಿರಲಿಲ್ಲ. ಮೊನ್ನೆ ಕೇಂದ್ರ ಸರ್ಕಾರದವರು ಎಕ್ಸಿಮ್ ಪಾಲಿಸಿಯನ್ನು ಪ್ರಕಟಣೆ ಮಾಡಿದ್ದಾರೆ. 370 ಕೃಷಿಗೆ ಸಂಬಂಧಪಟ್ಟಂಥ ವಸ್ತುಗಳನ್ನು ಎಕ್ಸ್‌ಪೋರ್ಟ್ ಮತ್ತು ಇಂಪೋರ್ಟ್ ಪಾಲಿಸಿಯಲ್ಲಿ ತೆಗೆದಿದ್ದಾರೆ. ಅದನ್ನು ಎಕ್ಸಿಮ್ ಪಾಲಿಸಿಯಲ್ಲಿ ಅಳವಡಿಸಿದ್ದಾರೆ. ಅದರ ಪರಿಣಾಮ ಏನಾಯಿತು? ನಾನು ಅದರ ವಿವರಣೆಗೆ ಹೋಗುವುದಿಲ್ಲ. ಇದು ಆ ವೇದಿಕೆಯೂ ಅಲ್ಲ. ಆದರೆ ಆ ಎಕ್ಸಿಮ್ ಪಾಲಿಸಿಯ ಪರಿಣಾಮವಾಗಿ ಇವತ್ತು ಇಡೀ ದೇಶದ ಸಣ್ಣ ಕೃಷಿಕರು ಮತ್ತು ಕೃಷಿ ಉತ್ಪನ್ನಗಳು ಸಂಪೂರ್ಣವಾಗಿ ದಿವಾಳಿಯಾಗುತ್ತವೆ. ಎಕ್ಸ್‌ಪೋರ್ಟ್-ಇಂಪೋರ್ಟ್ ಮಾರುಕಟ್ಟೆಯಲ್ಲಿ ಅವರು ಕಾಂಪೀಟ್ ಮಾಡುವುದಕ್ಕೆ ಆಗುವುದಿಲ್ಲ. ಸಣ್ಣ ಕೃಷಿಕರು ಸತ್ತರು. ಅವರು ಇವತ್ತು ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯ ಇಲ್ಲ. ಹಿರಿಯ ಸದಸ್ಯರು ಹೇಳಿದರು ಕೃಷಿ ಎಂದರೆ ಗೊತ್ತಿಲ್ಲದೇ ಇರತಕ್ಕಂಥವರನ್ನೆಲ್ಲಾ ಕೃಷಿ ಇಲಾಖೆಗೆ ಹಾಕಿದ್ದೀರಿ ಎಂದು ಹೇಳಿ ನಿಜ. ಇಷ್ಟೇ ಅಲ್ಲ, ಈ ದೇಶದ ದುರಂತ, ವಿಪರ್ಯಾಸ ಏನು ಎಂದರೆ, ಭತ್ತ ಭೂಮಿಯಲ್ಲಿ ಬೆಳೆಯುತ್ತದಾ? ಗದ್ದೆಯಲ್ಲಿ ಬೆಳೆಯುತ್ತದಾ, ಹೊಲದಲ್ಲಿ ಬೆಳೆಯುತ್ತದಾ ಎಂದು ಗೊತ್ತಿಲ್ಲದೆ ಇರತಕ್ಕಂಥವರು ಈ ದೇಶದಲ್ಲಿ 45 ವರ್ಷ ಕಾಲ ಅಧಿಕಾರ ನಡೆಸಿದ್ದಾರೆ. ಕಡಲೆಕಾಯಿ ಭೂಮಿಯಲ್ಲಿ ಬರುತ್ತದಾ, ಮರದ ಮೇಲೆ ಬರುತ್ತದಾ ಎಂಬುದೂ ಗೊತ್ತಿಲ್ಲದೇ ಇರತಕ್ಕಂಥವರು ಈ ದೇಶದಲ್ಲಿ 45 ವರ್ಷಗಳ ಕಾಲ ಕೇಂದ್ರದಲ್ಲಿ ಅಧಿಕಾರವನ್ನು ನಡೆಸಿದ್ದಾರೆ. ಆವಾಗ ಈ ದೇಶದಲ್ಲಿ ಏನು ಪರಿಣಾಮ ಆಗಬಹುದು ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ಇವತ್ತು ಕೃಷಿಯನ್ನು ಸಂಪೂರ್ಣವಾಗಿ ಅಲಕ್ಷ್ಯ ಮಾಡಿರುವಂಥಾದ್ದು ಅದು ಯಾವುದೇ ಒಂದು ಸರ್ಕಾರ ಅಲ್ಲ. ಈ ದೇಶದಲ್ಲಿ ಆಡಳಿತ ನಡೆಸಿದಂಥ ಎಲ್ಲ ಸರ್ಕಾರಗಳೂ ಕೃಷಿಯನ್ನು ಅಲಕ್ಷಿಸಿವೆ. ಇದರ ಪರಿಣಾಮ ಏನಾಗುತ್ತಿದೆ ಎಂದರೆ ವರ್ಲ್ಡ್ ಟ್ರೇಡ್ ಆರ್ಗನೈಸೇಷನ್‌ಗೆ ಕೃಷಿಯನ್ನು ಒಳಪಡಿಸಿದರೆ ಈ ದೇಶದಲ್ಲಿ ಬಹಳ ಅನಾಹುತಗಳು ಆಗುತ್ತವೆ ಎನ್ನತಕ್ಕಂಥ ಕನಿಷ್ಠ ಪರಿಜ್ಞಾನವೂ ಇಲ್ಲದಂಥ ಜನ ಈ ದೇಶದಲ್ಲಿ ಆಡಳಿತವನ್ನು ನಡೆಸಿದ್ದಾರೆ. ಅದರ ಪರಿಣಾಮ ಈಗಾಗಲೇ ಕಂಡುಬರುತ್ತಿದೆ. ಮುಂದೆ ಇನ್ನೂ ಬಹಳ ಭಯಾನಕವಾಗುತ್ತದೆ. ಈ ದೇಶದಲ್ಲಿ ರೈತರ ಹಕ್ಕನ್ನು ಸಂಪೂರ್ಣವಾಗಿ ಕಸಿದುಕೊಳ್ಳುತ್ತಾರೆ. ಏನು ಬೆಳೆಯಬಾರದು, ಏನು ಬೆಳೆಯಬೇಕು ಎನ್ನತಕ್ಕಂಥಾದ್ದನ್ನು ಕೂಡ ವರ್ಲ್ಡ್ ಟ್ರೇಡ್ ಆರ್ಗನೈಸೇಷನ್‌ನವರು, ಮಲ್ಟಿ ನ್ಯಾಷನಲ್ಸ್ ಕಾರ್ಪೊರೇಷನ್‌ನವರು ತೀರ್ಮಾನ ಮಾಡುತ್ತಾರೆ. ಅದರ ಪರಿಣಾಮವಾಗಿ ನಮ್ಮ ದೇಶದ ಜನತೆಗೆ ಮೂಲಭೂತ ಅವಶ್ಯಕತೆ ಇರತಕ್ಕಂಥ ಕೃಷಿ ಸಾಮಗ್ರಿಗಳು ಉತ್ಪಾದನೆ ಆಗುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಒಂದೇ ಒಂದು ಉದಾಹರಣೆಯನ್ನು ಹೇಳಿ ನಾನು ಮುಗಿಸುತ್ತೇನೆ. ಕೃಷಿ ಉತ್ಪನ್ನಗಳು ಅದರಲ್ಲೂ ಮುಖ್ಯವಾಗಿ ಆಹಾರ ಸಾಮಗ್ರಿಗಳು ಉತ್ಪಾದನೆ ಇಲ್ಲದೆ ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಸೋಮಾಲಿಯಾದಲ್ಲಿ ಇವತ್ತು ಎಂತಹ ಪರಿಸ್ಥಿತಿ ಬಂದಿದೆ? ಮೆಕ್ಸಿಕೋದಲ್ಲಿ ಎಂತಹ

ಪರಿಸ್ಥಿತಿ ಬಂದಿದೆ? ಕೃಷಿ ಆಹಾರ ಉತ್ಪಾದನೆಯಲ್ಲಿ ಇದೇ ಧೋರಣೆಯನ್ನು ಅನುಸರಿಸಿದರೆ, ಭಾರತ ದೇಶದಲ್ಲೂ ಇದೇ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಕೃಷಿ ನೀತಿಯ ಬಗ್ಗೆ ವೈಜ್ಞಾನಿಕವಾದಂಥ ದೃಷ್ಟಿಯನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

5.30 ಪಿ.ಎಂ

ಶ್ರೀ ಹೆಚ್. ಶಿವಪ್ಪ : ಕಡಲೆಕಾಯಿ ನೆಲದಲ್ಲಿ ಬೆಳೆಯುತ್ತದೋ ಅಥವಾ ಕೊಂಬೆಯಲ್ಲಿರುತ್ತದೋ ಎನ್ನುವವರು ಕೇಂದ್ರದಲ್ಲಿ ಆಡಳಿತ ಮಾಡಿದರು ಎನ್ನುವಂಥ ಒಂದು ರಿಮಾರ್ಕ್ ಮಾಡಿದರು. ಮದುವೆಯಾಗದೇ ಇರತಕ್ಕ ಒಬ್ಬ ಯುವಕ ಆಗಲೀ ಅಥವಾ ವಯಸ್ಸಾದವನ್ನು ಸಾಂಸಾರಿಕ ತೊಂದರೆಗಳು ಅವನಿಗೆ ಗೊತ್ತೇ ಇಲ್ಲವೆಂದು ಹೇಳಿದರೆ ಎಷ್ಟರಮಟ್ಟಿಗೆ ಸಾಧುವಾಗುತ್ತದೋ ಹಾಗೆಯೇ ಇದೂ ಆಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಅಸಂಬದ್ಧ.

ಶ್ರೀ ವಾಟಾಳ್ ನಾಗರಾಜ್ : ಬಂಜೆಗೇನು ಗೊತ್ತು, ಹೆರಿಗೆ ಕಷ್ಟ?

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್ ಅವರೇ, ನೀವು ಅವರ ಪಕ್ಕದಲ್ಲಿ ಕುಳಿತುಕೊಂಡು, ಅವರಿಗೆ ಈ ರೀತಿ ಹಿಂಸೆ ಕೊಡುವುದು ಒಳ್ಳೆಯದಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳಿದ ಭಾಷೆ ಬಹುಶಃ ಅವರಿಗೆ ಅರ್ಥವಾಗಿಲ್ಲ. ನಾನು 45 ವರ್ಷಗಳಲ್ಲಿ ಎಂದು ಹೇಳಿದೆ. ಇದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ : ಅದು ನ್ಯಾಚುರಲ್ಲಾಗಿರುವಂಥಾದ್ದು. ಸಹಜವಾದಂಥ ಒಂದು ಕ್ರಿಯೆ ಬಂಜೆ ಎನ್ನುವಂಥಾದ್ದು. ಹಾಗಾದರೆ, ಗಂಡಸರಿಗೂ ಮಕ್ಕಳು ಇರುವುದಿಲ್ಲವಲ್ಲಾ, ಅವರನ್ನು ಬಂಜೆ ಎನ್ನುವುದಿಲ್ಲ. ಆದರೆ ಹೆಣ್ಣನ್ನೇ ನೀವು ಬಂಜೆ ಎಂದು ಹೇಳುವುದು ಇದು ಮನುಷ್ಯನ ತಣ್ಣನೆಯ ಕ್ರೌರ್ಯವನ್ನು ಸೂಚನೆ ಮಾಡುತ್ತದೆ. ಏಕೆಂದರೆ ಬಂಜೆತನ ಎನ್ನುವುದು ನೀವು ಮಾಡಿಕೊಂಡಿದ್ದು ಅಥವಾ ಅವರು ಮಾಡಿಕೊಂಡಿದ್ದು ಅಲ್ಲ. ಅದು ಅಚಾನಕವಾಗಿ ಆಗಿರುವಂಥಾದ್ದು. ಆದ್ದರಿಂದ, ಬಂಜೆ ಎನ್ನುವುದನ್ನು ಎತ್ತಿ ಎತ್ತಿ ಹೇಳುವುದೇನಿದೆ?

ಶ್ರೀ ವಾಟಾಳ್ ನಾಗರಾಜ್ : ದಯವಿಟ್ಟು ಕ್ಷಮಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ಅವರ ವಾದಕ್ಕೆ ನಾನು ಪ್ರತಿ ವಾದ ಮಾಡುತ್ತೇನೆಂದು ತಿಳಿದುಕೊಳ್ಳಬೇಡಿ. ಸೃಷ್ಟಿ ಎಂಬುದೊಂದು ಇದೆ. ಗಂಡು ಮತ್ತು ಹೆಣ್ಣು ಇದು ಸೃಷ್ಟಿಯ ನಿಯಮ. ನಾವು ಸೃಷ್ಟಿಯಲ್ಲೇ ಬಂದುಬಿಟ್ಟಿದ್ದೇವೆ. ಸೃಷ್ಟಿಯಿಂದ ಪರಿವರ್ತನೆ ಕಾಲದಲ್ಲಿ ಯಾವುದಕ್ಕೆ ಲಭ್ಯವಾಗುತ್ತದೆ, ಯಾವುದಕ್ಕೆ ಲಭ್ಯವಾಗುವುದಿಲ್ಲ. ಲಭ್ಯವಾಗುವುದಕ್ಕೆ ಒಂದು ಹೆಸರನ್ನು ಕರೆದಿದ್ದಾರೆ, ಲಭ್ಯವಾಗುವಂಥಾದ್ದಕ್ಕೆ ಒಂದು ಹೆಸರು ಕರೆದಿದ್ದಾರೆ. ಲಭ್ಯವಾಗದೇ ಇರತಕ್ಕಂಥಾದ್ದಕ್ಕೆ ಬಂಜೆ ಎಂದು ಕರೆದರೆ, ಅದನ್ನು ಅಪಾರ್ಥ ಮಾಡಿಕೊಳ್ಳುವಂಥಾದ್ದಲ್ಲ. ಈಗ ಒಂದು ಮಾವಿನ ಮರ ಇರುತ್ತದೆ ಅಥವಾ ಒಂದು ಹಸು

ಇರುತ್ತದೆ. ಮಾವಿನ ಮರ ಫಸಲು ಬಿಡುವುದಿಲ್ಲ ಅಥವಾ ಹಸು ಕರುವನ್ನು ಹಾಕುವುದಿಲ್ಲ. ನಾವು ಅದಕ್ಕೇನು ಕರೆಯುತ್ತೇವೆ. ಇದರಲ್ಲಿ ಕ್ರೌರ್ಯಕ್ಕೂ, ಇದಕ್ಕೂ ಏನೂ ಸಂಬಂಧ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಕ್ರೌರ್ಯ ಪದದಲ್ಲೂ ಅಲ್ಲ. ಮತ್ತು ಮಹಿಳೆಯರನ್ನು ಅಪಮಾನಗೊಳಿಸತಕ್ಕಂಥ ಪದವೂ ಅಲ್ಲ. ಇದೊಂದು ಗಾದೆ. ಅದಕ್ಕೆ ನಾವು ಗಾದೆಯನ್ನು ಬದಲಾವಣೆ ಮಾಡಿಕೊಳ್ಳೋಣ. ನಾನು ತಮ್ಮನ್ನೇ ಕೇಳುತ್ತೇನೆ. ಮಕ್ಕಳು ಇಲ್ಲದೇ ಇರತಕ್ಕಂಥ ಮಕ್ಕಳಾಗದೇ ಇರತಕ್ಕಂಥ ಹೆಣ್ಣುಮಕ್ಕಳಿಗೆ ಏನೆಂದು ಕರೆಯಬೇಕು?

ಶ್ರೀಮತಿ ಬಿ.ಟಿ. ಲಿಲತಾನಾಯಕ್ : ಮಕ್ಕಳಿಲ್ಲದವರಿಗೆ ಏನು ಗೊತ್ತು ಮಕ್ಕಳ ನೋವು ಎಂದು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಅದಕ್ಕೆ ಒಂದು ಹೆಸರು ಹೇಳಿ. ಗುಡ್ಡ, ಬೆಟ್ಟ ಎಂದು ಇಲ್ಲವೇ ಹಾಗೆ ಇದಕ್ಕೂ ಒಂದು ಹೆಸರು ಹೇಳಿ.

ಶ್ರೀಮತಿ ಬಿ.ಟಿ. ಲಲಿತಾನಾಯಕ್ : ಹಾಗಾದರೆ ನೀವು ಗಂಡಸರಿಗೂ ಒಂದು ಹೆಸರು ಇಟ್ಟುಬಿಡಿ. ಹೆಂಗಸರಿಗೆ ಬಂಜೆ ಎಂದು ಹೇಳಿದರೆ, ಗಂಡಸರಿಗೆ ಬಂಜ ಎಂದು ಹೇಳಬಹುದಲ್ಲವೇ.

ಶ್ರೀ ವಾಟಾಳ್ ನಾಗರಾಜ್ : ನೀವು ಅದೇ ರೀತಿ ಹೇಳಿ, ನಮ್ಮದೇನೂ ಅಭ್ಯಂತರ ಇಲ್ಲ.

ಮಾನ್ಯ ಸದಸ್ಯರು : ಯಾರಿಂದ ಬಂಜೆಯಾಗಿದ್ದು ಎಂಬುದೂ ಬರುತ್ತದೆ....

ಶ್ರೀ ವಾಟಾಳ್ ನಾಗರಾಜ್ : ನನಗೆ ಎರಡು ಮಕ್ಕಳಿದ್ದಾರೆ, ಆದ್ದರಿಂದ ನನ್ನದೇನೂ ತಕರಾರು ಇಲ್ಲ. ಆದರೆ, ಇಲ್ಲದೇ ಇರುವವರನ್ನು ಬಂಜ ಎಂದಾದರೂ ಕರೆಯಿರಿ, ಏನು ಬೇಕಾದರೂ ಕರೆಯಿರಿ. ಆದ್ದರಿಂದ ಇದಕ್ಕೆ ಏನು ಹೇಳಬೇಕೆಂದು ತಾವು ಹೇಳಿದರೆ;

ಶ್ರೀ ಹೆಚ್. ಶಿವಪ್ಪ : ರೆಡ್ಡಿಯವರಿಗೆ ನೋವಾಗುತ್ತದೆ.

ಉಪಾಧ್ಯಕ್ಷರು : ಅವರಿಗೆ ನೋವಾಗುವ ಹಾಗೆ ನೀವು ಮಾತನಾಡಿದಿರಿ.

ಶ್ರೀ ಹೆಚ್. ಶಿವಪ್ಪ : ವಸ್ತು ಸ್ಥಿತಿಯನ್ನು ನಾನು ವಿವರಣೆ ಮಾಡಿದ್ದೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಕ್ಕಳಾಗದೇ ಇರುವಂತಾದ್ದಕ್ಕೆ ಈಗ ವಿಜ್ಞಾನ ದಾರಿ ತೋರಿಸುತ್ತಿದೆ. ಟೆಸ್ಟ್ ಟ್ಯೂಬ್ ಈಗ ಹಳೇ ಕಾಲದ್ದು ಆಯಿತು. ಈಗ ಕ್ಲೋನಿಂಗ್ ಮಾಡುತ್ತಿದ್ದಾರೆ. ಡಾಲಿ ಬಂತು, ಕುರಿಮರಿ ಬಂತು ಕೋತಿಮರಿ ಮಾಡಿದ್ದಾರೆ. ಮತ್ತೆ ಹಸು ಕರು ಕೂಡ ಬಂದಿದೆ. ತದ್ರೂಪವನ್ನು ಸೃಷ್ಟಿ ಮಾಡುವಂಥಾದ್ದು ನಾವು ಸೃಷ್ಟಿಕರ್ತರ ಮಾತನ್ನು ಹೇಳುತ್ತಿದ್ದೇವೆ. ಈಗ ಮನುಷ್ಯನೇ ಸೃಷ್ಟಿಕರ್ತನಾಗುವುದರಲ್ಲಿ ಬಹಳ ಹತ್ತಿರದಲ್ಲಿದ್ದಾನೆ. ನಾನು ಈಗಾಗಲೇ ತಿಳಿಸಿದ ಹಾಗೆ ಹಸುಕರು ಬಂದಿದೆ, ಕೋತಿ ಮರಿ ಬಂದಿದೆ, ಕುರಿ ಬಂದಿದೆ. ಇವೆಲ್ಲವೂ ಬಂದಿದ್ದಾವೆ. ಮನುಷ್ಯರ

ತದ್ರೂಪು ಯಾವಾಗ ಬರುತ್ತದೋ ಗೊತ್ತಿಲ್ಲ. ಆಗ ಇವೆಲ್ಲಾ ಕೂಡ ಸ್ವಲ್ಪ ವ್ಯತ್ಯಾಸವಾಗುತ್ತದೆ. ಏಕೆಂದರೆ ಈ ವಿಜ್ಞಾನ ನಮ್ಮನ್ನು ಎಲ್ಲೆಲ್ಲಿಗೆ ಕರೆದುಕೊಂಡು ಹೋಗುತ್ತದೋ ಗೊತ್ತಿಲ್ಲ, ನೋಡೋಣ.

ಉಪಾಧ್ಯಕ್ಷರು : ಈಗ ಸದನವನ್ನು ಮುಂದೂಡಲಾಗಿದೆ, ಸದನವು ನಾಳೆ ಬೆಳಿಗ್ಗೆ 10 ಗಂಟೆ ಪುನಃ ಸಮಾವೇಶಗೊಳ್ಳುತ್ತದೆ.

(ಸದನವು ಸಂಜೆ 5 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 9.5.98ನೇ ಶನಿವಾರದಂದು ಬೆಳಿಗ್ಗೆ 10 ಗಂಟೆಗೆ ಸೇರಲು ನಿಶ್ಚಯಿಸಿತು).

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).